

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 25 ಸೋಮವಾರ 2023

ಸಂಪುಟ: 44 | ಸಂಚಿಕೆ: 160 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇಂದು ಪ್ರತಿ ಜಿಲ್ಲೆಯಲ್ಲಿ ಜನತಾ ದರ್ಶನ

- ಮುಖ್ಯಮಂತ್ರಿ ಸಿದ್ದರಾಮಯ್ಯರ ಸೂಚನೆಯಂತೆ ಆಡಳಿತ ಯಂತ್ರ ಸನ್ನದ್ಧ
- ಆಯಾಯ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಅಹವಾಲು ಸ್ವೀಕಾರ
- ಸಾಧ್ಯವಾದರೆ ಸ್ಥಳದಲ್ಲೇ ವಿಲೇವಾರಿ; ಉಳಿದವು ಕಾಲಮಿತಿಯಲ್ಲಿ ಇತ್ಯರ್ಥ



ಬೆಂಗಳೂರು: ಇದೇ ಮೊದಲ ಬಾರಿಗೆ ರಾಜ್ಯಾದ್ಯಂತ ಏಕ ಕಾಲದಲ್ಲಿ ಜನತಾ ದರ್ಶನ ಸೋಮವಾರ ನಡೆಯಲಿದೆ.

ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ನಡೆಯಲಿರುವ ಈ ಮಹತ್ವಾಕಾರಿ ಕಾರ್ಯಕ್ರಮದ ಹೊಣೆಗಾರಿಕೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯ್ತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಮೇಲಿದೆ. ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ಸಾರ್ವಜನಿಕರ ಅಹವಾಲು ಸ್ವೀಕರಿಸುವ ಮತ್ತು ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳುವ ಕಾಳಜಿ ಈ ಜನತಾ ದರ್ಶನದ ಹಿಂದಿದೆ.

ಮುಖ್ಯಮಂತ್ರಿಗಳ ಸೂಚನೆ: ಆಡಳಿತಕ್ಕೆ ಚುರುಕು ಮುಟ್ಟಿಸಿ, ಸರ್ಕಾರಿ ಯಂತ್ರವನ್ನು ಕ್ರಿಯಾಶೀಲಗೊಳಿಸುವ ಪ್ರಯತ್ನವಾಗಿ ನಡೆಸಿದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹತ್ತು ದಿನಗಳ ಹಿಂದೆ ಸೂಚನೆ ನೀಡಿದ್ದರು.

ಖಾತೆ ಬದಲಾವಣೆ, ಜಾತಿ ಪ್ರಮಾಣಪತ್ರ, ಟ್ರಾನ್ಸ್‌ಫಾರ್ಮರ್ ರಿಪೇರಿ, ವಿದ್ಯುತ್ ಕಂಬ ಅಳವಡಿಕೆಯಂತಹ ಸಣ್ಣಪುಟ್ಟ ಕೆಲಸಗಳಿಗೂ ಜನ ನನ್ನ ಬಳಿಗೆ ಬರುತ್ತಿದ್ದಾರೆ. ನಾನು ಜಿಲ್ಲೆಗಳಿಗೆ ಭೇಟಿ ನೀಡಿದಾಗ ಜನರು ಇಷ್ಟು ಸಣ್ಣಪುಟ್ಟ ಕೆಲಸಗಳಿಗೂ ನನ್ನನ್ನು ಹುಡುಕಿಕೊಂಡು ಬರುವಂತಾಗಿದೆ ಎಂದರೆ ನೀವುಗಳಿದ್ದೂ ಏನು ಪ್ರಯೋಜನ ಎಂದು ಸಭೆಯಲ್ಲಿ ಪ್ರಶ್ನಿಸಿದ್ದರು. ಬಳಿಕ ಪ್ರತಿ ಜಿಲ್ಲೆ ಮತ್ತು ತಾಲೂಕುಗಳಲ್ಲೂ ಜನತಾ ದರ್ಶನ ನಡೆಸಬೇಕು ಎಂದು ಸೂಚನೆ ನೀಡಿದ್ದರು. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯ್ತಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾ ರಕ್ಷಣಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಜನತಾ ದರ್ಶನ ನಡೆಸುತ್ತಾರೆ. ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ▶ 8ನೇ ಪುಟಕ್ಕೆ

ತಾಲೂಕು ಮಟ್ಟದಲ್ಲೂ ಜನತಾ ದರ್ಶನ

ನಾಳೆ ಇಡೀ ರಾಜ್ಯಾದ್ಯಂತ ಜಿಲ್ಲಾ ಮಟ್ಟದ ಜನತಾ ದರ್ಶನ ನಡೆದ ಬೆನ್ನಲ್ಲೇ ಪ್ರತಿ ಹದಿನೈದು ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಒಂದು ತಾಲೂಕನ್ನು ಆರಿಸಿಕೊಂಡು ತಾಲೂಕು ಮಟ್ಟದ ಜನತಾ ದರ್ಶನ ಸಭೆ ನಡೆಸಬೇಕು. ಈ ಆದೇಶವನ್ನೂ ಈಗಾಗಲೇ ಮುಖ್ಯಮಂತ್ರಿಗಳ ಸೂಚನೆಯಂತೆ, ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಹೊರಡಿಸಿದ್ದಾರೆ.


ಸಾರ್ವಜನಿಕರು ಪದೇ ಪದೆ ಸಣ್ಣಪುಟ್ಟ ಕೆಲಸಗಳಿಗೂ ಸರ್ಕಾರಿ ಕಚೇರಿಗಳಿಗೆ, ಶಾಸಕರ, ಜಿಲ್ಲಾ ಮಂತ್ರಿಗಳ, ಮುಖ್ಯಮಂತ್ರಿಗಳ ಬಳಿಗೆ ಅಲೆಯುವುದು ಇದರಿಂದ ಸಾಧ್ಯವಾದಷ್ಟು ತಪ್ಪುತ್ತದೆ. ಅರ್ಜಿದಾರರ ದೂರು ಸತ್ಯವಾಗಿದ್ದು, ಯಾವುದೇ ದುರುದ್ದೇಶದಿಂದ ಕೂಡಿರದಿದ್ದರೆ ಅಂತಹ ಅರ್ಜಿಗಳಿಗೆ ಸೂಕ್ತ ಪರಿಹಾರ ಒದಗಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಯನ್ನು ಹೊಣೆಗಾರರನ್ನಾಗಿಸಿ ರಾಜ್ಯ ಸರ್ಕಾರ ಶಿಸ್ತು ಕ್ರಮ ಜರುಗಿಸಲಿದೆ.

ಮೈಸೂರು, ಚಾ.ನಗರ, ಹಾಸನ, ಕೊಡಗಲ್ಲಿ ಜನತಾ ದರ್ಶನಕ್ಕೆ ವ್ಯವಸ್ಥೆ

ಮೈಸೂರು, ಸೆ.24– ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸೆ.25ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನೇತೃತ್ವದಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಾಮರಾಜನಗರದಲ್ಲೂ ಇದೇ ಸಮಯದಲ್ಲಿ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜನತಾ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಇತ್ತ ಕೊಡಗಿನಲ್ಲೂ ಜಿಲ್ಲಾ ಪಂಚಾಯತ್‌ನಲ್ಲಿ ಉಸ್ತುವಾರಿ ಸಚಿವ ಬೋಸರಾಜು ನೇತೃತ್ವದಲ್ಲಿ ಜನತಾ ದರ್ಶನ ನಡೆಯಲಿದೆ. ಹಾಸನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ನೇತೃತ್ವದಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜನತಾ ದರ್ಶನ ಆಯೋಜಿಸಲಾಗಿದೆ.

ಮಂಡ್ಯದಲ್ಲಿ ಮುಂದುವರೆದ ರೈತರ ಹೋರಾಟ

- ಶಾಸಕರಾದ ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ ಭಾಗಿ
- ಶಾಸಕರ ವಿರುದ್ಧ ಆಕ್ರೋಶ



ಶಾಸಕ ದರ್ಶನ್ ಪುಟ್ಟಣ್ಣಯ್ಯ ಪ್ರತಿಭಟನೆಯಲ್ಲಿ ಭಾಗವಹಿಸಿ, ಮಾತನಾಡಿದರು.

ಮಂಡ್ಯ, ಸೆ.24–ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಭಾನುವಾರವೂ ಮುಂದುವರೆದಿದ್ದು, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಎಂದಿನಂತೆ ಬೆಳಗ್ಗೆ 11 ಗಂಟೆಗೆ ನಗರದ ಸರ್‌ಎಂವಿ ಪುತ್ಥಳಿ ಎದುರು ಆರಂಭವಾದ ಧರಣಿ ಸಂಜೆಯವರೆಗೂ ನಡೆಯಿತು. ಈ ವೇಳೆ ಮಾತನಾಡಿದ ಹೋರಾಟಗಾರರು, ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರಿನ ಪ್ರಮಾಣವನ್ನು ಹೆಚ್ಚಿಸುತ್ತಿದ್ದು, ಇದರಿಂದ ನಮ್ಮ ಭಾಗದ ಜನರಿಗೆ ಜಲ ಸಂಕಷ್ಟ ಕಟ್ಟಿಟ್ಟಬುತ್ತಿ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಹೋರಾಟಕ್ಕೆ ಬರುವವರು ರಾಜೀನಾಮೆ ನೀಡಿ ಬನ್ನಿ: ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದ ಶಾಸಕ ನರೇಂದ್ರಸ್ವಾಮಿ ಉದ್ದೇಶಿಸಿ ಕೆಲ ರೈತ ಮುಖಂಡರು, ಅಧಿಕಾರದಲ್ಲಿದ್ದು ನೀರು ಬಿಡಿಸುವುದಾದರೆ ಹೋರಾಟಕ್ಕೆ ಬರಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಇಂಡುವಾಳು ಚಂದ್ರಶೇಖರ್ ಮಾತನಾಡಿ, ನೀರು ಬಿಟ್ಟು ಅಧಿಕಾರದಲ್ಲಿ ಇರುವವರು ನಮಗೆ ಅವಶ್ಯಕತೆ ಇಲ್ಲ. ನಮ್ಮ ಹೋರಾಟಕ್ಕೆ ಬರುವುದಾದರೆ ರಾಜೀನಾಮೆ ಕೊಟ್ಟು ಬನ್ನಿ. ಈ ಹಿಂದೆ ಅಧಿಕಾರದಲ್ಲಿದ್ದಾಗಲೂ ಕಾಂಗ್ರೆಸ್ಸಿಗರು ಬಂದಿದ್ದರು. ನಮ್ಮ ಮುಂದೆ ಬಂದು ಒಂದು ಹನಿ ನೀರು ಬಿಡಲ್ಲ ಅಂದಿದ್ದರು. ನೀರು ಬಿಟ್ಟರೇ ಒಂದು ಕ್ಷಣವೂ ಅಧಿಕಾರದಲ್ಲಿ ▶ 8ನೇ ಪುಟಕ್ಕೆ

ಸೆ.29ರಂದು ಎಕ್ಸ್‌ಪ್ರೆಸ್ ವೇ ಬಂದ್

ಮಂಡ್ಯ: ಮಂಡ್ಯದಲ್ಲಿ ಕಾವೇರಿ ಹೋರಾಟ ದಿನೇ ದಿನೇ ಕಾವೇರುತ್ತಿದ್ದು, ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ಖಂಡಿಸಿ ಮಂಡ್ಯ, ಬೆಂಗಳೂರು ಬಂದ್ ಬಳಿಕ ಎಕ್ಸ್‌ಪ್ರೆಸ್ ವೇ ತಡೆಗೆ ಹೋರಾಟಗಾರರು ನಿರ್ಧರಿಸಿದ್ದು, ಸೆ.29 ಶುಕ್ರವಾರ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಬಂದ್‌ಗೆ ಕರೆ ನೀಡಲಾಗಿದೆ. ಕರ್ನಾಟಕ ರಾಜ್ಯ ರೈತ ಸಂಘದಿಂದ ಬಂದ್ ಕರೆ ನೀಡಿದ್ದು, ಮಂಡ್ಯದಲ್ಲೇ ಎಕ್ಸ್‌ಪ್ರೆಸ್ ವೇ ಬಂದ್ ಮಾಡಲು ರೈತ ಸಂಘ ತೀರ್ಮಾನಿಸಿದೆ. ಶ್ರೀರಂಗಪಟ್ಟಣದ ಗೌರಿಪುರ ಬಳಿ ದಶಪಥ ಹೆದ್ದಾರಿಯಲ್ಲಿ ವಾಹನ ತಡೆದು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದು, ಒಂದೇ ಒಂದು ವಾಹನವೂ ಸಂಚರಿಸದ ರೀತಿ ಬಂದ್ ಮಾಡಲು ಚಿಂತನೆ ನಡೆಸಲಾಗಿದೆ.

ಬೆಂಗಳೂರು ಬಂದ್‌ಗೆ ಬೆಂಬಲ: ಸೆ.26 ಬೆಂಗಳೂರು ಬಂದ್ ಕರೆ ಹಿನ್ನೆಲೆಯಲ್ಲಿ ರೈತ ಹಿತರಕ್ಷಣಾ ಸಮಿತಿ ಮಹತ್ವದ ಸಭೆ ನಡೆಸಿದ್ದು, ಮಂಗಳವಾರ ಹೋರಾಟದ ಸ್ವರೂಪದ ಬಗ್ಗೆ ಚರ್ಚೆ ನಡೆಸಲಾಯಿತು. ನಮಗಾಗಿ ಬೆಂಗಳೂರು ಬಂದ್ ಕರೆ ನೀಡಲಾಗಿದ್ದು, ಅಂದು ಬಂದ್‌ಗೆ ಬೆಂಬಲಿಸುವುದಾಗಿ ಹಿತರಕ್ಷಣಾ ಸಮಿತಿ ತಿಳಿಸಿದ್ದು, ಸೆ.26ರ ಬಂದ್‌ಗೆ ಮಂಡ್ಯದಿಂದ ಹಿತರಕ್ಷಣಾ ಸಮಿತಿ ನಿಯೋಗ ತೆರಳಿ ಬೆಂಬಲ ನೀಡಲಿದೆ.

ವಿರೋಧ ಪಕ್ಷಗಳು ರಾಜಕೀಯ ಮಾಡಬಾರದು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಸಲಹೆ

- ಡಿಎಂಕೆ ಮೈತ್ರಿ ಲಾಭಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ನೀರು ಬಿಡುತ್ತಿಲ್ಲ
- ನಮ್ಮ ವಕೀಲರು, ಅಧಿಕಾರಿಗಳು ಸಮರ್ಥ ವಾದ ಮಾಡಿದ್ದಾರೆ
- ಸರಳ ದಸರಾವಾದರೂ ಎಂದಿನಂತೆ ದೀಪಾಲಂಕಾರ ಇದ್ದೇ ಇರುತ್ತದೆ
- ದಸರಾ ವೇಳೆ ಕಲೆ, ಕ್ರೀಡೆ, ಸಾಹಿತ್ಯಕ್ಕೆ ಜೀವಕಳೆ ನೀಡಲಾಗುವುದು



ಮೈಸೂರು, ಸೆ.24 (ಬಿಎಲ್‌ಯು)–ಕಾವೇರಿ ನೀರಿನ ವಿಚಾರದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ರಾಜಕೀಯ ಮಾಡಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇಂದಿಲ್ಲಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಡಿಎಂಕೆ ಜೊತೆಗಿನ ಮೈತ್ರಿ ಲಾಭಕ್ಕಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿದೆ ಎಂಬ ಆರೋಪವನ್ನು ಇದೇ ವೇಳೆ ಅವರು ನಿರಾಕರಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ನಾಯಕರು ಅಧಿಕಾರದಲ್ಲಿದ್ದವರು, ಅವರಿಗೂ ರಾಜ್ಯದಲ್ಲಿ ಆಡಳಿತ ನಡೆಸಿ ಅನುಭವವಿದೆ. ಅವರಿಗೆ ನ್ಯಾಯಾಲಯದ ಸ್ಥಿತಿಗಳು ಹಾಗೂ ಅನಿವಾರ್ಯತೆಗಳ ಬಗ್ಗೆ ತಿಳಿದಿರುತ್ತದೆ. ಹೀಗಿರುವಾಗ ವಸ್ತುಸ್ಥಿತಿ ಗೊತ್ತಿದ್ದರೂ ಕಾವೇರಿ ನೀರಿನ ವಿಚಾರದಲ್ಲಿ ರಾಜಕೀಯ ಮಾಡಬಾರದು ಎಂದು ಹೇಳಿದರು.

ಕಾವೇರಿ ಜಲಾನಯನ ಪ್ರದೇಶದ ಅಣೆಕಟ್ಟುಗಳ ನೀರಿನ ಲಭ್ಯತೆ, ಬೆಳೆ ಪರಿಸ್ಥಿತಿ, ಕುಡಿಯುವ ನೀರಿನ ಅವಶ್ಯಕತೆ ಸೇರಿದಂತೆ ಹಲವು ವಿಚಾರಗಳನ್ನು ನ್ಯಾಯಾಲಯಕ್ಕೆ ಮನವರಿಕೆ ▶ 8ನೇ ಪುಟಕ್ಕೆ



ಬಿಜೆಪಿ-ಜೆಡಿಎಸ್ ಮೈತ್ರಿ ಬೆನ್ನಲ್ಲೇ
ಯಡಿಯೂರಪ್ಪ ಭೇಟಿ ಮಾಡಿದ ನಿಖಿಲ್



ಬೆಂಗಳೂರು,ಸೆ.24–ಜೆಡಿಎಸ್–ಬಿಜೆಪಿ ಮೈತ್ರಿ ಬೆನ್ನಲ್ಲೇ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು.

ಭೇಟಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ಎನ್‌ಡಿಎ ಮೈತ್ರಿಕೂಟದಲ್ಲಿ ಮುಂಬರುವ ಲೋಕಸಭಾ ಚುನಾವಣೆಗೆ ಜೆಡಿಎಸ್–ಬಿಜೆಪಿ ಜಂಟಿಯಾಗಿ ಚುನಾವಣೆ ಎದುರಿಸಬೇಕಿದೆ. ಜನತೆಯ ಹಿತದೃಷ್ಟಿ ಕಾಪಾಡುವ ನಿಟ್ಟಿನಲ್ಲಿ ದೇವೇಗೌಡರು ಬಿಜೆಪಿ ಜತೆ ಮೈತ್ರಿಗೆ ತೀರ್ಮಾನ ಮಾಡಿದ್ದಾರೆ. ಯುವಕನಾಗಿ, ಜೆಡಿಎಸ್ ಪಕ್ಷದ ಕಾರ್ಯಕರ್ತನಾಗಿ ಯಡಿಯೂರಪ್ಪ ಅವರ ಆಶೀರ್ವಾದ ಪಡೆದುಕೊಳ್ಳುವುದು ನನ್ನ ಜವಾಬ್ದಾರಿ. ಅದಕ್ಕಾಗಿ ಬಂದು ಆಶೀರ್ವಾದ ಪಡೆದುಕೊಂಡಿದ್ದೇನೆ ಎಂದರು.

ಬಿಜೆಪಿಯಲ್ಲಿ ಪ್ರತಿಯೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದು ನಮ್ಮ ಕರ್ತವ್ಯ. ಸೀಟು ಹಂಚಿಕೆ ವಿಚಾರ ಮುಂದಿನ ದಿನಗಳಲ್ಲಿ ಹಿರಿಯರು ಸೇರಿ ಚರ್ಚೆ ಮಾಡುತ್ತಾರೆ ಎಂದು ಹೇಳಿದರು.

ಪ್ರಾದೇಶಿಕ ಪಕ್ಷ ಬೆಳೆಸಬೇಕು: ರಾಜ್ಯ ರಾಜಕಾರಣದಿಂದ ಹಿಂದೆ ಸರಿಯುತ್ತೇನೆ ಎಂದು ನಾನು ಎಲ್ಲೂ ಹೇಳಿಲ್ಲ. ನನ್ನದೇ ಆದ ಜವಾಬ್ದಾರಿ ಇದೆ. ಪ್ರಾದೇಶಿಕ ಪಕ್ಷ ಬೆಳೆಸಬೇಕು ಎಂದು ದೇವೇಗೌಡರು, ಕುಮಾರಸ್ವಾಮಿ ಹಲವು ಕಾರ್ಯಕರ್ತರ ಶ್ರಮದಿಂದ ಕಟ್ಟಿರುವ ಪಕ್ಷ ಜೆಡಿಎಸ್. ನಮ್ಮಂತಹ ಯುವಕರು ಮುಂದಿನ ದಿನಗಳಲ್ಲಿ ಪಕ್ಷದ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಬಿಜೆಪಿ, ಜೆಡಿಎಸ್ ಸೇರಿ 28 ಲೋಕಸಭಾ ಕ್ಷೇತ್ರ ಗೆಲ್ಲುವುದು ಗುರಿ. ಜನರ ವಿಶ್ವಾಸಗಳಿಸಿ 28 ಕ್ಷೇತ್ರವನ್ನು ಗೆಲ್ಲುತ್ತೇವೆ ಎಂದರು. ಮೈತ್ರಿ ಮಾತುಕತೆ ಸಂದರ್ಭದಲ್ಲಿ ಎಚ್.ಡಿ.ರೇವಣ್ಣ ಕುಟುಂಬದವರು ಯಾರು ಇಲ್ಲದೆ ಇರುವ ಕುರಿತ ಪ್ರಶ್ನೆಗೆ, ಈ ವಿಚಾರಕ್ಕೆ ಯಾರೂ ಗೊಂದಲ ಮಾಡಿಕೊಳ್ಳುವುದು ಬೇಡ. ರೇವಣ್ಣ ಅವರು ದೆಹಲಿಯಲ್ಲಿ ಇದ್ದರು. ಹೊಳೆನರಸೀಪುರದಲ್ಲಿ ಕಾರ್ಯಕ್ರಮ ಇತ್ತು. ಅದಕ್ಕೆ ಮೈತ್ರಿ ಸಂದರ್ಭದಲ್ಲಿ ಭಾಗಿಯಾಗಲು ಆಗಿಲ್ಲ ಎಂದು ಸ್ಪಷ್ಟಪಡಿಸಿದರು.

ಪಕ್ಷದ ತೀರ್ಮಾನವೇ ಅಂತಿಮ: ಮಂಡ್ಯ ಚುನಾವಣೆಯ ಬಗ್ಗೆ ಮಾತನಾಡಲು ಇದು ಸರಿಯಾದ ಸಮಯವಲ್ಲ. ಮುಂದಿನ ದಿನಗಳಲ್ಲಿ ಪಕ್ಷ ಏನು ತೀರ್ಮಾನ ತೆಗೆದುಕೊಳ್ಳುತ್ತೆ ನೋಡೋಣ ಎಂದು ಅವರು ಹೇಳಿದರು.

> “ನಿಖಿಲ್ ಕುಮಾರಸ್ವಾಮಿ ಭೇಟಿಯಲ್ಲಿ ವಿಶೇಷತೆ ಏನಿಲ್ಲ. ಸೌಹಾರ್ದಯುತ ಭೇಟಿ ಮಾಡಿದ್ದರು. ಕುಮಾರಸ್ವಾಮಿ ಅವರೂ ಕರೆ ಮಾಡಿದ್ದರು. ಮನೆಗೆ ಬಂದು ಹೋಗಿ ಎಂದು ಹೇಳಿದ್ದಾರೆ. ಸದ್ಯದಲ್ಲೇ ಹೋಗುತ್ತೇನೆ. ಕುಮಾರಸ್ವಾಮಿ ಅವರ ಮನೆಗೆ ಹೋಗಿ ಮಾತನಾಡಿಸಿಕೊಂಡು ಬರುತ್ತೇನೆ. ಹೇಗೂ ನಮ್ಮ ಜತೆ ಅವರು ಹೊಂದಾಣಿಕೆ ಆಗಿದ್ದಾರೆ. ನಾವೆಲ್ಲರೂ ಒಟ್ಟಾಗಿ ಹೋಗಬೇಕಿದೆ.
> **–ಯಡಿಯೂರಪ್ಪ, ಮಾಜಿ ಸಿಎಂ.**

> “ಬಿಜೆಪಿ, ಜೆಡಿಎಸ್ ಮೈತ್ರಿ ಒಳ್ಳೆಯ ಬೆಳವಣಿಗೆ. ಚುನಾವಣಾ ಮುನ್ನ ಈ ಬೆಳವಣಿಗೆ ಆಗಿದ್ದರೆ 135 ಸ್ಥಾನದಲ್ಲಿ ನಾವು ಗೆಲ್ಲುತ್ತಿದ್ದೆವು. ಈಗ ಅದಕ್ಕೆ ಸೂಕ್ತ ಸಮಯ ಬಂದಿದೆ. 28 ಕ್ಷೇತ್ರ ಗೆಲ್ಲುವ ದೃಷ್ಟಿಯಿಂದ ಪಕ್ಷದ ವರಿಷ್ಠರು, ದೇವೇಗೌಡರು ಮತ್ತು ಕುಮಾರಸ್ವಾಮಿ ಜತೆ ಚರ್ಚೆ ಮಾಡಿ ಒಟ್ಟಾಗಿ ಹೋಗುವ ನಿರ್ಧಾರ ಮಾಡಿದ್ದಾರೆ.ಮೈತ್ರಿ ಶಾಶ್ವತವಾಗಿರಲಿದೆ. **–ಮುನಿರತ್ನ, ಶಾಸಕ.**

ಇಂದು ಸಿಂಧುವಳ್ಳಿ ನೆನಪು ಕಾರ್ಯಕ್ರಮ



ಮೈಸೂರು,ಸೆ.24(ಜಿಎ)–ಡಾ.ಸಿಂಧುವಳ್ಳಿ ಅನಂತಮೂರ್ತಿ ಅವರ 25ನೇ ವರ್ಷದ ಸ್ಮರಣಾರ್ಥ ಕಲಾ ಸುರುಚಿ ವತಿಯಿಂದ ಸೆ.25ರಂದು ಸಿಂಧುವಳ್ಳಿ ನೆನಪು ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಪ್ರೊ.ಸಿ.ವಿ.ಶ್ರೀಧರ ಮೂರ್ತಿ ತಿಳಿಸಿದರು.


ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೂ ಕುವೆಂಪುನಗರದಲ್ಲಿರುವ ಸುರುಚಿ ರಂಗ ಮನೆಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದು, ಮೊದಲು ಗುಬ್ಬಿ ಕಂಪನಿ ಕಲಾವಿದ ವಿದ್ವಾನ್ ಎಚ್.ಎಂ.ಪುಟ್ಟಣ್ಣಯ್ಯ ಅವರು ರಂಗಗೀತೆಗಳನ್ನು ಹಾಡಲಿದ್ದಾರೆ. ನಂತರ ನಾನು ಸಿಂಧುವಳ್ಳಿ ನೆನಪು ಮೆಲುಕು ಹಾಕಲಿದ್ದೇನೆ. ರಂಗ ಚಿಂತಕ ಯತೀಶ್ ಎನ್.ಕೊಳ್ಳೇಗಾಲ ಕನ್ನಡ ರಂಗಭೂಮಿ ಇತ್ತೀಚಿನ ಒಲವುಗಳು ಕುರಿತು ಚರ್ಚಿಸಲಿದ್ದಾರೆ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಾಗರಾಜ್, ಉಮೇಶ್ ಉಪಸ್ಥಿತರಿದ್ದರು.

ಪೈಥಾನ್, ಜಾವಾ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಸೆ.24– ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ವಿಭಾಗದ ವತಿಯಿಂದ ಪೈಥಾನ್ ಹಾಗೂ ಜಾವಾ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಹಾಗೂ ನಂತರದ ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು, ಕಲಿಯಲು ಆಸಕ್ತರಿರುವವರು ಈ ತರಬೇತಿಯ ಫಲಾನುಭವಿಗಳಾಗಿರುತ್ತಾರೆ. ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ನಡೆಯಲಿರುವ ಈ ತರಗತಿಗಳಿಗೆ ನೋಂದಾಯಿಸಲು ಸೆಪ್ಟೆಂಬರ್ 30 ಕಡೆಯ ದಿನವಾಗಿರುತ್ತದೆ. ಅರ್ಜಿಗಳಿಗಾಗಿ ಸಂಪರ್ಕಿಸಿ ಎಸ್‌ಎಸ್‌ಐಟಿ ಸಲ್ಯೂಷನ್ಸ್, ರಾಮಕೃಷ್ಣನಗರ. ಹೆಚ್ಚಿನ ಮಾಹಿತಿಗಾಗಿ 8310306882 ಅಥವಾ 9964790442 ಸಂಪರ್ಕಿಸಬಹುದು.


ನಿಧನ

ಚೊಟ್ಟಂಡ ಉತ್ತಪ್ಪ



ಮೈಸೂರು, ಸೆ.24–ಮೈಸೂರು ವಿಜಯನಗರ 4ನೇ ಹಂತದ, ಕೆನರಾ ಬ್ಯಾಂಕ್ ಹಿಂದಿನ (2ನೇ ಫೇಸ್, ನಂ.2808) ನಿವಾಸಿ ಚೊಟ್ಟಂಡ ಉತ್ತಪ್ಪ ಇಂದು ಬೆಳಗ್ಗೆ ನಿಧನರಾದರು. ಮೃತರು ಪುತ್ರ ಚೆಂಗಪ್ಪ ಸೇರಿದಂತೆ ಇಬ್ಬರು ಪುತ್ರರು, ಅಪಾರ ಬಂಧುವರ್ಗ, ಸ್ನೇಹಿತರ ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ರಾಜಶೇಖರನ್ ಚೆಟ್ಟಿಯಾರ್



ಕೈಗಾರಿಕೋದ್ಯಮಿ ಹಾಗೂ ಬೃಂದಾವನ ಬಡಾವಣೆ ನಿವಾಸಿ ಕೆ.ರಾಜಶೇಖರನ್ ಚೆಟ್ಟಿಯಾರ್ (81) ಇಂದು ಬೆಳಗ್ಗೆ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆ, ಮೊಮ್ಮಕ್ಕಳು ಮತ್ತು ಅಪಾರ ಬಂಧುವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಸೆ.25) ಹುಣಸೂರಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಎಸ್.ಸತ್ಯವತಿ



ದಿವಂಗತ ಆರ್.ವಿ.ಶಂಕರ್ ಅವರ ಪತ್ನಿ ಆರ್.ಎಸ್.ಸತ್ಯವತಿ (ಮೀನಾಕ್ಷಿ) ಅವರು ಕಳೆದ ರಾತ್ರಿ ಸುದೀರ್ಘ ಅನಾರೋಗ್ಯದ ಹಿನ್ನೆಲೆಯಲ್ಲಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 79 ವರ್ಷ ವಯಸ್ಸಾಗಿತ್ತು. ಮೃತರು ಮೈಸೂರಿನ ಕೃಷ್ಣಮೂರ್ತಿಪುರಂ 5ನೇ ಕ್ರಾಸ್ ನಿವಾಸಿಯಾಗಿದ್ದು, ಪುತ್ರರಾದ ಆರ್.ಎಸ್.ರಮೇಶ್, ಆರ್.ಎಸ್.ಸತ್ಯನಾರಾಯಣ, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಲ್ಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರೋಕ್ಯ ಮೇರಿ



ಮೈಸೂರಿನ ಎನ್.ಆರ್.ಮೊಹಲ್ಲಾ (ನಂ.31, 12ನೇ ಕ್ರಾಸ್, ಸೆಂಟ್ ಮೇರಿಸ್ ರಸ್ತೆ) ನಿವಾಸಿ ಆರೋಕ್ಯ ಮೇರಿ(56) ಅವರು ಇಂದು ಬೆಳಗ್ಗೆ ನಿಧನರಾದರು. ಇವರು ಇಬ್ಬರು ಪುತ್ರಿಯರು, ಅಪಾರ ಬಂಧುವರ್ಗ, ಸ್ನೇಹಿತರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಸೆ.25) ಮಹದೇವಪುರ ರಸ್ತೆಯಲ್ಲಿರುವ ಗಾಂಧಿನಗರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ಹೇಳಿವೆ.

ವಸತಿ ಶಾಲೆಯ ಪ್ರತಿ ವಿದ್ಯಾರ್ಥಿ ಮೇಲೂ ಶಿಕ್ಷಕರು ನಿಗಾ ಇಡಬೇಕು

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಾಕೀತು

- ವೈಚಾರಿಕ, ವೈಜ್ಞಾನಿಕ ಶಿಕ್ಷಣ ಬೆಳಕು ನೀಡುತ್ತದೆ
- ಶೇಕಡ 100ರಷ್ಟು ಸಾಕ್ಷರತೆ ಸಾಧ್ಯವಾಗಿಲ್ಲ
- ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡಬೇಕು
- ವಸತಿನಿಲಯಗಳಲ್ಲಿ ಸ್ವಚ್ಛತೆ ಕಾಪಾಡಬೇಕು

ಮೈಸೂರು,ಸೆ.24(ಬಿಎಲ್‌ಯು)–ವಸತಿ ಶಾಲೆಯಲ್ಲಿ ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೆ ಶಿಕ್ಷಕರು ಸದಾ ನಿಗಾ ಇಡಬೇಕು. ಮಕ್ಕಳ ಕಲಿಕೆಯ ದೌರ್ಬಲ್ಯ ಪತ್ತೆ ಹಚ್ಚಿ ಅವರನ್ನು ಪರಿಣಾಮಕಾರಿಯಾಗಿ ತಯಾರು ಮಾಡಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಾಕೀತು ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಪ್ರಾಂಶುಪಾಲರು ಹಾಗೂ ವಸತಿನಿಲಯ ಮೇಲ್ವಿಚಾರಕರಿಗೆ ಆಯೋಜಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕಲಿಕೆಯ ಮಟ್ಟ ಕಡಿಮೆ ಇದ್ದರೆ ಉತ್ಸಾಹದಿಂದ ಪಾಠ ಕಲಿಯುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಈ ಮೂಲಕ ತಯಾರು ಮಾಡಿದ ಮಕ್ಕಳು ಬೌದ್ಧಿಕವಾಗಿ ಪ್ರೌಢಿಮೆ ಹೊಂದಿದರೆ ಸಮಾಜದಲ್ಲಿ ಉತ್ತಮ ಜೀವನ ಕಟ್ಟಿಕೊಳ್ಳಲು ಅವರಿಗೆ ಸಹಾಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ ಮೇಲೆ ಶಿಕ್ಷಕರು ಸದಾ ನಿಗಾ ಇಟ್ಟಿರಬೇಕು ಎಂದು ಡಾ.ಮಹದೇವಪ್ಪ ಹೇಳಿದರು.

ಆರ್ಥಿಕ ಮತ್ತು ಸಾಮಾಜಿಕ ಶೋಷಣೆಗೊಳಗಾದ ಮಕ್ಕಳು ಹೆಚ್ಚಾಗಿ ವಸತಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಾರೆ. ಆದರೆ ಜ್ಞಾನ ಎಂಬುದು ಯಾರದೋ ಒಬ್ಬರ ಸ್ವತ್ತಲ್ಲ. ಈ ಹಿನ್ನೆಲೆಯಲ್ಲಿ ವಸತಿನಿಲಯದ ಮಕ್ಕಳಿಗೆ ಉತ್ತಮ ವ್ಯವಸ್ಥೆಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಇದು ನಮ್ಮ ಸರ್ಕಾರದ ಧ್ಯೇಯೋದ್ದೇಶವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಶಿಕ್ಷಕರು ಅತ್ಯಂತ ಜವಾಬ್ದಾರಿ, ಹೊಣೆಗಾರಿಕೆ ಹಾಗೂ ಬದ್ಧತೆಯಿಂದ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂದು ತಾಕೀತು ಮಾಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಶೇ.8ರಷ್ಟು ಸಾಕ್ಷರತೆ ಇತ್ತು. 1964ರಲ್ಲಿ ಸುಬ್ರಹ್ಮಣ್ಯ ಆಯೋಗದ ಶಿಫಾರಸ್ಸಿನಂತೆ ಜಾರಿಗೊಳಿಸಿದ ಶಿಕ್ಷಾ ನೀತಿಯಿಂದ ಶೇ.50 ರಷ್ಟು ಏರಿಕೆಯಾಯಿತು. ತರುವಾಯ 1984ರಲ್ಲಿ ಕೊಠಾರಿಯ ಆಯೋಗದ ಶಿಫಾರಸ್ಸಿನಂತೆ ಜಾರಿಗೊಳಿಸಿದ ಶಿಕ್ಷಣದಿಂದ ಈಗ ಶೇ.75ರಷ್ಟು ಸಾಕ್ಷರತೆ ಇದೆ. ಆದರೂ ಸ್ವಾತಂತ್ರ್ಯ ಗಳಿಸಿ 75 ವರ್ಷವಾದರೂ ಶೇ.100ರಷ್ಟು ಸಾಕ್ಷರತೆ ಸಾಧಿಸಲು ಸಾಧ್ಯವಾಗಿಲ್ಲ. ಶಾಲೆಯಿಂದ ಹೊರ ಹೋಗುವವರನ್ನು ತಡೆಯಲು ಸಾಧ್ಯವಾಗುತ್ತಿಲ್ಲ ಎಂದು ಡಾ.ಮಹದೇವಪ್ಪ ಬೇಸರ ವ್ಯಕ್ತಪಡಿಸಿದರು.

ಮೊರಾರ್ಜಿ ದೇಸಾಯಿ ಇತರೆ ಸಾಧಕರ ಹೆಸರಿನಲ್ಲಿ ಸ್ಥಾಪನೆಯಾಗಿರುವ ವಸತಿ ಶಾಲೆಗಳಿಂದ ಸ್ವಲ್ಪ ಮಟ್ಟಿಗೆ ಸಾಕ್ಷರತೆ ಹೆಚ್ಚಿದೆ. ಅದರಲ್ಲೂ ಶೋಷಣೆಗೆ ಒಳಗಾಗಿರುವ ಮಕ್ಕಳಿಗೆ ಶಿಕ್ಷಣ ದೊರೆಯುತ್ತಿದೆ. ಕರ್ನಾಟಕದಲ್ಲಿ 870 ವಸತಿ ಶಾಲೆಗಳಿದ್ದು, ಇದರಲ್ಲಿ 553 ಪರಿಶಿಷ್ಟ ಜಾತಿಯವರ ವಸತಿ ಶಾಲೆಗಳು, 175 ಪರಿಶಿಷ್ಟ ಪಂಗಡದವರ ವಸತಿ ಶಾಲೆಗಳು ಹಾಗೂ 120 ಹಿಂದುಳಿದ ವರ್ಗದ ವಸತಿ ಶಾಲೆಗಳು ಹಾಗೂ ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ ಎಂದು ಡಾ.ಹೆಚ್.ಸಿ.ಮಹದೇವಪ್ಪ ಅಂಕಿ ಅಂಶಗಳ ವಿವರ ನೀಡಿದರು.

ವಸತಿನಿಲಯಗಳಲ್ಲಿ ಸಾವಯವ ಕೃಷಿಯಿಂದ ಸೊಪ್ಪು, ತರಕಾರಿ ಬೆಳೆಯಬೇಕು. ದೈಹಿಕ ಸಾಮರ್ಥ್ಯ ಹೆಚ್ಚಿಸುವ ಪೌಷ್ಟಿಕಾಂಶಯುಕ್ತ ಆಹಾರವನ್ನು ಮಕ್ಕಳಿಗೆ ನೀಡಬೇಕು. ವಸತಿನಿಲಯಗಳಲ್ಲಿ ಸ್ವಚ್ಛತೆ ಪಾಲನೆ ಮಾಡಬೇಕು ಎಂದು ಡಾ.ಮಹದೇವಪ್ಪ ಸೂಚನೆ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ನಿಲಯ ಪಾಲಕರು ಮಕ್ಕಳನ್ನು ನೈಜ ಪೋಷಕರಂತೆ ನೋಡಿಕೊಳ್ಳಬೇಕು. ಈ ಮೂಲಕ ಮಾನಸಿಕ ಹಾಗೂ ದೈಹಿಕವಾಗಿ ಸದೃಢರನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಲಹೆಗಾರ ಬಸವರಾಜ್ ದೇವನೂರು, ಡಾ.ತುಕಾರಾಂ, ಸಂಪನ್ಮೂಲ ವ್ಯಕ್ತಿ ಹೇಮಚಂದ್ರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಯೋಜನಾ ನಿರ್ದೇಶಕ ಮುನಿರಾಜು ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಪ್ರಾಂಶುಪಾಲರು ಹಾಗೂ ವಸತಿನಿಲಯ ಮೇಲ್ವಿಚಾರಕರಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

> “ಸಂವಿಧಾನದ ತತ್ವಾದರ್ಶದಂತೆ ಶಿಕ್ಷಣ ನೀಡಿದರೆ ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾರಿ ಹೆಚ್ಚುತ್ತದೆ. ಇದರಿಂದ ಸಹಜವಾಗಿಯೇ ಒಳ್ಳೆಯ ಸಮಾಜ ನಿರ್ಮಾಣವಾಗುತ್ತದೆ. ಸಂವಿಧಾನದ ನಿಯಮದಂತೆ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರ ಶಿಕ್ಷಣ ಪ್ರತಿಯೊಬ್ಬರ ಹಕ್ಕು ಎಂಬ ಕಾನೂನು ಜಾರಿಗೊಳಿಸಿದೆ. ವೈಚಾರಿಕ ಹಾಗೂ ವೈಜ್ಞಾನಿಕ ಶಿಕ್ಷಣ ಬೆಳಕಿನೆಡೆಗೆ ಕರೆದೊಯ್ಯುತ್ತದೆ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಶಿಕ್ಷಣದ ಮಹತ್ವವನ್ನು ಸಾರಿ ಹೇಳಿದ್ದಾರೆ.
> **–ಡಾ.ಹೆಚ್.ಸಿ.ಮಹದೇವಪ್ಪ, ಸಚಿವ**



ಮೈಸೂರಿನ ರಾಮಕೃಷ್ಣನಗರದಲ್ಲಿ 27ನೇ ವರ್ಷ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ ಸನ್ನಿಧಿಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಕೃಷ್ಣಕುಮಾರ್ ಸಾಗರ್ ಅವರನ್ನು ಜಿ ಬ್ಲಾಕ್ ಗಣಪತಿ ದೇವಸ್ಥಾನದ ಸಮಿತಿ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಜವರಪ್ಪ, ಮೂರ್ತಿ, ಸ್ವಾಮಿ, ಮಾಸ್ಟರ್ ಹರೀಶ, ಚಂದ್ರು, ಮಹದೇವ್, ಮಣಿವಣ್ಣನ್, ಕೆಂಪೇಗೌಡ್ರು, ಅರಸು, ಶಂಕರ್, ರಾಜು, ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಇಂದು ಉಚಿತ ಆರೋಗ್ಯ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು,ಸೆ.24–ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಸೆ.25ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸಾಯಿರಂಗ ವಿದ್ಯಾಸಂಸ್ಥೆಯಲ್ಲಿ ಉಚಿತ ಆರೋಗ್ಯ ತಪಾಸಣೆ, ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9916155453 ಸಂಪರ್ಕಿಸಿ.

ದಸರಾ ಕವಿಗೋಷ್ಠಿಗೆ ಕವನಗಳ ಆಹ್ವಾನ

ಮೈಸೂರು, ಸೆ.24– ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ಅ.15ರಂದು ರಾಜ್ಯ ಮಟ್ಟದ ‘ದಸರಾ ಕವಿಗೋಷ್ಠಿ’ಯನ್ನು ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ನಾಡಿನ ಆಸಕ್ತ ಕವಿ–ಕವಯತ್ರಿಯರಿಂದ ಕವನಗಳ ಆಹ್ವಾನಿಸಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ತಿಳಿಸಿದ್ದಾರೆ.

ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವ ಯಾವುದೇ ವಯೋಮಾನದ ಆಸಕ್ತ ಕವಿ–ಕವಯಿತ್ರಿಯರು ಯಾವುದೇ ವಸ್ತು ವಿಷಯ ಕುರಿತು ರಚಿಸಿದ, ತಮ್ಮ ಸ್ವ–ರಚಿತ 20 ಸಾಲುಗಳ ಮಿತಿಯೊಳಗಿನ ಎರಡು ಕವಿತೆಗಳು, ಗಜಲ್‌ಗಳನ್ನು ಅಥವಾ 6 ಸಾಲಿನ ಮಿತಿಯೊಳಗಿನ ಆರು ಚುಟುಕು, ಹನಿಗವಿತೆಗಳನ್ನು ಸಂಘಟಕರಿಗೆ ಕಳುಹಿಸಿಕೊಡಬೇಕು.

ಆಯ್ಕೆಯಾದ ಕವಿತೆಗಳ ಕವಿಗಳಿಗೆ ರಾಜ್ಯ ಮಟ್ಟದ ದಸರಾ ಕವಿಗೋಷ್ಠಿಯಲ್ಲಿ ಕವನ ವಾಚಿಸಲು ಅವಕಾಶ ಮಾಡಿಕೊಡಲಾಗುವುದು. ಜೊತೆಗೆ ಭಾಗವಹಿಸುವ ಎಲ್ಲಾ ಕವಿಗಳಿಗೂ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

ಆಸಕ್ತ ಕವಿಗಳು ಅಕ್ಟೋಬರ್ 2 ರೊಳಗೆ ತಲುಪುವಂತೆ ಸ್ವರಚಿತ ಎರಡು ಕವಿತೆಗಳನ್ನು ತಮ್ಮ ಸಂಕ್ಷಿಪ್ತ ಪರಿಚಯದೊಂದಿಗೆ ಟಿ. ಸತೀಶ್ ಜವರೇಗೌಡ, ವಿಸ್ಮಯ ಬುಕ್ ಹೌಸ್, 442/10, ಕೃಷ್ಣ ಬೇಕರಿ ಬಿಲ್ಡಿಂಗ್, ರಾಮಸ್ವಾಮಿ ಸರ್ಕಲ್, ಮೈಸೂರು–570004– ಈ ವಿಳಾಸಕ್ಕೆ ಕಳುಹಿಸಬೇಕು. ಮಾಹಿತಿಗಾಗಿ ದೂರವಾಣಿ 98802 64678 ಸಂಪರ್ಕಿಸಬಹುದು.

ಸೆ.28, 29 ನಾಡಿ ಪರೀಕ್ಷೆ

ಮೈಸೂರು,ಸೆ.24–ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಸೆ.28 ಮತ್ತು 29ರಂದು ನಾಡಿ ಪರೀಕ್ಷೆ ಹಾಗೂ ಸ್ಪೈನ್ ಕೇರ್ ಶಿಬಿರವನ್ನು ಸೆ.18ರಿಂದ ಅ.1ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 98861 86580, 9880259787 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು, ಸೆ.24–ಡಾ. ಶಂಕರನಾರಾಯಣಪ್ಪ ಅವರ ಮಾರ್ಗದರ್ಶನದಲ್ಲಿ ಕೆ.ಆರ್. ರಾಘವೇಂದ್ರ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾವೇರಿ ವಿವಾದ; ಮೈಸೂರಲ್ಲಿ ಇಂದಿನಿಂದ ನಿರಂತರ ಹೋರಾಟ



ಮೈಸೂರು,ಸೆ.24–ಕಾವೇರಿ ನದಿ ನೀರು ಉಳಿಸಲು ಎಲ್ಲಾ ಸಂಘ–ಸಂಸ್ಥೆಗಳು ಒಗ್ಗೂಡಿ ಸೋಮವಾರದಿಂದ ನಗರದಲ್ಲಿ ಹೋರಾಟ ಪ್ರಾರಂಭಿಸಲು ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಹಮ್ಮಿಕೊಂಡಿದ್ದ ಕಾವೇರಿ ಕ್ರಿಯಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ನಗರದ ಕಾಡಾ ಕಚೇರಿ ಆವರಣ, ಕೆ.ಆರ್.ವೃತ್ತ, ಗಾಂಧಿ ಚೌಕ ಮುಂತಾದ ಕಡೆಗಳಲ್ಲಿ ಹೋರಾಟ ನಡೆಸುವ ಕುರಿತು ಚರ್ಚೆ ನಡೆಯಿತು. ಬಹುತೇಕರು ಸರ್ಕಾರದ ಗಮನ ಸೆಳೆಯಲು ಕೆ.ಆರ್. ವೃತ್ತದಲ್ಲಿ ಹೋರಾಟ ನಡೆಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕೆಆರ್‌ಎಸ್ ಜಲಾಶಯ ನಿರ್ಮಾಣ ಮಾಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಹೋರಾಟ ಪ್ರಾರಂಭಿಸಲು ನಿರ್ಧರಿಸಲಾಯಿತು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ನದಿ ನೀರು ಉಳಿಸಲು ನಾವು ನಡೆಸುವ ಹೋರಾಟ ಕಠಿಣವಾಗಿರಬೇಕು. ಶಾಂತಿಯುತವಾಗಿರಬೇಕು. ಎಲ್ಲರೂ ಪಕ್ಷಭೇದ ಮರೆತು ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.


ಕಾವೇರಿ ಕ್ರಿಯಾ ಸಮಿತಿ ಸದಸ್ಯ ಮೂಗೂರು ನಂಜುಂಡಸ್ವಾಮಿ ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಘೋರ ಅನ್ಯಾಯವಾಗಿದೆ. ಹೋರಾಟವನ್ನು ವಿವಿಧ ಸಂಘಟನೆಗಳು ನಾನಾ ಕಡೆಗಳಲ್ಲಿ ನಡೆಸದೆ ಒಟ್ಟಾಗಿ ಒಂದೆಡೆ ನಡೆಸೋಣ. ಈ ರೀತಿ ಮಾಡಿದರೆ ಹೋರಾಟಕ್ಕೆ ಬಲ ಬರುತ್ತದೆ ಎಂದು ಹೇಳಿದರು.

ಸಮಿತಿ ಸದಸ್ಯ ತುಳಸೀರಾಮ್ ಮಾತನಾಡಿ, ಕಾವೇರಿ ನದಿ ನೀರು ಹಂಚಿಕೆ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಕಾವೇರಿ ವಿಚಾರವನ್ನು ಅಂತಾರಾಜ್ಯ ನದಿ ನೀರು ಹಂಚಿಕೆಗಳ ವ್ಯಾಜ್ಯದ ವ್ಯಾಪ್ತಿಗೆ ತಂದರೆ ಮಾತ್ರ ನಮಗೆ ನ್ಯಾಯ ದೊರೆಯಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರಯತ್ನ ಆಗಬೇಕು. ಬ್ರಿಟಿಷರ ಕಾಲದಲ್ಲಿ ರೂಪಿಸಿದ ನಿಯಮಾವಳಿ ಪ್ರಕಾರವೇ ಇಂದಿಗೂ ನೀರು ಹಂಚಿಕೆಯಾಗುತ್ತಿದೆ. ಈ ವಿಚಾರದಲ್ಲಿ ವಾದ ಮಂಡಿಸಲು ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಭೆಯಲ್ಲಿ ಸಮಿತಿ ಸದಸ್ಯರಾದ ಜಯಪ್ರಕಾಶ್, ಸುರೇಶ್‌ಗೌಡ, ಹನುಮಂತೇಶ್, ಮುಖಂಡ ಮಹದೇವಸ್ವಾಮಿ, ಕೋದಂಡರಾಮು, ಸೋಸಲೆ ಸಿದ್ದರಾಜು, ಸಿದ್ದಲಿಂಗಪ್ಪ, ಮಂಜುನಾಥ್, ಮಲ್ಲಣ್ಣ, ನಿಂಗರಾಜು, ಇಂದಿರಾ, ಕಮಲಾಬಾಯಿ, ಗಿರಿಧರ್, ಸಿದ್ದೇಗೌಡ, ಬಾಲಕೃಷ್ಣ ಇತರರು ಪಾಲ್ಗೊಂಡಿದ್ದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 96.80 ಅಡಿ	ಇಂದಿನ ಮಟ್ಟ 2,274.70 ಅಡಿ	ಇಂದಿನ ಮಟ್ಟ 2,855.94 ಅಡಿ
ಹಿಂದಿನ ವರ್ಷದ ಮಟ್ಟ 124.32 ಅಡಿ	ಹಿಂದಿನ ವರ್ಷದ ಮಟ್ಟ 2,282.99 ಅಡಿ	ಹಿಂದಿನ ವರ್ಷದ ಮಟ್ಟ 2,857.64 ಅಡಿ
ನಿನ್ನೆಯ ಮಟ್ಟ 96.90 ಅಡಿ	ನಿನ್ನೆಯ ಮಟ್ಟ 2,275.01 ಅಡಿ	ನಿನ್ನೆಯ ಮಟ್ಟ 2,856.41 ಅಡಿ
ಇಂದಿನ ಒಳಹರಿವು 6,156 ಕ್ಯುಸೆಕ್	ಇಂದಿನ ಒಳಹರಿವು 3,061 ಕ್ಯುಸೆಕ್	ಇಂದಿನ ಒಳಹರಿವು 992 ಕ್ಯುಸೆಕ್
ಇಂದಿನ ಹೊರಹರಿವು 6,874 ಕ್ಯುಸೆಕ್	ಇಂದಿನ ಹೊರಹರಿವು 4,890 ಕ್ಯುಸೆಕ್	ಇಂದಿನ ಹೊರಹರಿವು 2,800 ಕ್ಯುಸೆಕ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.9.2023 ಸೋಮವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ,
ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಉತ್ತರ ಆಷಾಢ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30ರಿಂದ 6.40ರವರೆಗೆ, ವಾಚನ: ವಿದುಷಿ ವಸಂತ ವೆಂಕಟೇಶ್, ವ್ಯಾಖ್ಯಾನ: ವಿ.ನಿರಂಜನ, ಸಂಜೆ 6.45ರಿಂದ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯ, ಪಂಡಿತ್ ರಾಕೇಶ್ ಚೌರಾಷಿಯ ಅವರಿಂದ ಕೊಳಲು ಮತ್ತು ಬಾನ್ಸುರಿ ಜುಗಲ್‌ಬಂದಿ, ವಿದ್ವಾನ್ ಗಿರಿಧರ್–ಘಟಂ, ಪಂಡಿತ್ ಓಜಸ್–ತಬಲ, ಸ್ಥಳ: 8ನೇ ಕ್ರಾಸ್, ವಿವಿ.ಮೊಹಲ್ಲಾ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ–ಹತ್‌ಕರ್ಗ–2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ:** ಮೂತ್ರಪಿಂಡ ರೋಗ ತಪಾಸಣಾ ಶಿಬಿರ, ಮೂತ್ರಪಿಂಡ ತಜ್ಞ ಡಾ. ಅರುಣ್ ಕೆ.ಜಿ. ಅವರ ನೇತೃತ್ವ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆಯಿಂದ.

■ **ಸಂಧ್ಯಾ ಸುರಕ್ಷಾ ಟ್ರಸ್ಟ್, ಶ್ರೀ ಶಾಕಾಂಭರಿ ಧಾರ್ಮಿಕ ಕೇಂದ್ರ:** ಶಾಕಾಂಭರಿ ಧಾರ್ಮಿಕ ಶ್ರದ್ಧಾ ಕೇಂದ್ರ, ಹಿರಿಯರ ನೆಮ್ಮದಿ ಕೇಂದ್ರ (ವೃದ್ಧಾಶ್ರಮ), ಧಾರ್ಮಿಕ ಕಾರ್ಯಗಳಾದ ವೇದಪಾಠ, ಯೋಗಾ, ಪ್ರವಚನ ತರಗತಿ, ಭಾರತ್ ಮಾತಾ ರಾಷ್ಟ್ರ ಧ್ವಜಕಟ್ಟೆಯ ಉದ್ಘಾಟನೆ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ರಘುರಾಂ ವಾಜಪೇಯಿ, ಪುಷ್ಪ ಅಯ್ಯಂಗಾರ್, ಅಂಶಿ ಪ್ರಸನ್ನಕುಮಾರ್, ಎನ್.ಶ್ರೀನಿವಾಸ ಕಲ್ಯಾಣ ಭವನ, ರವೀಂದ್ರ, ಸ್ಥಳ: ದೇವಯ್ಯನಹುಂಡಿ, ಹುಣಸೇಮರ ಬಸ್ ನಿಲ್ದಾಣ, ಮಧ್ಯಾಹ್ನ 12 ಗಂಟೆಗೆ.

■ **ಕೂಡಲ ಸಂಗಮದೇವ ಗೃಹ ನಿರ್ಮಾಣ ಸಹಕಾರ ಸಂಘ:** 2022–2023 ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಗಾನಭಾರತಿ ವೀಣೆಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ.

■ **ರಂಗಾಯಣ:** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ತೀರ್ಥಹಳ್ಳಿಯ ಯಕ್ಷಭೂಮಿ, ಯಕ್ಷಗಾನ ಅಧ್ಯಯನ ಕೇಂದ್ರದ ಗುರುಗಳಿಂದ ಶೈಲೇಶ್ ತೀರ್ಥೇಶ್ ಮಾರ್ಗದರ್ಶನದಲ್ಲಿ ಸಿದ್ಧಗೊಂಡಿರುವ ‘ಯಕ್ಷರಂಗ’ ಯಕ್ಷಗಾನ ಪ್ರಾತ್ಯಕ್ಷಿಕೆ, ಸ್ಥಳ: ಬಿ.ವಿ.ಕಾರಂತ ರಂಗಚಾವಡಿ, ಸಂಜೆ 6.30ಕ್ಕೆ.

■ **ಶಾರದಾ ವಿಲಾಸ್ ಕಾಲೇಜ್ ಆಫ್ ಫಾರ್ಮಸಿ:** ವಿಶ್ವ ಫಾರ್ಮಾಸಿಸ್ಟ್‌ಗಳ ದಿನಾಚರಣೆ–2023, ವಿಷಯ: ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸುವ ಫಾರ್ಮಾಸಿಸ್ಟ್‌ಗಳು, ಉದ್ಘಾಟನೆ: ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು, ಮುಖ್ಯ ಅತಿಥಿ: ಶಾರದಾ ವಿಲಾಸ್ ಶೈಕ್ಷಣಿಕ ಸಂಸ್ಥೆಯ ಕಾರ್ಯದರ್ಶಿ ಎನ್.ಚಂದ್ರಶೇಖರ್, ಸ್ಥಳ: ಪ್ರೊ.ಚಿನ್ನಸ್ವಾಮಿಶೆಟ್ಟಿ ಕಾನ್‌ಫರೆನ್ಸ್ ಹಾಲ್, ಕಾಲೇಜು, ಬೆಳಗ್ಗೆ 10 ಗಂಟೆಗೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಐಕ್ಯೂಎಸಿ ಅಂಡ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್:** ಆನ್‌ಲೈನ್ ಸರ್ಟಿಫಿಕೇಟ್ ಕೋರ್ಸ್‌ಗಳ ಬಗ್ಗೆ ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಕಾಲೇಜಿನ ಆಡಿಟೋರಿಯಂ, ಬೆಳಗ್ಗೆ 11.30ಕ್ಕೆ.

■ **ಶ್ರೀರಾಮ ಮಂದಿರ:** ತಿಪಟೂರು ತಾಲೂಕಿನ ಬಳುವನೆರಲು ಗ್ರಾಮದ ಉಡಸಲಮ್ಮ ದೇವಿ ಉತ್ಸವ ಮೂರ್ತಿ ಆಗಮನ, ವಿಶೇಷ ಪೂಜೆ, ಉತ್ಸವ, ಸ್ಥಳ: ರಾಮಮಂದಿರ, ಜಯನಗರ, ಸಂಜೆ 7 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಅಂಚೆ–ಅಂಕನ–ಪ್ರಾಯೋಜಿತ ಆಕಾಶವಾಣಿ ಅಂಕಣ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಹೆಚ್.ವಿ.ನಾಗರಾಜರಾವ್, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 8.30 ಚಿತ್ರಗೀತೆಗಳು, 9.05 ನೆನಪಿನಂಗಳ– ಆಕಾಶವಾಣಿಯ ನಿವೃತ್ತ ನಿಲಯ ಕಲಾವಿದೆ, ಹಿರಿಯ ಶಾಸ್ತ್ರೀಯ ಹಾಡುಗಾರ್ತಿ ಟಿ.ನಾಗಮ್ಮ ಅವರೊಂದಿಗೆ ಜಿ.ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿದ್ದ ಸಂವಾದ, 10.00 ಲಯಸಂಭ್ರಮ: ಪರಿಕಲ್ಪನೆ ಹಾಗೂ ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ, 12.45 ನಮ್ಮ ಆರೋಗ್ಯ: ವಿಶ್ವ ಹೃದಯ ದಿನದ ಸಂಬಂಧವಾಗಿ ಯುವಜನರಲ್ಲಿ ಹೃದಯದ ತೊಂದರೆಗಳು ಕುರಿತು ಡಾ.ಶ್ಯಾಮ್‌ಪ್ರಸಾದ್ ಶೆಟ್ಟಿ ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ– ಜಯಂತಿ ವಿ.ಭಟ್, 3.00 ಯು.ಶ್ರೀನಿವಾಸ್–ಮ್ಯಾಂಡೋಲಿನ್. **ಸಂಜೆ:** 4.00 ಮಹಿಳಾರಂಗ: ‘ಡಾಕ್ಟರ್ ಸಮಯ’ ಭಾಗವಹಿಸುವವರು–ಡಾ.ಆರ್.ಸಿ.ಮೈತ್ರೇಯಿ, ವಿಷಯ–ಕೂದಲಿನ ಆರೋಗ್ಯ ಮತ್ತು ಬಾಲನೆರೆ, 4.45 ಹಿಂದಿ ಪಾಠ: ಶಾಂತಾ ಡಿ.ಕಿಣಿ, 6.00 ‘ಅಂಚೆ–ಅಂಕನ’–ಪ್ರಾಯೋಜಿತ ಆಕಾಶವಾಣಿ ಅಂಕಣ, 6.50 ಕೃಷಿರಂಗ: “ಹಣ್ಣು ಹೊನ್ನು” ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ. **ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು ಹಳೇಪುರ ತಂಬೂರಿ ಮಾದಶೆಟ್ಟಿ ಮತ್ತು ಸಂಗಡಿಗರು, ಪ್ರಸ್ತುತಿ–ಅಬ್ದುಲ್ ರಶೀದ್.

ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ ಸರಣಿ ಜಯ



ಇಂದೋರ್, ಸೆ.24– ಶ್ರೇಯಸ್ ಅಯ್ಯರ್ ಹಾಗೂ ಶುಭ್‌ಮನ್ ಗಿಲ್ ಅವರ ಭರ್ಜರಿ ಶತಕಗಳ ನೆರವಿನಿಂದ ಭಾರತ ಆಸ್ಟ್ರೇಲಿಯಾ ವಿರುದ್ಧ 99 ರನ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ ಭಾರತ 3 ಪಂದ್ಯಗಳ ಏಕದಿನ ಸರಣಿಯನ್ನು ಇನ್ನೂ ಒಂದು ಪಂದ್ಯ ಬಾಕಿ ಇರುವಂತೆಯೇ 2–0 ಅಂತರದಿಂದ ತನ್ನದಾಗಿಸಿಕೊಂಡಿದೆ.

ಇಲ್ಲಿನ ಹೋಳ್ಕರ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಋತುರಾಜ್ ಗಾಯಕ್ವಾಡ್ 8 ರನ್‌ಗಳಿಸಿ ನಿರ್ಗಮಿಸಿದರು. ಈ ವೇಳೆ ಒಂದಾದ ಶುಭ್‌ಮನ್ ಗಿಲ್ ಹಾಗೂ ಶ್ರೇಯಸ್ ಅಯ್ಯರ್ 2ನೇ ವಿಕೆಟ್‌ಗೆ ದ್ವಿಶತಕ(200)ದ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಆಸೀಸ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಇವರಿಬ್ಬರು ಶತಕ ಸಿಡಿಸಿ ಸಂಭ್ರಮಿಸಿದರು. ತಂಡದ ಮೊತ್ತ 216 ರನ್ ಆಗಿದ್ದ ವೇಳೆ 90ಎಸೆತಗಳಲ್ಲಿ 11 ಬೌಂಡರಿ, 3 ಸಿಕ್ಸರ್ ಒಳಗೊಂಡ 105 ರನ್ ಗಳಿಸಿ ಶ್ರೇಯಸ್ ಅಯ್ಯರ್ ನಿರ್ಗಮಿಸಿದರು. ಇವರ ಹಿಂದೆಯೇ ಶತಕ ಸಿಡಿಸಿ ಉತ್ತಮವಾಗಿ ಆಡುತ್ತಿದ್ದ ಗಿಲ್ 97 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಒಳಗೊಂಡ 104 ರನ್ ಗಳಿಸಿ ಔಟಾದರು. ನಂತರ ಬಂದ ಇಶನ್ ಕಿಶನ್ ಬಿರುಸಿನ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ನಾಯಕ ಕೆ.ಎಲ್.ರಾಹುಲ್ ಹಾಗೂ ಸೂರ್ಯಕುಮಾರ್ ಯಾದವ್ ರನ್ ಗತಿ ಹೆಚ್ಚಿಸಿದರು. ಪಂದ್ಯದಲ್ಲಿ ಅಬ್ಬರಿಸಿದ ರಾಹುಲ್ ತಲಾ 3 ಬೌಂಡರಿ, ಸಿಕ್ಸರ್ ಒಳಗೊಂಡ 52 ಹಾಗೂ ಮಿಂಚಿನ ಬ್ಯಾಟಿಂಗ್ ನಡೆಸಿದ ಸೂರ್ಯಕುಮಾರ್ ಯಾದವ್ ತಲಾ 6 ಸಿಕ್ಸರ್, ಬೌಂಡರಿ ಒಳಗೊಂಡ 72ರನ್ ಗಳಿಸಿ ಅಜೇಯರಾಗುಳಿದರು. ಉಳಿದಂತೆ ರವೀಂದ್ರ ಜಡೇಜಾ 13ರನ್ ಗಳಿಸಿದರು. ಅಂತಿಮವಾಗಿ ಭಾರತ ನಿಗದಿತ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 399 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಆಸ್ಟ್ರೇಲಿಯಾ ಪರ ಕ್ಯಾಮರೂನ್ ಗ್ರೀನ್ 2, ಆಡಂ ಜಂಪಾ, ಅಬೋಟ್ ಹಾಗೂ ಹೇಜಲ್‌ವುಡ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಭಾರತ ನೀಡಿದ 400 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಆರಂಭದಲ್ಲೇ ಮ್ಯಾಥ್ಯೂ ಶಾರ್ಟ್ 9 ರನ್ ಹಾಗೂ ಸ್ಟೀವ್ ಸ್ಮಿತ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ಡೇವಿಡ್ ವಾರ್ನರ್ ಹಾಗೂ ಮಾರ್ನಸ್ ಲಬುಶೇನ್ ಜೊತೆಯಾಟದಿಂದ ಚೇತರಿಸಿಕೊಂಡಿತು.

ಆಸ್ಟ್ರೇಲಿಯಾ 9 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 52 ರನ್ ಗಳಿಸಿದ್ದ ವೇಳೆ ಮಳೆ ಸುರಿದ ಕಾರಣ ತಾತ್ಕಾಲಿಕವಾಗಿ ಪಂದ್ಯ ಸ್ಥಗಿತಗೊಳಿಸಲಾಗಿತ್ತು. ಬಳಿಕ ಡಕ್‌ವರ್ತ್ ಲೂಯಿಸ್ ನಿಯಮದನ್ವಯ ಆಸ್ಟ್ರೇಲಿಯಾಗೆ 33 ಓವರ್‌ನಲ್ಲಿ 317 ರನ್ ಟಾರ್ಗೆಟ್ ನೀಡಿ ಪಂದ್ಯ ಆರಂಭಿಸಲಾಯಿತು. ಈ ವೇಳೆ ಡೇವಿಡ್ ವಾರ್ನರ್ ಹಾಗೂ ಮಾರ್ನಸ್ ಲಬುಶೇನ್ ಕೆಲ ಉತ್ತಮ ಹೊಡೆತಗಳಿಂದ ರನ್ ಗತಿ ಹೆಚ್ಚಿಸಿದರಾದರೂ ಆರ್.ಅಶ್ವಿನ್ ದಾಳಿಗೆ ಇಳಿಯುತ್ತಿದ್ದಂತೆ ಆಸ್ಟ್ರೇಲಿಯಾ ಪತನ ಆರಂಭಗೊಂಡಿತು. ಈ ವೇಳೆ 27 ರನ್ ಗಳಿಸಿದ್ದ ಲಬುಶೇನ್‌ಗೆ ಹಾಗೂ 53 ರನ್ ಸಿಡಿಸಿದ ವಾರ್ನರ್‌ಗೆ ಅಶ್ವಿನ್ ಪೆವಿಲಿಯನ್ ದಾರಿ ತೋರಿಸಿದರು. ನಂತರ ಬಂದ ಜೋಶ್ ಇಂಗ್ಲೀಸ್ 6, ಅಲೆಕ್ಸ್ ಕ್ಯಾರಿ 14, ಕ್ಯಾಮರೂನ್ ಗ್ರೀನ್ 19 ಹಾಗೂ ಆಡಂ ಜಂಪಾ 5ರನ್ ಗಳಿಸಿ ಔಟಾದರು. ಅಂತಿಮ ಓವರ್‌ಗಳಲ್ಲಿ ಬಿರುಸಿನ ಬ್ಯಾಟಿಂಗ್ ನಡೆಸಿದ ಸೀನ್ ಅಬಾಟ್ ಹಾಫ್ ಸೆಂಚುರಿ ಸಿಡಿಸಿ ಮಿಂಚಿದರು. ಇತ್ತ ಜೋಶ್ ಹೇಜಲ್‌ವುಡ್ 23 ರನ್ ಸಿಡಿಸಿ ಔಟಾದರು. ಇದರ ಬೆನ್ನಲ್ಲೇ ಸೀನ್ ಅಬಾಟ್ 53 ರನ್ ಸಿಡಿಸಿ ಔಟಾದರು. ಇದರೊಂದಿಗೆ ಆಸ್ಟ್ರೇಲಿಯಾ 28.2 ಓವರ್‌ಗಳಲ್ಲಿ 217ರನ್‌ಗೆ ಆಲೌಟ್ ಆಯಿತು. ಭಾರತದ ಪರ ರವಿಚಂದ್ರನ್ ಅಶ್ವಿನ್ ಹಾಗೂ ರವಿಂದ್ರ ಜಡೇಜಾ ತಲಾ 3, ಪ್ರಸಿದ್ಧ ಕೃಷ್ಣ 2, ಮೊಹಮ್ಮದ್ ಶಮಿ 1 ವಿಕೆಟ್ ಉರುಳಿಸಿದರು. ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಶ್ರೇಯಸ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಇತ್ತೀಚೆಗೆ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಅಪಘಾತದಲ್ಲಿ ಕಾಲು ಕಳೆದುಕೊಂಡ ಪೌರಕಾರ್ಮಿಕ ಮಹದೇವ್ ಅವರಿಗೆ ಮೈಸೂರು ಅಥ್ಲೆಟ್ಸ್ ಕ್ಲಬ್ ಸದಸ್ಯರು ಪೌರ ಕಾರ್ಮಿಕರ ದಿನಾಚರಣೆ ಹಿನ್ನೆಲೆಯಲ್ಲಿ 35ಸಾವಿರ ರೂ. ನೆರವಿನ ಚೆಕ್ ನೀಡಿದರು.

ಕನ್ನಡದಲ್ಲಿ ವೈದ್ಯ ವಿಜ್ಞಾನ ಸಾಹಿತ್ಯ ಹೆಚ್ಚು ಪ್ರಕಟಗೊಳ್ಳಬೇಕು

- ಕುವೆಂಪು ಭಾಷಾ ಭಾರತೀ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್
- ಡಾ.ಯೋಗಣ್ಣರ 'ಆಧ್ಯಾತ್ಮಿಕ ಆರೋಗ್ಯ ದರ್ಶನ' ಕುರಿತು ವಿಚಾರ ಸಂಕಿರಣ

ಮೈಸೂರು,ಸೆ.24(ಪಿಎಂ)– ಕನ್ನಡದಲ್ಲಿ ವೈದ್ಯ ವಿಜ್ಞಾನ ಸಾಹಿತ್ಯ ಹೆಚ್ಚು ಪ್ರಕಟಗೊಳ್ಳುವ ಅಗತ್ಯವಿದೆ ಎಂದು ಹಿರಿಯ ವಿದ್ವಾಂಸರೂ ಆದ ಕುವೆಂಪು ಭಾಷಾ ಭಾರತೀ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ ಹೇಳಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಆಶ್ರಮ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಜಂಟಿ ಆಶ್ರಯದಲ್ಲಿ ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ ಅವರ ಕನ್ನಡ ಸಾಹಿತ್ಯ ಅಕಾಡೆಮಿ ಪುರಸ್ಕೃತ ಗ್ರಂಥ 'ಆಧ್ಯಾತ್ಮಿಕ ಆರೋಗ್ಯ ದರ್ಶನ' ಕುರಿತು ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ವೈದ್ಯ ವಿಜ್ಞಾನದ ಸಾಹಿತ್ಯ ಸಾಕಷ್ಟು ಪ್ರಕಟಗೊಳ್ಳುತ್ತಿದೆ. ಅದು ಇನ್ನಷ್ಟು ಹೆಚ್ಚಾಗುವ ಅಗತ್ಯವಿದೆ. ಪತ್ರಿಕೆಗಳಲ್ಲಿ ವೈದ್ಯ ವಿಜ್ಞಾನದ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಾಗುತ್ತಿದೆ. ಸುದ್ದಿ ವಾಹಿನಿಗಳಲ್ಲಿಯೂ ವೈದ್ಯ ಲೋಕದ ಬಗ್ಗೆ ವಿಶೇಷ ಕಾರ್ಯಕ್ರಮಗಳು ಪ್ರಸಾರಗೊಳ್ಳುತ್ತಿವೆ. ಇದು ಉತ್ತಮ ಬೆಳವಣಿಗೆಯಾಗಿದ್ದು, ಇದರಿಂದ ಜನಸಾಮಾನ್ಯರಿಗೆ ಸರಳವಾಗಿ ವೈದ್ಯ ವಿಜ್ಞಾನ ಅರ್ಥವಾಗಲಿದ್ದು, ಆ ಮೂಲಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಲಿದೆ ಎಂದು ತಿಳಿಸಿದರು.



ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ 'ಆಧ್ಯಾತ್ಮಿಕ ಆರೋಗ್ಯ ದರ್ಶನ' ಗ್ರಂಥ ಕುರಿತು ಭಾನುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಉದ್ಘಾಟಿಸಲಾಯಿತು.

ವೈದ್ಯ ವಿಜ್ಞಾನದಲ್ಲಿ ನಾನು ಸ್ವಲ್ಪ ಮಟ್ಟಿಗೆ ಕೆಲಸ ಮಾಡಿದ್ದೇನೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ಅಧ್ಯಕ್ಷನಾಗಿದ್ದಾಗ ಕೆಲವರು ವೈದ್ಯ ವಿಜ್ಞಾನದ ಗ್ರಂಥಗಳನ್ನು ಬರಿಯಬೇಕೆಂದು ಪ್ರಾಧಿಕಾರ ಸಂಪರ್ಕಿಸಿದ್ದರು. ಇದಕ್ಕೆ ನಾನು ಅವಕಾಶ ಕಲ್ಪಿಸಿದೆ. ಆದರೆ ಪ್ರಾಧಿಕಾರದ ಸಲಹಾ ಮಂಡಳಿ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ್ದರು. ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತಗೊಂಡಿರುವ ಪ್ರಾಧಿಕಾರದಲ್ಲಿ ಸಾಹಿತ್ಯ ಪ್ರಕಟಣೆ ಸೂಕ್ತವೇ ಹೊರತು ವಿಜ್ಞಾನವಲ್ಲ ಎಂದು ಪ್ರತಿಪಾದಿಸಿ, ಇದು ಅವಿವೇಕವಲ್ಲವೇ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು. ಇದಕ್ಕೆ ನಾನು, ಸಾಹಿತ್ಯ ಮತ್ತು ವಿಜ್ಞಾನ ಮಾನವನ ಎರಡು ಕಣ್ಣುಗಳು ಎಂದು ರಾಷ್ಟ್ರಕವಿ ಕುವೆಂಪು ಅವರೇ ಹೇಳಿದ್ದಾರೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟೆ ಎಂದರು.

ನಂತರ ವೈದ್ಯ ವಿಜ್ಞಾನ ಪ್ರಕಟಿಸಲು ಸಪ್ನ ಬುಕ್ ಹೌಸ್‌ಗೆ ಪ್ರಾಧಿಕಾರದಿಂದ ಯೋಜನೆ ನೀಡಲಾಯಿತು. ನಾನು ಅದರ ಭಾಷಿಕ ಸ್ವರೂಪ ಮತ್ತು ಪರಿಭಾಷಿಕ ವಿಷಯದಲ್ಲಿ ಕೆಲಸ ಮಾಡಿದೆ. ಇದರಿಂದ ವೈದ್ಯ ವಿಜ್ಞಾನ ಸಂಬಂಧ 15 ಪುಸ್ತಕಗಳನ್ನು ಪ್ರಕಟಿಸಲು ಸಾಧ್ಯವಾಯಿತು ಎಂದು ತಿಳಿಸಿದರು.

ಆಧ್ಯಾತ್ಮ ಮತ್ತು ವೈದ್ಯ ವಿಜ್ಞಾನದಲ್ಲಿ ನಾನು ಪರಿಣತನಲ್ಲ. ಭಾರತೀಯ ತತ್ವಶಾಸ್ತ್ರ ಎಂಬ ಗ್ರಂಥವನ್ನು ಅನುವಾದ ಮಾಡಿದ್ದೇನೆ. ಅಲ್ಲದೇ 'ಕೃಷ್ಣಕಥೆಯ ಉಗಮ ಮತ್ತು ವಿಕಾಸ' ವಿಷಯ ಕುರಿತು ನನ್ನ ಪಿಹೆಚ್.ಡಿ ಅಧ್ಯಯನಕ್ಕಾಗಿ ವೇದ ಉಪನಿಷತ್ತುಗಳು ಕೂಡ ಓದಿದ್ದೇನೆ. ಆದರೆ ಯಾವುದನ್ನು ನಾನು ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಲು ಸಾಧ್ಯವೋ ಅಷ್ಟು ಮಾಡಿದ್ದೇನೆ ಎಂದು ಹೇಳಿದರು.

ಇಲ್ಲಿ ಉಪಸ್ಥಿತರಿರುವ ಹಿರಿಯ ವಿದ್ವಾಂಸ ಡಾ.ಜಿ.ರಾಮಕೃಷ್ಣ ಅವರು ಆಧ್ಯಾತ್ಮದ ಬಗ್ಗೆ ಆಳವಾಗಿ ಅರ್ಥ ಮಾಡಿಕೊಂಡಿದ್ದಾರೆ. ಅಲ್ಲದೆ, ಸಾಹಿತ್ಯ ಹಾಗೂ ವಿಜ್ಞಾನವನ್ನೂ ಅರಗಿಸಿಕೊಂಡಿದ್ದಾರೆ. ಅಂತೆಯೇ ಡಾ.ಸಿ. ಆರ್.ಚಂದ್ರಶೇಖರ್ ಅವರು ಪ್ರವೇಶಿಸದ ವೈದ್ಯಶಾಸ್ತ್ರದ ಯಾವುದೇ ವಿಚಾರಗಳಿಲ್ಲ. ಈ ಹಿಂದೆ ಡಾ.ಎಸ್.ಪಿ.ಯೋಗಣ್ಣ ಅವರು ವೈದ್ಯ ವಿಜ್ಞಾನದ ವಿಶ್ವಕೋಶದ ಜವಾಬ್ದಾರಿ ವಹಿಸಿಕೊಂಡು ಸಮರ್ಥವಾಗಿ ನಿಭಾಯಿಸಿದ್ದಾರೆ ಎಂದರು.

ಕೃತಿ ಕರ್ತೃವೂ ಆದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ನನ್ನಲ್ಲಿ ವೈಜ್ಞಾನಿಕ ಆಧ್ಯಾತ್ಮದ ಕಿಡಿ ಹಚ್ಚಿದವರು ಸ್ವಾಮಿ ವಿವೇಕಾನಂದರು. ಪ್ರಸ್ತುತ ಆಧ್ಯಾತ್ಮ ಎಂದರೆ ಪೂಜೆ, ಪುನಸ್ಕಾರವಷ್ಟೇ ಎಂಬ ಮೌಢ್ಯ ಅಂಟಿಕೊಂಡಿದೆ. ಹೀಗಾಗಿ ನಿಜವಾದ ಆಧ್ಯಾತ್ಮದ ಬೆಳಕು ನಮಗೆ ಸಿಗಲು ಸಾಧ್ಯವಾಗುತ್ತಿಲ್ಲ. ಆಧ್ಯಾತ್ಮದ ಆಲೋಚನೆಗಳಿಗೆ ಮನಸ್ಸು ಪ್ರಧಾನವಾಗುತ್ತದೆ ಎಂದು ತಿಳಿಸಿದರು.

ಮನುಷ್ಯರ ಪ್ರತಿ ಕೆಲಸವನ್ನೂ ಮನಸ್ಸು ನಿರ್ಧರಿಸುತ್ತದೆ. ಇದೇ ನಕಾರಾತ್ಮಕ–ಸಕಾರಾತ್ಮಕ ಚಿಂತನೆ, ಯೋಚನೆ ಮೂಡಿಸುತ್ತದೆ. ಮನಸ್ಸಿನ ಆರೋಗ್ಯದಲ್ಲಿ ಸಂತೋಷ ಅಡಗಿದೆ. ಸಕಾರಾತ್ಮಕ ಕೆಲಸ, ಆಲೋಚನೆಯಿಂದ ದೇಹದಲ್ಲಿ ಸಂತೋಷ ಉಂಟಾಗುತ್ತದೆ. ಅದೇ ರೀತಿ ಅಸಂತೋಷದಿಂದ ಇದಕ್ಕೆ ವ್ಯತಿರಿಕ್ತವಾದ ಪ್ರಕ್ರಿಯೆಗಳು ದೇಹದಲ್ಲಿ ನಡೆಯುತ್ತವೆ ಎಂದು ವಿಶ್ಲೇಷಿಸಿದರು.

ಕೃತಿ ಕುರಿತು ಹಿರಿಯ ವೈದ್ಯ ಸಾಹಿತಿಯೂ ಆದ ಖ್ಯಾತ ಮನೋರೋಗ ತಜ್ಞ ಡಾ.ಸಿ. ಆರ್.ಚಂದ್ರಶೇಖರ್ ಹಾಗೂ ಹಿರಿಯ ವಿದ್ವಾಂಸ ಡಾ.ಜಿ.ರಾಮಕೃಷ್ಣ ಮಾತನಾಡಿದರು. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮತ್ತಿತರರು ಹಾಜರಿದ್ದರು.

ಆರೋಗ್ಯ, ನೈರ್ಮಲ್ಯಕ್ಕಾಗಿ ವಾಕಥಾನ್: ನೂರಾರು ಮಂದಿ ಭಾಗಿ



ಮೈಸೂರು, ಸೆ.24(ಎಂಟಿವೈ)– ಅಂತರರಾಷ್ಟ್ರೀಯ ಸೂಕ್ಷ್ಮ ಜೀವಿ ದಿನದ ಅಂಗವಾಗಿ ಆಂಟಿಬಯೋಟಿಕ್ ಪ್ರತಿರೋಧ, ಆರೋಗ್ಯ ಮತ್ತು ನೈರ್ಮಲ್ಯಕ್ಕಾಗಿ ಘೋಷಣೆಯೊಂದಿಗೆ ಭಾನುವಾರ ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ವಾಕಥಾನ್‌ನಲ್ಲಿ 300ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಮೈಕ್ರೋಬಯಾಲಜಿ ಹಾಗೂ ಲೈಫ್ ಸೈನ್ಸ್ ವಿಭಾಗವು ಜಗದ್ಗುರು ಶ್ರೀ ಡಾ.ರಾಜೇಂದ್ರ ಮಹಾಸ್ವಾಮಿ ಅವರ 108ನೇ ಜಯಂತಿ ಅಂಗವಾಗಿ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂದೆ ಬೆಳಗ್ಗೆ ಎಸ್ಪಿ ಸೀಮಾ ಲಾಟ್ಕರ್ ವಾಕಥಾನ್‌ಗೆ ಚಾಲನೆ ನೀಡಿದರು. ಇದಕ್ಕೂ ಮುನ್ನ ಎಸ್ಪಿ ಸೀಮಾ ಲಾಟ್ಕರ್ ಮಾತನಾಡಿ, ಅಂತರರಾಷ್ಟ್ರೀಯ ಸೂಕ್ಷ್ಮಜೀವಿಗಳ ದಿನದ ಹಿನ್ನೆಲೆಯಲ್ಲಿ ಜನರಲ್ಲಿ ಸೂಕ್ಷ್ಮ ಜೀವಿಗಳು ಜಾಗೃತಿ ಮೂಡಿಸಲು ವಾಕಥಾನ್ ಆಯೋಜಿಸಿರುವುದು ಶ್ಲಾಘನೀಯ. ಈ ಕುರಿತು ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಇನ್ನಷ್ಟು ಆಯೋಜಿಸಬೇಕು. ಆ ಮೂಲಕ ಜನಸಾಮಾನ್ಯರಿಗೂ ಸೂಕ್ಷ್ಮ ಜೀವಿಗಳ ಬಗ್ಗೆ ತಿಳಿವಳಿಕೆ ಮೂಡಿಸಬೇಕು ಎಂದು ಸಲಹೆ ನೀಡಿದರು.

ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ವಾಕಥಾನ್ ಹಾರ್ಡಿಂಜ್ ವೃತ್ತ, ಬಿ.ಎನ್.ರಸ್ತೆ ಮೂಲಕ ಗನ್‌ಹೌಸ್, ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ವೃತ್ತದ ಮೂಲಕ ಮತ್ತೆ ಬಿ.ಎನ್.ರಸ್ತೆ, ಹಾರ್ಡಿಂಜ್ ವೃತ್ತದ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣ ತಲುಪಿ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರ ಮಠ, ಪರೀಕ್ಷಾ ನಿಯಂತ್ರಕರು, ಡಾ. ಸುಧೀಂದ್ರ ಭಟ್, ಡೀನ್ (ಶೈಕ್ಷಣಿಕ) ಡಾ. ವಿಶಾಲ್ ಕುಮಾರ್ ಗುಪ್ತಾ, ಮತ್ತು ಲೈಫ್ ಸೈನ್ಸಸ್ ವಿಭಾಗದ ಮುಖ್ಯಸ್ಥ ಡಾ. ಕೆ.ಎ.ರವೀಶ, ಡಾ. ಪಿ.ಅಶ್ವಿನಿ, ಡಾ. ಆನ್ ಕ್ಯಾಥರೀನ್ ಆರ್ಚರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪೇಜಾವರ ಶ್ರೀಗಳಿಂದ ಶ್ರೀರಾಮತಾರಕ ಯಜ್ಞ, ಶ್ರೀ ಮದ್ಭಾಗವತ ಉದ್ಯಾಪನಾ ಯಾಗ



ಮೈಸೂರು,ಸೆ.24(ಪಿಎಂ)– ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರ 36ನೇ ಚಾತುರ್ಮಾಸ್ಯ ವ್ರತದ ಪ್ರಯುಕ್ತ ನಡೆದ ದಶಕೋಟಿ ರಾಮಮಂತ್ರ ಜಪಯಜ್ಞದ ಪರಿಸಮಾಪ್ತಿಯಾಗಿ ಭಾನುವಾರ ಮೈಸೂರಿನ ಸರಸ್ವತಿಪುರಂನ ಶ್ರೀಕೃಷ್ಣಧಾಮದಲ್ಲಿ ಶ್ರೀಗಳು ಶ್ರೀರಾಮತಾರಕ ಯಜ್ಞ ಮತ್ತು ಶ್ರೀ ಮದ್ಭಾಗವತ ಉದ್ಯಾಪನಾ ಯಾಗ ನಡೆಸಿದರು.

ಈ ಯಾಗಗಳ ಪೂರ್ಣಾಹುತಿಯಲ್ಲಿ ಪಾಲ್ಗೊಂಡ ಶ್ರೀಗಳು, ದಶಕೋಟಿ ರಾಮ ಜಪದ ಸಮರ್ಪಣೆ ರೂಪದಲ್ಲಿ ಯಾಗ ನಡೆದಿದೆ. ಶ್ರೀರಾಮ ಮತ್ತು ಶ್ರೀಕೃಷ್ಣನು ಕಲಿಯುಗಕ್ಕೆ ಅತ್ಯಂತ ಆಪ್ತವಾದ ಭಗವಂತನ ರೂಪಗಳು. ಅನನ್ಯ ಭಕ್ತಿಯಿಂದ ನಿತ್ಯ ತಮ್ಮನ್ನು ಜಪಿಸುವವರ ಯೋಗಕ್ಷೇಮಗಳ ಜವಾಬ್ದಾರಿ ತಮ್ಮದೆಂದು ಶ್ರೀರಾಮಚಂದ್ರ, ಶ್ರೀಕೃಷ್ಣ ಅಭಯ ಪ್ರಧಾನ ಮಾಡಿದ್ದಾರೆ. ಅವರ ಆರಾಧನೆ ಯಜ್ಞದ ರೂಪದಲ್ಲಿ ಇಂದು ನಡೆದಿದೆ ಎಂದು ಹೇಳಿದರು.

ಈ ಯುಗದಲ್ಲಿ ನಾವೆಲ್ಲಾ ಮಾಡುವ ಅಪರಾಧ ಸಹಸ್ರಾರು. ಕೇವಲ ರಾಮ ಮತ್ತು ಕೃಷ್ಣರ ನಾಮಜಪ ಮತ್ತು ಸ್ಮರಣೆ ಮಾತ್ರದಿಂದ ಅವುಗಳ ಪರಿಹಾರವಾಗಿ ಸಕಲ ಶ್ರೇಯಸ್ಸು ಸಿದ್ಧಿಸಲಿದೆ. ಅದರಂತೆ ದಶಕೋಟಿ ರಾಮಜಪ ಯಜ್ಞ ಮತ್ತು ಭಾಗವತ ಪ್ರವಚನದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಭಗವಂತನ ಅಭಯದ ರಕ್ಷೆ ಸಿದ್ಧಿಸಿ, ನಾಡು ದೇಶದಲ್ಲಿ ಶಾಂತಿ ಸುಭಿಕ್ಷೆ ಸಮೃದ್ಧಿ ನೆಲೆಗೊಳ್ಳಲಿ. ಸಮಸ್ತರೂ ರಾಮ ಮಂತ್ರ ಜಪ ನಿಲ್ಲಿಸದೇ ನಿತ್ಯ ನಿರಂತರ ಮನೆ ಮನೆಗಳಲ್ಲಿ ಯಥಾಶಕ್ತಿ ನಡೆಸಬೇಕು ಎಂದು ತಿಳಿಸಿದರು.

ವಿದ್ವಾನ್ ರಾಜಗೋಪಾಲ ಆಚಾರ್ಯ ಮತ್ತು ವಿದ್ವಾನ್ ಕೃಷ್ಣ ಕುಮಾರ ಆಚಾರ್ಯರ ನೇತೃತ್ವದಲ್ಲಿ ವೈದಿಕರು ಯಾಗಗಳನ್ನು ನೆರವೇರಿಸಿದರು. ನೂರಾರು ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶ್ರೀಗಳ ಚಾತುರ್ಮಾಸ್ಯ ಸಮಿತಿ ಮತ್ತು ಶ್ರೀಕೃಷ್ಣ ಮಿತ್ರ ಮಂಡಳಿ ಪದಾಧಿಕಾರಿಗಳು ಹಾಜರಿದ್ದರು.

ಮೈಸೂರಲ್ಲಿ ಅದ್ದೂರಿ ಮೆರವಣಿಗೆ ಮೂಲಕ ಸಾರ್ವಜನಿಕ ಗಣೇಶ ವಿಸರ್ಜನಾ ಮಹೋತ್ಸವ



ಮೈಸೂರು, ಸೆ.24(ಎಸ್‌ಬಿಡಿ)– ಮೈಸೂರಿನಲ್ಲಿ ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನಾ ಮಹೋತ್ಸವ ಭಾನುವಾರ ಅದ್ಧೂರಿಯಾಗಿ ನೆರವೇರಿತು.

'ಮೈಸೂರು ಗಣೇಶ ಉತ್ಸವ'ದ ಶೀರ್ಷಿಕೆಯಡಿ ಈ ಬಾರಿ ಆಯೋಜಿಸಲಾಗಿದ್ದ ಗಣೇಶ ಮೂರ್ತಿಗಳ ಭವ್ಯ ಮೆರವಣಿಗೆಗೆ ವೀರನಗೆರೆ ಶ್ರೀ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು.

ವೀರನಗೆರೆಯಿಂದ ಅಶೋಕ ರಸ್ತೆ ಮೂಲಕ ಕೋಟೆ ಆಂಜನೇಯ ಸ್ವಾಮಿ ದೇವಾಲಯದವರೆಗೆ ನಗರದ ವಿವಿಧೆಡೆ ಪ್ರತಿಷ್ಠಾಪಿಸಲಾಗಿದ್ದ 30ಕ್ಕೂ ಹೆಚ್ಚು ಗಣೇಶ ಮೂರ್ತಿಗಳ ಮೆರವಣಿಗೆ ನಡೆಸಲಾಯಿತು. ಭಾರಿ ಪೊಲೀಸ್ ಬಂದೋಬಸ್ತ್ ನಡುವೆ ನಡೆದ ಮೆರವಣಿಗೆಯುದ್ದಕ್ಕೂ ಸಿಡಿಮದ್ದುಗಳ ಅಬ್ಬರ ಜೋರಾಗಿತ್ತು. ಮಹಿಳೆಯರು, ಮಕ್ಕಳಾದಿಯಾಗಿ ಸಹಸ್ರಾರು ಮಂದಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಡಿಜೆ ಸದ್ದಿಗೆ ಯುವ ಸಮೂಹ ಕುಣಿದು ಕುಪ್ಪಳಿಸಿತು.

ಮಂಗಳವಾದ್ಯ, ವೀರಗಾಸೆ, ನಂದಿಧ್ವಜ ಇನ್ನಿತರ ಕಲಾತಂಡಗಳು ಮೆರವಣಿಗೆ ಮೆರುಗು ಹೆಚ್ಚಿಸಿದ್ದವು. ಮೆರವಣಿಗೆ ಮಾರ್ಗವನ್ನು ಕೇಸರಿ ಬಾವುಟ ಹಾಗೂ ಬಂಟಿಂಗ್ಸ್‌ಗಳಿಂದ ಸಿಂಗರಿಸಲಾಗಿತ್ತು. ಯುವಕರು ಬೃಹತ್ ಕೇಸರಿ ಬಾವುಟವನ್ನು ಹಿಡಿದು ಮೆರವಣಿಗೆಯಲ್ಲಿ ಸಾಗಿದರು. ಗಣೇಶ ಮೂರ್ತಿಗಳಿದ್ದ ವಾಹನಗಳ ಹಿಂಭಾಗದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಸೇರಿದಂತೆ ಹಲವು ಮಹನೀಯರ ಫೋಟೋ ಅಳವಡಿಸಲಾಗಿತ್ತು.

ವೀರನಗೆರೆಯಲ್ಲಿ ಮಧ್ಯಾಹ್ನ 3.10ಕ್ಕೆ ಆರಂಭವಾದ ಮೆರವಣಿಗೆ ಸಂಜೆ 6 ಗಂಟೆ ವೇಳೆಗೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಆಗಮಿಸಿತು.

ಮಾಧವ ಕೃಪಾದಿಂದ ಮೆರವಣಿಗೆ: ದೇಶದ 21 ಪವಿತ್ರ ಸ್ಥಳಗಳ ಮಣ್ಣು ಹಾಗೂ 7 ಪವಿತ್ರ ನದಿಗಳ ನೀರು ಬಳಸಿ ತಯಾರಿಸಿದ್ದ ವಿಶೇಷ ಗಣೇಶ ಮೂರ್ತಿಯನ್ನು ಮಾಧವ ಕೃಪದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಈ ಮೂರ್ತಿ ಸೇರಿದಂತೆ ಸುಮಾರು 7 ಗಣೇಶ ಮೂರ್ತಿಗಳನ್ನು ಮಾಧವ ಕೃಪದಿಂದ ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಶ್ರೀ ಜಯಚಾಮರಾಜೇಂದ್ರ ವೃತ್ತದ ಮೂಲಕ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದವರೆಗೆ ಮೆರವಣಿಗೆಯಲ್ಲಿ ತರಲಾಯಿತು. ಎರಡೂ ಕಡೆಯಿಂದ ಗಣೇಶ ಮೂರ್ತಿಗಳ ಮೆರವಣಿಗೆ ಆಗಮಿಸಿತು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಸಾರ್ವಜನಿಕ ಸಭೆ ಬಳಿಕ ಬೃಹತ್ ಗಣೇಶ ವಿಸರ್ಜನಾ ಮಹೋತ್ಸವ ಮೆರವಣಿಗೆ ಗಾಂಧಿ ವೃತ್ತ, ಸಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಸೇರಿದಂತೆ ವಿವಿಧ ರಸ್ತೆಗಳ ಮೂಲಕ ಸಾಗಿತು. ವೀರನಗೆರೆಯಲ್ಲಿ ಶ್ರೀಗಳು ಮೆರವಣಿಗೆಗೆ ಚಾಲನೆ ನೀಡಿದ ಸಂದರ್ಭದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಹಿಂದೂ ಜಾಗರಣ ವೇದಿಕೆಯ ಲೋಹಿತ್ ರಾಜೇ ಅರಸ್, ಮುಖಂಡರಾದ ಸಂಜಯ್, ಗಿರೀಧರ್, ಸು.ಮುರುಳಿ, ಶ್ರೀನಿವಾಸ್, ಸಂಪತ್ ಮತ್ತಿತರರು ಉಪಸ್ಥಿತರಿದ್ದರು.



ಭಾರತದ ಮೇಲೆ ದಾಳಿ ಮಾಡಿದರೂ ನಮ್ಮ ಸಂಸ್ಕೃತಿಯನ್ನು ಯಾರಿಂದಲೂ ಅಲುಗಾಡಿಸಲಾಗಿಲ್ಲ

ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ದಿಟ್ಟ ನುಡಿ



ಮೈಸೂರು, ಸೆ.24– ಯಾರಿಂದಲೂ ಸನಾತನ ಹಿಂದೂ ಧರ್ಮವನ್ನು ನಾಶ ಮಾಡಲು ಸಾಧ್ಯವಿಲ್ಲ. ಆದರೂ ಧರ್ಮ ರಕ್ಷಣೆಗೆ ನಾವೆಲ್ಲರೂ ಸಂಘಟಿತರಾಗಬೇಕು ಎಂದು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಹೇಳಿದರು.

ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನಾ ಮಹೋತ್ಸವದ ಭಾಗವಾಗಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ನಡೆದ ಸಾರ್ವಜನಿಕ ಸಭೆಯಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಹಲವರು ಭಾರತದ ಮೇಲೆ ದಾಳಿ ನಡೆಸಿದರು, ದೇವಸ್ಥಾನಗಳಲ್ಲಿ ಲೂಟಿ ಮಾಡಿದರು. ಆದರೆ ನಮ್ಮ ಸಂಸ್ಕೃತಿಯನ್ನು ಯಾರಿಂದಲೂ ಅಲುಗಾಡಿಸಲು ಸಾಧ್ಯವಾಗಿಲ್ಲ. ಹಿಂದೂ ಧರ್ಮವನ್ನು ಅಪಮಾನಿಸುವವರ ಬುಡವೇ ಅಲುಗಾಡುವುದನ್ನು ನೋಡುತ್ತಿದ್ದೇವೆ ಎಂದರು.

ರಾಜಕಾರಣಿಗಳು ಅಧಿಕಾರಕ್ಕಾಗಿ ಹಿಂದೂ ಧರ್ಮದ ಬಗ್ಗೆ ಮಾತನಾಡಿ, ಅಧಿಕಾರ ಬಂದಾಗ ಮರೆತುಬಿಡಬಹುದು. ಆದರೆ ಹಿಂದೂ ಧರ್ಮಕ್ಕೆ ಕುತ್ತು ಬಂದಾಗಲೆಲ್ಲಾ ಭಾರತ ಮಾತೆ ಒಡಲಲ್ಲಿ ಅವತಾರ ಪುರುಷರು ಜನಿಸುತ್ತಾರೆ. ಇದಕ್ಕೆ ಪ್ರಧಾನಿ ಮೋದಿಯವರೂ ಸಾಕ್ಷಿ. ಸಂಸ್ಕೃತಿ ಉಳಿಸಲು ಮೋದಿಯಂತಹವರು ಸಾವಿರ ಮಂದಿ ಹುಟ್ಟಿ ಬರುತ್ತಾರೆ. ಅನೇಕ ಸಾಧು–ಸಂತರು, ಋಷಿ ಮುನಿಗಳ ತಪಸ್ಸಿನ ಫಲ ಹಿಂದೂ ಧರ್ಮದಲ್ಲಿ ಅಡಕವಾಗಿದೆ. ಈ ಧರ್ಮ ರಕ್ಷಣೆ ಒಬ್ಬರಿಂದ ಸಾಧ್ಯವಿಲ್ಲ. ಇದಕ್ಕಾಗಿ ಎಲ್ಲರೂ ಸಂಘಟಿತರಾಗಬೇಕು ಎಂದು ಕರೆ ನೀಡಿದರು.

ಗಣೇಶ ಮೂರ್ತಿಯನ್ನು ಸಾರ್ವಜನಿಕ ಸ್ಥಳದಲ್ಲಿ ಮೊದಲು ಪ್ರತಿಷ್ಠಾಪಿಸಿದ್ದು ಸಾವರ್ಕರ್. 12 ವರ್ಷದ ಬಾಲಕನಾಗಿದ್ದಾಗಲೇ ಅವರು ಹೆಗಲ ಮೇಲೆ ಗಣೇಶನ ಮೂರ್ತಿ ಹೊತ್ತು ತಂದು ಮಹಾರಾಷ್ಟ್ರದ ನಾಸಿಕ್‌ನ ಬೀದಿಯಲ್ಲಿ ಪ್ರತಿಷ್ಠಾಪಿಸುವ ಮೂಲಕ ಕ್ರಾಂತಿಕಾರಿ ಚಾಪೇಕರ್ ಸಹೋದರರನ್ನು ಗಲ್ಲಿಗೇರಿಸಿದ್ದನ್ನು ಖಂಡಿಸಿ, ಪ್ರತಿಭಟಿಸಿದ್ದರು. ನಂತರ ಗಣೇಶ ಪ್ರತಿಷ್ಠಾಪನೆಯನ್ನು ಸ್ವಾತಂತ್ರ್ಯ ಹೋರಾಟಕ್ಕೆ ತಂದರು. ಯುವಶಕ್ತಿಯನ್ನು ಸಂಘಟಿಸುವ ಉದ್ದೇಶದಿಂದ ಮುಂಬೈನಲ್ಲಿ ಗಣೇಶ ಉತ್ಸವ ಮಾಡಿದರು ಎಂದು ತಿಳಿಸಿದರು.

ಮೈಸೂರಿನಲ್ಲಿ ನಡೆದ ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನಾ ಮೆರವಣಿಗೆ, ಮುಂಬೈನಲ್ಲಿ ನಡೆಯುವ ಉತ್ಸವವನ್ನು ನೆನಪಿಸುವಂತಿದೆ. ಪೊಲೀಸರ ಮಾಹಿತಿಯಂತೆ ಈ ಬಾರಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ನಮ್ಮ ಸಂಸ್ಕೃತಿ ಒಳ್ಳೆಯದನ್ನೆಲ್ಲಾ ಕಲಿಸಿದೆ. ನಾವು ಶಾಂತಿ ಪ್ರಿಯರು, ದೇಶವನ್ನು ಪ್ರೀತಿಸುವವರು. ಸನಾತನ ಧರ್ಮ ನಿರ್ನಾಮದ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ಸಂಖ್ಯೆಯ ಯುವಕರು ಗಣೇಶ ಉತ್ಸವದಲ್ಲಿ ಭಾಗಿಯಾಗಿದ್ದಾರೆ. ಧರ್ಮ ರಕ್ಷಣೆ ಬಗ್ಗೆ ಯುವಶಕ್ತಿ ಜಾಗೃತವಾಗಿದೆ. ಈ ಬಾರಿಯ ಗಣೇಶ ಉತ್ಸವ ಸನಾತನ ಧರ್ಮದ ವಿರುದ್ಧ ಧ್ವನಿ ಎತ್ತಿದವರ ವಿರುದ್ಧ ರಣ ಕಹಳೆ ಮೊಳಗಿಸಿದಂತಿದೆ ಎಂದು ಹೇಳಿದರು.

ಚಳವಳಿಗಾರರು ಎಲ್ಲಿ?: ನಮ್ಮ ರೈತರಿಗೆ ನೀರಿಲ್ಲದಿದ್ದರೂ ತಮಿಳುನಾಡಿಗೆ ನೀರು ಬಿಡುವ ಆತುರ. ಹೀಗಿರುವಾಗ ಕಲೆಕ್ಷನ್ ಸಂಸ್ಥೆಗಳು ಎಲ್ಲಿ ಹೋದವು. ಸಾರಿಗೆ ಸಂಸ್ಥೆ ನೌಕರರಿಗೆ ನ್ಯಾಯ ಕೊಡಿಸುವುದಾಗಿ ಹೋರಾಟ ನಡೆಸಿದ್ದ ರೈತ ಮುಖಂಡರು ಎಲ್ಲಿ ಹೋದರು. ಈಗ ಅವರೆಲ್ಲಾ ಓಡಿ ಹೋಗಿದ್ದಾರೆ ಎಂದು ಇದೇ ವೇಳೆ ಕುಹಕವಾಡಿದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ಏನು, ಬೇರೆ ಊರಿಗೆ ವರ್ಗ ಮಾಡಿ ಅಂತ ಕೇಳಿದ್ದೀರಿ ಯಾಕೆ?

ಪತಿ : ಏನ್ ಮಾಡಲಿ! ಈಗ ಈ ಊರಲ್ಲಿ ಯಾರೂ ಸಾಲ ಕೊಡುತ್ತಿಲ್ಲ...!

ಮೈಸೂರು ಮಿತ್ರ

ಸೋಮವಾರ, 25 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಿರರ್ಥಕ ವಿಷಯಗಳನ್ನು ಮಾತನಾಡಲು ನಾಲಿಗೆ ಬಳಸುವ ಬದಲು ದೇವರ ಹೆಸರುಗಳನ್ನು ಜಪಿಸಲು ಬಳಸಿ, ದೇವರು ನಿಮಗೆ ಸರಿಯಾದ ಮತ್ತು ಪ್ರಯೋಜನಕಾರಿ ಮಾರ್ಗದರ್ಶನ ನೀಡುತ್ತಾನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೇಲಿ ಇಲಿ, ಬೀದೀಲಿ ಹುಲಿ

ನಿಮ್ಮ ಪತ್ರಗಳು

ಪಡಿತರ ಚೀಟಿಗೆ ಅವಧಿ ವಿಸ್ತರಿಸಿ

ಮಾನ್ಯರೆ,

ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳ ಜಾರಿಗೆ ಹಲವಾರು ರೀತಿಯ ಸಿದ್ಧತೆಗಳು ನಡೆದು ನೂರು ದಿನಗಳನ್ನು ಪೂರೈಸಿ ನುಡಿದಂತೆ ನಡೆದಿದ್ದೇವೆ ಎಂಬ ಘೋಷವಾಕ್ಯವನ್ನು ಇಟ್ಟುಕೊಂಡು ಆಡಳಿತ ವ್ಯವಸ್ಥೆಯನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುವ ಕೆಲಸ ಮಾಡುತ್ತಿದೆ. ಆದರೆ ಇದರ ನಡುವೆ ಅನೇಕ ಅಂಶಗಳು ಅಡಚಣೆಗೆ ಸಿಲುಕಿ ಸಿಕ್ಕವರಿಗೆ ಸೀರುಂಡೆ ಸಿಗದವರಿಗೆ ಚಿಪ್ಪು ಎನ್ನುವಂತಾಗಿದೆ.

ಅಧಿಕಾರಿಗಳು ಮತ್ತು ಸಂಬಂಧಪಟ್ಟ ಸಚಿವರು ಈ ಬಗ್ಗೆ ಗಮನಹರಿಸಲೇ ಬೇಕು. ರೇಷನ್ ಕಾರ್ಡ್ ತಿದ್ದುಪಡಿ ಅಂತ ಘೋಷಣೆ ಮಾಡಿ ಕೊನೆಯ ದಿನಾಂಕ ಅಂತ ನಿಗದಿ ಪಡಿಸಿದ ಮೇಲೆ ಸರ್ವರ್‌ನ ಹೇಗೆ ಇಡಬೇಕು. ಎಷ್ಟೋ ಜನ ಕಾದು ಕಾದು ಸಾಕಾಗಿ ಕೊನೆಗೆ ಅತ್ತ ಇದ್ದ ಹೆಸರನ್ನು ಡಿಲೀಟ್ ಮಾಡಿಸಿ, ಇತ್ತ ಸೇರ್ಪಡೆ ಆಗದೇ ಈ ತಿಂಗಳು ಅಕ್ಕಿಯೂ ಇಲ್ಲದೇ ಪರದಾಡುವಂತಾಗಿದೆ. ಈ ಸ್ಥಿತಿಗೆ ಸಿಲುಕಿರುವವರು ಬಡವರೇ ಹೊರತು ಸ್ಥಿತಿವಂತರಲ್ಲ.

ತಿದ್ದುಪಡಿಗೆ ಅಂತ ಬಂದವರ ಅಭಿಪ್ರಾಯ ಹೇಗಿದೆ ಎಂದರೆ ತಿದ್ದುಪಡಿಗೆ ಅಂತ ಹೇಳಿಕೆ ಕೊಟ್ಟು ನಾವು ಬಡವರ ಪರ ಅನ್ನೋದು ಮತ್ತೆ ನೋಡಿದರೆ ಇತ್ತ ಸರ್ವರ್ ಸಮಸ್ಯೆಯಿಂದ ತೊಡಕು ಕೊಡೋದು. ನೆಮ್ಮದಿ ಸಿಗದೇ, ತಲೆಕೆಡುವಂತಾಗಿದೆ. ಆ ವೆಬ್‌ಸೈಟ್‌ನ ತೆರೆದರೆ Server Too Busy ಅಂತ ಬರೋದು ಸಾಮಾನ್ಯ ಆಗಿದೆ. ಅದರಲ್ಲೂ ಮಕ್ಕಳ ಹೆಸರು ಸೇರ್ಪಡೆ ಆಗ್ತಿದೆ. ಆದರೆ ವಯಸ್ಕರು ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ ಮಾತ್ರ ಅಪ್ಲೋಡ್ ಆಗ್ತಿಲ್ಲ. ನಮಗೂ ಜನರಿಗೆ ಸರ್ವರ್ ಇಲ್ಲ ಅಂತ ಹೇಳಿ ಕೇಳಿ ಸಾಕಾಗಿ ಹೋಗಿದೆ. ಏನ್ ಮಾಡೋದು ನೀವೇ ಹೇಳಿ ಅಂತಾರೆ.

ಹಾಗಾಗಿ ಆದಷ್ಟು ಬೇಗನೆ ಆಹಾರ ಮತ್ತು ನಾಗರಿಕ ಕಲ್ಯಾಣ ಸರಬರಾಜು ಇಲಾಖೆಯ ಸಚಿವರು ಮತ್ತು ಅಧಿಕಾರಿಗಳು ಇತ್ತ ಗಮನ ಹರಿಸಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಪಡಿತರ ಚೀಟಿಯ ಹೆಸರು ಸೇರ್ಪಡೆ ಮತ್ತು ತಿದ್ದುಪಡಿಗೆ ಇದ್ದ ದಿನಾಂಕ ಮುಗಿದಿದೆ. ಸರ್ವರ್ ಸರಿಪಡಿಸಿ ಮತ್ತೆ ದಿನಾಂಕ ವಿಸ್ತರಣೆ ಮಾಡಬೇಕು. ಬರೇ ಗೃಹಲಕ್ಷ್ಮಿ ಯೋಜನೆಗೆ ಅಂತಲ್ಲ. ರೋಗಿಗಳ ಆರೋಗ್ಯದ ಬಳಕೆಗೆ ರೇಷನ್ ಕಾರ್ಡ್ ಅಗತ್ಯ ಎನ್ನುವುದನ್ನು ಗಮನಿಸಬೇಕಾಗಿದೆ.

–ಎ.ಎಸ್.ಗೋವಿಂದೇಗೌಡ, ರೂಪನಗರ, ಮೈಸೂರು.

ಮತ್ತೆ ಚರ್ಚೆಗೆ ಗ್ರಾಸವಾಗಿರುವ ಮುಕ್ತ ವಿವಿ

ಮಾನ್ಯರೆ,

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಓಯು) ಈಗ ಮತ್ತೇ ಚರ್ಚೆಯ ವಸ್ತುವಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಹಲವು ದಿನಗಳ ಹಿಂದೆ ಪರೀಕ್ಷಾ ಕೇಂದ್ರದಲ್ಲಿಯೇ ನಕಲು ಮಾಡಲು ಅನುವು ಮಾಡಿಕೊಟ್ಟ ಸುದ್ದಿಯನ್ನೂ ನಾವು ಓದಿದ್ದೇವೆ. ಇತ್ತೀಚೆಗೆ ನಡೆದಿರುವ ಈ ಎರಡು ಬೆಳವಣಿಗೆಗಳಿಂದ ದೂರ ಶಿಕ್ಷಣದ ಮೂಲಕ ಶಿಕ್ಷಣ ಪಡೆಯಬೇಕೆಂಬ ವಿದ್ಯಾರ್ಥಿಗಳು ಕೆಎಸ್‌ಓಯು ವ್ಯವಸ್ಥೆಯನ್ನು ಅನುಮಾನದಿಂದ ನೋಡುವ ಸ್ಥಿತಿ ಬಂದಿದೆ.

ಒಂದು ಕಾಲದಲ್ಲಿ ಸಾಕಷ್ಟು ವಿವಾದಗಳಿಂದ ಕೆಎಸ್‌ಓಯು ಯುಜಿಸಿಯಿಂದ ಅಧಿಕೃತ ಮಾನ್ಯತೆಯನ್ನೇ ಕಳೆದುಕೊಂಡಿತ್ತು. ಹಲವು ಪ್ರಯತ್ನಗಳ ಬಳಿಕ ಅಧಿಕೃತ ಮಾನ್ಯತೆಯನ್ನು ಮರಳಿ ಪಡೆದುಕೊಂಡಿತ್ತು. ಶಿಕ್ಷಣ ಪಡೆಯುವ ಹಕ್ಕನ್ನು ಭಾರತ ಸಂವಿಧಾನ 21(ಎ) ವಿಧಿಯ ಮೂಲಕ ದೇಶದ ಪ್ರಜೆಗಳಿಗೆ ನೀಡಿದೆ. ಇನ್ನಾದರೂ ಒಳ್ಳೆಯ ಬೆಳವಣಿಗೆಗಳಿಂದ ಕೆಎಸ್‌ಓಯು ವಿದ್ಯಾರ್ಥಿಗಳನ್ನು ಆಕರ್ಷಿಸಲಿ. ಉನ್ನತ ಶಿಕ್ಷಣ ಪಡೆಯಬೇಕೆಂಬ ಆಕಾಂಕ್ಷೆ ಹೊಂದಿರುವ ವಿದ್ಯಾರ್ಥಿಗಳಿಗೆ ನಂಬಿಕಸ್ತ ಸಂಸ್ಥೆಯಾಗಿ ರೂಪುಗೊಳ್ಳಲಿ.

–ಪ್ರಸಾದ್ ಜಿ.ಎಂ, ಮೈಸೂರು

ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ಗ್ಯಾರಂಟಿ ಬ್ಯಾನರ್‌ಗಳು ಬೇಕೇ?

ಮಾನ್ಯರೆ,

ಮೈಸೂರಿನ ನಜರ್‌ಬಾದ್‌ನಲ್ಲಿರುವ ವಸಂತಮಹಲ್ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮತ್ತು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಕ್ಕೆ ತನ್ನದೆ ಆದ ಇತಿಹಾಸದೊಂದಿಗೆ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಗೆ ಕಲಿಕೆ ಕೇಂದ್ರವಾಗಿದೆ. ಈ ಸಂಸ್ಥೆಯ ಗೇಟಿನ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದ ವತಿಯಿಂದ ರಾಜ್ಯಕ್ಕೆ ದೊರೆತಿರುವ ಐದು ಭಾಗ್ಯಗಳಾದ ಶಕ್ತಿ ಯೋಜನೆ, ಗೃಹಜ್ಯೋತಿ ಯೋಜನೆ, ಅನ್ನಭಾಗ್ಯ ಯೋಜನೆ, ಗೃಹ ಲಕ್ಷ್ಮೀ ಯೋಜನೆ, ಯುವನಿಧಿ ಯೋಜನೆಗಳನ್ನು ಬ್ಯಾನರ್‌ನಲ್ಲಿ ಮಾಡಿಸಿ ಅಳವಡಿಸಿರುವುದು ಸರಿಯೇ...? ವಿದ್ಯಾಭ್ಯಾಸದ ಸ್ಥಳದಲ್ಲಿ ಎಲ್ಲಾ ವಿದ್ಯಾರ್ಥಿಗಳ ಗಮನ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿರಬೇಕು.

ಒಂದು ರಾಜಕೀಯ ಪಕ್ಷದ ಬ್ಯಾನರ್‌ಗೆ ಮೈಸೂರಿನ ಹೃದಯ ಭಾಗದ ಸರ್ಕಾರಿ ಶಿಕ್ಷಕ ಶಿಕ್ಷಣದ ಮಹಾವಿದ್ಯಾಲಯ ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಮತ್ತು ಇತರ ಶಿಕ್ಷಕರು ಅವಕಾಶ ನೀಡಿರುವುದು ಸರಿಯೇ ಅಥವಾ ತಪ್ಪೇ...? ನಿರ್ಧರಿಸಬೇಕು.

ಇದರಂತೆ ರಾಜ್ಯದ ಆಡಳಿತ ಪಕ್ಷದ ಬ್ಯಾನರ್‌ಗೆ ಅವಕಾಶ ನೀಡಿರುವುದನ್ನು ಗಮನಿಸಿ ವಿರೋಧ ಪಕ್ಷ ಸೇರಿ ಇತರ ಪಕ್ಷಗಳು ಕೂಡ ತಮ್ಮ ತಮ್ಮ ಬ್ಯಾನರ್‌ಗಳಿಗೂ ಸ್ಥಾನ ಕೇಳಿದರೆ ಈ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನೀಡುವರೇ..? ಕೂಡಲೇ ಇಂತಹ ಘಟನೆಗಳಿಂದ ಆಗುವ ಅನಾಹುತಗಳನ್ನು ತಪ್ಪಿಸಲು ಈ ವಿಷಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಈ ಕಾಲೇಜಿನ ಪ್ರಾಂಶುಪಾಲರು ಸೂಕ್ತ ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ಮರುಕಳಿಸದಂತೆ ನಿಗಾವಹಿಸಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಕಾವೇರಿ ಹೊಸ ಒಡಂಬಡಿಕೆಯಾಗಲಿ

ಮಾನ್ಯರೆ,

ತಮಿಳು ನಾಡು ಹಾಗೂ ಕರ್ನಾಟಕದ ಮಧ್ಯೆ ಕಾವೇರಿ ನೀರಿಗಾಗಿ ಎಂದೋ ಮದರಾಸು ಸರಕಾರದೊಂದಿಗೆ ಮಾಡಿಕೊಂಡ ಓಬೀರಾಯನ ಕಾಲದ ಒಪ್ಪಂದಕ್ಕೇ ಜೋತು ಬೀಳದೆ ಕರ್ನಾಟಕ ಸರಕಾರದೊಂದಿಗೆ ಹೊಸದಾಗಿ ತಮಿಳುನಾಡು ಸರಕಾರವು ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಒಪ್ಪಂದ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ. ನಮ್ಮ ಜನರ ಹಣದಲ್ಲಿ ಕಟ್ಟಿದ ಕೃಷ್ಣರಾಜಸಾಗರದ ಮೇಲೆ ತಮಿಳುನಾಡಿಗೆ ಯಾವ ಹಕ್ಕೂ ಇಲ್ಲದ ಕಾರಣ ಮದರಾಸ್ ಸರಕಾರವಿದ್ದಾಗ ಆದ ಒಪ್ಪಂದವನ್ನು ರದ್ದುಮಾಡಲಾಗಿದೆಯೆಂಬ ನೋಟೀಸನ್ನು ಕರ್ನಾಟಕ ಸರಕಾರ ತಮಿಳುನಾಡಿಗೆ ಜಾರಿಮಾಡಲಿ. ತಮಿಳುನಾಡಿಗೆ ದರದಿದ್ದರೆ ಕರ್ನಾಟಕದ ಜೊತೆ ಹೊಸದಾಗಿ ಒಪ್ಪಂದ ಮಾಡಿಕೊಳ್ಳಲಿ.


–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಮಿದುಳಿನಿಂದ ಯೋಚಿಸಿದ್ರೆ ಬುದ್ಧಿವಂತ... ಹೃದಯದಿಂದ ಯೋಚಿಸಿದ್ರೆ ಹೃದಯವಂತ....!



ಜಗತ್ತು ಇಂದು ಹೃದಯವಂತನನ್ನು ಪ್ರಶಂಸಿಸುವುದಕ್ಕಿಂತ ಹೆಚ್ಚಾಗಿ ಬುದ್ಧಿವಂತನನ್ನು ಕೊಂಡಾಡುತ್ತದೆ. ಅದಕ್ಕಾಗಿಯೇ ಹೆತ್ತವರು ಸಹ ತಮ್ಮ ಮಕ್ಕಳು ಹೆಚ್ಚು ಎಮೋಶನಲ್, ಸೆಂಟಿಮೆಂಟಲ್ ಆಗುವ ಬದಲು ಪ್ರಾಕ್ಟಿಕಲ್ ಆಗಿರಲಿ ಎಂದು ಬಯಸುತ್ತಾರೆ, ಹಾಗೆಯೇ ಬೆಳೆಸುತ್ತಾರೆ ಕೂಡ. ಆದರೆ ಈ ಮನೋಭಾವ ಅವರಿಗೆ ಮುಳುವಾಗುವ ಸಂಭವವೇ ಹೆಚ್ಚು. ಹೆತ್ತವರಿಗೆ ವಯಸ್ಸಾದಾಗ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಮಕ್ಕಳ ಮೇಲೆ ಬಿದ್ದಾಗ ಮಕ್ಕಳ ವರಸೆ ಬದಲಾಗುವ ಸಂಭವವೇ ಹೆಚ್ಚು. ಆಸ್ತಿಯನ್ನು ವಿಭಾಗ ಮಾಡಿಕೊಂಡಂತೆ ಹೆತ್ತ ತಾಯಿತಂದೆಯನ್ನು ಭಿನ್ನ ಭಿನ್ನ ರೀತಿಯಲ್ಲಿ ವಿಭಾಗ ಮಾಡುವ ರೂಢಿ ಇಂದಿನ ನಾಗರಿಕ ಪ್ರಪಂಚದಲ್ಲಿದೆ. ಬಾಲ್ಯದಲ್ಲಿ ನಮ್ಮಪ್ಪ, ನಮ್ಮಮ್ಮ ಎಂದು ವಾದಿಸುತ್ತಾ ಜಗಳವಾಡುತ್ತಿದ್ದ ಮಕ್ಕಳು, ವಯಸ್ಸಾದ ಮೇಲೆ ನಿನ್ನ ಪ್ರೀತಿಯ ಅಪ್ಪ, ನಿನ್ನ ಪ್ರೀತಿಯ ಅಮ್ಮ ಎಂದು ವಾದಿಸುವ ಮಟ್ಟಕ್ಕೆ ಬರುತ್ತಾರೆ. ಅಪ್ಪನನ್ನು ನಾನು ನೋಡಿಕೊಳ್ಳುತ್ತೇನೆ, ಅಮ್ಮನನ್ನು ನೀನು ನೋಡಿಕೋ ಎಂದು ಒಬ್ಬ ಮಗ ಅಂದರೆ, ಮತ್ತೊಬ್ಬ 'ಹೆಣ್ಣು ಮಕ್ಕಳಿಗೂ ಈಗ ಪಾಲು ನೀಡಿದ್ದೇವೆ ಅವರೂ ಅಪ್ಪ ಅಮ್ಮನನ್ನು ನೋಡಿಕೊಳ್ಳಲಿ' ಎಂದು ವಾದಿಸುತ್ತಾನೆ.

ಮನುಷ್ಯನ ಬದುಕೇ ವಿಶಿಷ್ಟ. ಅವನ ಆಲೋಚನಾ ಕ್ರಮವೇ ವಿಚಿತ್ರ. ಮೂಲಭೂತವಾಗಿ ಸ್ವಾರ್ಥಿಯಾದ ಮನುಷ್ಯ ಎಲ್ಲಾ ಸಂದರ್ಭಗಳಲ್ಲಿಯೂ ಸ್ವಯಂ ಸೌಖ್ಯಕ್ಕಾಗಿ ಹಾತೊರೆಯುತ್ತಾನೆ. ತನ್ನ ತನುಮನದ ಸುಖಕ್ಕಾಗಿ ಭಿನ್ನಭಿನ್ನವಾಗಿ ಯೋಚಿಸುತ್ತಾ ಅದೇ ರೀತಿ ನಡೆದುಕೊಳ್ಳುತ್ತಾನೆ. ತ್ಯಾಗ, ನಿಸ್ವಾರ್ಥ, ಉದಾರತೆ.... ಹೀಗೆ ವಿಶೇಷ ವ್ಯಕ್ತಿತ್ವ ಹೊಂದಿದ್ದರೂ ಎಲ್ಲೋ ಒಂದು ಮೂಲೆಯಲ್ಲಿ ಒಂದು ಸ್ವಾರ್ಥದ ಸೆಲೆ ಇದ್ದೇ ಇರುತ್ತದೆ. ಎಷ್ಟೇ ಶಿಕ್ಷಣ ಪಡೆದಿದ್ದರೂ, ಸಮಾಜದಲ್ಲಿ ದೊಡ್ಡವರೆನಿಸಿಕೊಂಡಿದ್ದರೂ 'ಹುಟ್ಟು ಗುಣ ಸುಟ್ಟರೂ ಹೋಗದು' ಎಂಬ ಗಾದೆ ಮಾತಿನಂತೆ ಕೆಲವು ಸಣ್ಣತನಗಳನ್ನು ಬಿಡದೆ ಸಣ್ಣವರಾಗಿಯೇ ಉಳಿದುಬಿಡುತ್ತಾರೆ. ಮತ್ತೆ ಕೆಲವರು ಒಳಗಿನ ಆಲೋಚನೆಗಳನ್ನು ಮುಚ್ಚಿಟ್ಟು ಮುಖವಾಡ ಧರಿಸಿ ದೊಡ್ಡವರಂತೆ ಬಿಂಬಿಸಿಕೊಂಡು ಬದುಕುತ್ತಿರುತ್ತಾರೆ. ಹೃದಯಕ್ಕೆ ವಿಶ್ರಾಂತಿ ಕೊಟ್ಟು ಬುದ್ಧಿಯನ್ನು ಸದಾ ಜಾಗೃತಗೊಳಿಸಿಕೊಂಡಿರುವವರು ಅನೇಕರು ಇದ್ದಾರೆ.

ಮಕ್ಕಳನ್ನು ದೇವರು ಎಂದು ಕರೆಯಲಾಗುತ್ತದೆ. ಕಾರಣ ಮಕ್ಕಳಿಗೆ ದುರಾಲೋಚನೆಗಳಾಗಲಿ, ದೂರಾಲೋಚನೆಗಳಾಗಲಿ ಇರುವುದಿಲ್ಲ. ಸ್ನೇಹ ಸಂಬಂಧಗಳಿಗೆ ಹೆಚ್ಚು ಮಹತ್ವ ಕೊಡುವ ಮನೋಭಾವ ಹೊಂದಿರುತ್ತಾರೆ. ಸ್ನೇಹ ಸಂಬಂಧಕ್ಕೆ ಸೋಲುವುದು, ತ್ಯಾಗ ಮಾಡುವುದು, ನೆರವಾಗುವುದು ಹೀಗೆ ಹೃದಯ ವೈಶಾಲ್ಯತೆಯನ್ನು ಮೆರೆಯುತ್ತಾರೆ. ಅವರು ಹೃದಯದಿಂದ ಯೋಚಿಸುವ ರೂಢಿ ಹೊಂದಿರುತ್ತಾರೆ. ಅವರ ಬುದ್ಧಿ ಬಲಿತಂತೆ ಮಿದುಳಿನಿಂದ ಯೋಚಿಸಲು ಪ್ರಾರಂಭಿಸುತ್ತಾರೆ. ಹಣದ ಮಹತ್ವ ತಿಳಿದ ಮೇಲಂತೂ ಅವರ ಆಲೋಚನಾ ಕ್ರಮವೇ ಬದಲಾಗಿಬಿಡುತ್ತದೆ. ಸ್ನೇಹ ಸಂಬಂಧಗಳನ್ನು ಸಹ ಹಣದ ದೆಸೆಯಿಂದಲೇ ಕಾಣುವ ಅಭ್ಯಾಸ ರೂಢಿಯಾಗಿ ಬಿಡುತ್ತದೆ. ಪ್ರೀತಿ–ತ್ಯಾಗದ ಬದಲಿಗೆ ಲಾಭ–ನಷ್ಟಗಳ ಲೆಕ್ಕಾಚಾರ ಹೆಚ್ಚಾಗುತ್ತದೆ. ಕೆಲವರಂತೂ ಯಾವ ವ್ಯಾಪಾರಿಗೂ ಕಮ್ಮಿ ಇಲ್ಲದಂತೆ ಲೆಕ್ಕಾಚಾರ ಪ್ರಾರಂಭಿಸಿ ಮಿದುಳನ್ನು ಚುರುಕಾಗಿಸಿ ಬುದ್ಧಿವಂತರು ಎಂದು ಕರೆಯಿಸಿಕೊಂಡು ಬೀಗುತ್ತಾ, ಹೃದಯವನ್ನು ಸಂಕುಚಿತ ಮಾಡಿಕೊಂಡು ಹೃದಯಹೀನ ಎಂದು ಕರೆಯಿಸಿಕೊಂಡರೂ ಬೇಸರಿಸಿಕೊಳ್ಳದೆ ಬದುಕುತ್ತಿರುತ್ತಾರೆ. ಅವರಿಗೆ ಹಣವಂತರು ಕುರೂಪಿಗಳಾದರೂ ಸ್ಫುರದ್ರೂಪಿಗಳಂತೆ ಕಾಣುತ್ತಾರೆ, ಹಣವಿಲ್ಲದವರು ಸ್ಫುರದ್ರೂಪಿಗಳಾದರೂ ಕುರೂಪಿಗಳಂತೆ ಕಾಣುತ್ತಾರೆ. ಆದ್ದರಿಂದ ದಾರ್ಶನಿಕರೊಬ್ಬರು ಈ ಯುಗವನ್ನು 'ವೈಶ್ಯ ಯುಗ' ಎಂದು ಕರೆಯುತ್ತಾರೆ.

ಒಡಹುಟ್ಟಿದ ಸಹೋದರ–ಸಹೋದರಿಯರು ಬಾಲ್ಯದಲ್ಲಿ ಬಹಳ ಅನ್ಯೋನ್ಯತೆಯಿಂದ ಇರುತ್ತಾರೆ. ಪರಸ್ಪರ ಸೋಲುತ್ತಾ, ಒಬ್ಬರಿಗೊಬ್ಬರು ಬೆನ್ನೆಲುಬಾಗಿ ನಿಲ್ಲುತ್ತಾ, ಕೆಲವೊಮ್ಮೆ ತ್ಯಾಗ ಮಾಡುತ್ತಾ ರಕ್ತ ಸಂಬಂಧ ಎಂಬುದಕ್ಕೆ ಅರ್ಥ ತಂದುಕೊಡುತ್ತಾರೆ. ಆದರೆ ಅವರುಗಳೇ ಬೆಳೆದಂತೆಲ್ಲಾ ಅವರುಗಳ ವಿಶಾಲ ಹೃದಯ ಕಿರಿದಾಗುತ್ತಾ, ಮಿದುಳು ಚುರುಕಾಗುತ್ತಾ ಹೋಗುತ್ತದೆ. ಹೃದಯದಿಂದ ಆಲೋಚಿಸುತ್ತಿದ್ದವರೇ ಹೆಚ್ಚು ಮಿದುಳಿನಿಂದ ಯೋಚಿಸಲು ಪ್ರಾರಂಭಿಸುತ್ತಾರೆ. ಅಣ್ಣ–ತಮ್ಮ, ಅಕ್ಕ–ತಂಗಿಗೋಸ್ಕರ ಸೋಲುವ ಮಾತೇ ಇಲ್ಲ. ಒಮ್ಮೆ ಹೆತ್ತವರು ಮನೆ ವಿಭಾಗ ಮಾಡುತ್ತೇವೆ ಎಂದು ಹೇಳಿದರಂತೂ ಬಾಂಧವ್ಯ, ನಿಸ್ವಾರ್ಥ, ತ್ಯಾಗ ಇವುಗಳು ಹೃದಯದಲ್ಲಿಯೇ ಮರೆಯಾಗಿ, ಮಿದುಳಿನಿಂದ ಅಳತೆ ಟೇಪು, ತಕ್ಕಡಿ, ಕ್ಯಾಲ್ಕುಲೇಟರ್‌ಗಳನ್ನು ಹೊರತೆಗೆಯುತ್ತಾರೆ. ತಮ್ಮ ಹಠವೇ ಗೆಲ್ಲುವಂತೆ ವಾದಗಳು ನಡೆದು ಎಲ್ಲವೂ ವಿವಾದದಲ್ಲಿಯೇ ಮುಗಿಯುತ್ತದೆ. ಇಂದು ಅನೇಕ ಕುಟುಂಬಗಳ ಆಸ್ತಿ ವ್ಯಾಜ್ಯಗಳು ಕೋರ್ಟಿನಲ್ಲಿವೆ. ಈ ಬೆಳವಣಿಗೆ ಹೃದಯ ಮಂಕಾಗಿ, ಮಿದುಳು ಚುರುಕಾದ ಕಾರಣಕ್ಕೆ ಎನ್ನಬಹುದು. ಒಡಹುಟ್ಟಿದವರಿಗೋಸ್ಕರ ತಮ್ಮ ಬದುಕನ್ನೇ ತ್ಯಾಗ ಮಾಡಿದ ಮಹಾತ್ಮರು ಕೂಡ ಇದ್ದಾರೆ, ಆದರೆ ಅವರು ತೀರಾ ಅಪರೂಪ.

ಇಂದು ಹಣ ಕೇಂದ್ರಿತ ಆಲೋಚನೆ ಎಲ್ಲರಿಗೂ ಹೆಚ್ಚು ಅಭ್ಯಾಸವಾಗಿದೆ. ಯಾವುದೇ ಕೆಲಸ ಮಾಡುವ ಮೊದಲು ಇದರಿಂದ ಏನು ಲಾಭ ಎಂದು ಕೇಳಿಕೊಳ್ಳುವ ಸ್ವಭಾವ ಹೆಚ್ಚಿದೆ. ಅಂದರೆ ಹೃದಯಪೂರ್ವಕವಾಗಿ ಯೋಚಿಸದೆ, ಮಿದುಳುಪೂರ್ವಕವಾಗಿ ಯೋಚಿಸುವುದರ ಫಲವೇ ಇದಾಗಿದೆ. ಇದರಿಂದ ಇಂದು ಸೇವೆ ಎಂಬುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಎಷ್ಟೋ ಜನ ಸೇವೆಯ ಹೆಸರಿನಲ್ಲಿ ದುಡ್ಡು ದೋಚುವ ಹುನ್ನಾರ ನಡೆಸುತ್ತಾರೆ. ಅದರಿಂದ ಕೆಲವರು ನಿಸ್ವಾರ್ಥವಾಗಿ ಸೇವೆ ಸಲ್ಲಿಸುವವರನ್ನು ಅನುಮಾನಿಸುವ ಹಾಗಾಗಿದೆ. ಅಷ್ಟೇ ಅಲ್ಲದೆ ಹೃದಯವಂತರು ಬುದ್ಧಿವಂತರಿಂದ ಹೆಚ್ಚು ಮೋಸಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಲೆಕ್ಕಾಚಾರದಿಂದ ಬದುಕದೇ ಇರುವ ಹೃದಯವಂತರನ್ನು ಲೆಕ್ಕಾಚಾರದಿಂದ ಬದುಕುವ ಬುದ್ಧಿವಂತರು ಸರಿಯಾಗಿ ಯಾಮಾರಿಸುತ್ತಾರೆ. ಆದ್ದರಿಂದ ಹೃದಯವಂತರು ಇಂಥ ಬುದ್ಧಿವಂತರಿಂದ ದೂರವಿರುವಷ್ಟಾದರೂ ಬುದ್ಧಿವಂತರಾದರೆ ಒಳ್ಳೆಯದು.

ಜಗತ್ತು ಇಂದು ಹೃದಯವಂತನನ್ನು ಪ್ರಶಂಸಿಸುವುದಕ್ಕಿಂತ ಹೆಚ್ಚಾಗಿ ಬುದ್ಧಿವಂತನನ್ನು ಕೊಂಡಾಡುತ್ತದೆ. ಅದಕ್ಕಾಗಿಯೇ ಹೆತ್ತವರು ಸಹ ತಮ್ಮ ಮಕ್ಕಳು ಹೆಚ್ಚು ಎಮೋಶನಲ್, ಸೆಂಟಿಮೆಂಟಲ್ ಆಗುವ ಬದಲು ಪ್ರಾಕ್ಟಿಕಲ್ ಆಗಿರಲಿ ಎಂದು ಬಯಸುತ್ತಾರೆ, ಹಾಗೆಯೇ ಬೆಳೆಸುತ್ತಾರೆ ಕೂಡ. ಆದರೆ ಈ ಮನೋಭಾವ ಅವರಿಗೆ ಮುಳುವಾಗುವ ಸಂಭವವೇ ಹೆಚ್ಚು. ಹೆತ್ತವರಿಗೆ ವಯಸ್ಸಾದಾಗ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಮಕ್ಕಳ ಮೇಲೆ ಬಿದ್ದಾಗ ಮಕ್ಕಳ ವರಸೆ ಬದಲಾಗುವ ಸಂಭವವೇ ಹೆಚ್ಚು. ಆಸ್ತಿಯನ್ನು ವಿಭಾಗ ಮಾಡಿಕೊಂಡಂತೆ ಹೆತ್ತ ತಾಯಿತಂದೆಯನ್ನು ಭಿನ್ನ ಭಿನ್ನ ರೀತಿಯಲ್ಲಿ ವಿಭಾಗ ಮಾಡುವ ರೂಢಿ ಇಂದಿನ ನಾಗರಿಕ ಪ್ರಪಂಚದಲ್ಲಿದೆ. ಬಾಲ್ಯದಲ್ಲಿ 'ನಮ್ಮಪ್ಪ ನಮ್ಮಮ್ಮ' ಎಂದು ವಾದಿಸುತ್ತಾ ಜಗಳವಾಡುತ್ತಿದ್ದ ಮಕ್ಕಳು, ವಯಸ್ಸಾದ ಮೇಲೆ 'ನಿನ್ನ ಪ್ರೀತಿಯ ಅಪ್ಪ, ನಿನ್ನ ಪ್ರೀತಿಯ ಅಮ್ಮ' ಎಂದು ವಾದಿಸುವ ಮಟ್ಟಕ್ಕೆ ಬರುತ್ತಾರೆ. ಅಪ್ಪನನ್ನು ನಾನು ನೋಡಿಕೊಳ್ಳುತ್ತೇನೆ, ಅಮ್ಮನನ್ನು ನೀನು ನೋಡಿಕೋ ಎಂದು ಒಬ್ಬ ಮಗ ಅಂದರೆ, ಮತ್ತೊಬ್ಬ 'ಹೆಣ್ಣು ಮಕ್ಕಳಿಗೂ ಈಗ ಪಾಲು ನೀಡಿದ್ದೇವೆ ಅವರೂ ಅಪ್ಪ ಅಮ್ಮನನ್ನು ನೋಡಿಕೊಳ್ಳಲಿ' ಎಂದು ವಾದಿಸುತ್ತಾನೆ. ಅಪ್ಪ–ಅಮ್ಮ ಇಬ್ಬರಲ್ಲಿ ಒಬ್ಬರು ಇಲ್ಲದಿದ್ದ ಪಕ್ಷದಲ್ಲಿ 6 ತಿಂಗಳು ಒಬ್ಬರ ಮನೆಯಲ್ಲಿ, ಮತ್ತೆ 6 ತಿಂಗಳು ಮತ್ತೊಬ್ಬ ಮಗನ ಮನೆಯಲ್ಲಿ ಇರಬೇಕಾದ ಪರಿಸ್ಥಿತಿಯನ್ನು ಹೆತ್ತವರು ಅನುಭವಿಸಬೇಕಾಗುತ್ತದೆ. ಇನ್ನೂ ಧಾರುಣವಾದ ಸಂಗತಿ ಎಂದರೆ ನೋಡಿಕೊಳ್ಳುವ ಉಸಾಬರಿ ಮಾಡಲಾಗದು ಎಂದು ಇಂದು ವೃದ್ಧಾಶ್ರಮಕ್ಕೆ ಸೇರಿಸಿಬಿಡುತ್ತಾರೆ. ಮಕ್ಕಳು ಬುದ್ಧಿವಂತರಾದರೂ ಎಂದು ಹೆಮ್ಮೆ ಪಡುತ್ತಿದ್ದ ಹೆತ್ತವರು ವೃದ್ಧಾಶ್ರಮದಲ್ಲಿ ಆ ಬುದ್ಧಿವಂತಿಕೆಯನ್ನೇ ಶಪಿಸುತ್ತಾ ಇರುತ್ತಾರೆ. ಹೃದಯವಂತಿಕೆಯನ್ನು ಪಾಠ ಹೇಳುವ ರೀತಿ ಹೇಳಿಕೊಡಲಾಗದು. ಅದು ಗುರುಹಿರಯರನ್ನು, ಹೆತ್ತವರನ್ನು ನೋಡಿ ಕಲಿಯುವ ಒಂದು ಪಾಠವಾಗಿದೆ.

ಬದುಕಿನಲ್ಲಿ ಲೆಕ್ಕಾಚಾರ ಇರಬೇಕು ನಿಜ. ಆದರೆ ಲೆಕ್ಕಾಚಾರವೇ ಬದುಕಾಗಬಾರದು. ನಾನು ರಚಿಸಿರುವ ಒಂದು ಚೌಪದಿಯಲ್ಲಿನ ಸಾಲುಗಳು ಹೀಗಿವೆ.

'ಬದುಕಿನಲಿ ಲೆಕ್ಕವಿರಲಿ, ಲೆಕ್ಕವೇ ಬದುಕಾಗದಿರಲಿ, ಸಂತಸ ಸಂಕಲನವಾಗಿ, ಸಂಕಟ ವ್ಯವಕಲನವಾಗಿ, ನೆಮ್ಮದಿಯು ಮನೆಯ ಗುಣಕಾರವಾಗಿರಲಿ

ಎಂದ ನಮ್ಮ ಅರಿವಿನ ಅಪ್ರಮೇಯ ಎಲ್ಲವೂ ಲೆಕ್ಕಾಚಾರದಂತೆ ನಡೆಯುವುದಿಲ್ಲ. ಏಕೆಂದರೆ ಬದುಕಿನ ಗಣಿತಕ್ಕೆ ಸಿದ್ಧ ಸೂತ್ರಗಳಿರುವುದಿಲ್ಲ. 'ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ' ಎಂಬಂತೆ ಆಗುತ್ತದೆ. ಮನುಷ್ಯ ಒಳ್ಳೆಯದಕ್ಕಾಗಿ ಪ್ರಯತ್ನಿಸಬೇಕು ನಿಜ. ಆದರೆ ಎಲ್ಲಾ ಪ್ರಯತ್ನಗಳು ಫಲ ಕೊಡುತ್ತವೆ ಎಂಬುದು ಸುಳ್ಳು. ಮನುಷ್ಯನ ಎಲ್ಲಾ ಪ್ರಯತ್ನಗಳು ಫಲ ಕೊಟ್ಟರೆ ಮನುಷ್ಯನನ್ನು ತಡೆದು ನಿಲ್ಲಿಸಲು ಸಾಧ್ಯವೇ? ತೆಂಗಿನ ಮರದಲ್ಲಿ ಬಿಡುವ ಹೊಂಬಾಳೆ ಒಂದರಲ್ಲಿ ಸಾವಿರಾರು ಹೂಗಳಿರುತ್ತವೆ. ಎಲ್ಲಾ ಹೂವುಗಳು ಕಾಯಾಗಿ ಫಲ ಕೊಡುತ್ತವೆಯೇ? ಆ ಎಲ್ಲಾ ಹೂಗಳು ಫಲ ಕೊಟ್ಟರೆ ಆ ತೆಂಗಿನ ಮರ ಅದರ ಭಾರವನ್ನು ಹೊರಲು ಸಾಧ್ಯವೇ? ಹಾಗೆಯೇ ಮನುಷ್ಯನ ಎಲ್ಲಾ ಪ್ರಯತ್ನಗಳು ಫಲಪ್ರದವಾಗಿಯೇ ಇರುವುದಿಲ್ಲ.

ತಮ್ಮ ಸರಳ ನಡೆ–ನುಡಿಯಿಂದಲೇ ನಡೆದಾಡುವ ದೇವರು ಎಂದು ಕರೆಯಿಸಿಕೊಂಡ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಒಂದು ಮಾತು ಇಲ್ಲಿ ಉಲ್ಲೇಖನೀಯ. 'ಯಾವಾಗ ಎಲ್ಲದ್ದಕ್ಕೂ ಬೆಲೆ ಕಟ್ಟಲು ಮುಂದಾಗುತ್ತೇವೆಯೋ ಆಗ ಜೀವನದ ವೈಭವ ಕಡಿಮೆಯಾಗುತ್ತಾ ಬರುತ್ತದೆ'. ಈ ಮಾತು ಅಕ್ಷರಶಃ ಸತ್ಯ. ವೈಭವ ಎಂದರೆ ಕೆಲವರು ಬುದ್ಧಿವಂತಿಕೆಯಿಂದ ಹಣ ಗಳಿಸಿ ಐಷಾರಾಮದ ಬದುಕು ನಡೆಸುವುದು ಎಂದು ಭಾವಿಸಿದ್ದಾರೆ, ಅದಲ್ಲ, ವೈಭವ ಎಂದರೆ ಹೃದಯವಂತಿಕೆಯಿಂದ ಜನ ಸಂಪಾದಿಸುವುದು ಮುಖ್ಯವಾಗುತ್ತದೆ. ಎಷ್ಟೋ ಜನ ತಮ್ಮ ಲೆಕ್ಕದ ಪುಸ್ತಕ ನಿರ್ವಹಿಸುವುದರಲ್ಲಿಯೇ ತಮ್ಮ ಜೀವಮಾನ ಕಳೆದುಬಿಡುತ್ತಾರೆ. ಅಂತಿಮ ದಿನಗಳಲ್ಲಿ ಬಾಳಿನ ಪುಟಗಳನ್ನು ತಿರುವಿ ಹಾಕಿದರೆ ಸಂತೋಷದ, ಆನಂದದ, ನೆಮ್ಮದಿಯ, ಖುಷಿಯ ಕ್ಷಣಗಳು, ದಿನಗಳು ನೆನಪಿಗೆ ಬರುವುದೇ ಇಲ್ಲ, ಅವರ ನೆನಪಿನ ಪುಟಗಳನ್ನು ಕೇವಲ ಅಂಕಿಸಂಖ್ಯೆಗಳೇ ಆವರಿಸಿಕೊಂಡಿರುತ್ತವೆ. ನಮ್ಮ ಬದುಕಿನ ಆದ್ಯತೆಗಳು ನಮ್ಮನ್ನು ರೂಪಿಸುತ್ತವೆ. ಹೃದಯವು ಅತ್ಯಂತ ಫಲವತ್ತಾದ ಭೂಮಿ. ಅಲ್ಲಿ ನಾವು ಪ್ರೇಮ, ದ್ವೇಷ, ಮತ್ಸರ, ಕರುಣೆ, ದಯೆ ಹೀಗೆ ಏನನ್ನು ಬಿತ್ತಿದರೂ ಸೊಂಪಾಗಿ ಬೆಳೆಯುತ್ತದೆ. ಆದರೆ ಅಲ್ಲಿ ಏನೇ ಬೆಳೆದರೂ ನಾವೇ ತಿನ್ನಬೇಕು ಎಂಬುದು ಮಾತ್ರ ಕಡ್ಡಾಯವಾಗಿರುತ್ತದೆ. ಆದ್ದರಿಂದ ಬಿತ್ತುವ ಮೊದಲು ಯೋಚಿಸಬೇಕು.

ದೇಹದಲ್ಲಿ ಶಕ್ತಿ ಇದ್ದಾಗ, ಜೇಬಿನಲ್ಲಿ ದುಡ್ಡು ಇದ್ದಾಗ, ಸಮಾಜದಲ್ಲಿ ಹೆಸರು ಇದ್ದಾಗ ಮನುಷ್ಯ ವರ್ತಿಸುವ ರೀತಿಯೇ ಬೇರೆ, ಹಾಗೆಯೇ ದೇಹದಲ್ಲಿ ಶಕ್ತಿ ಕುಂದಿದಾಗ, ಜೇಬಿನಲ್ಲಿ ಹಣ ಖಾಲಿ ಆದಾಗ, ಸಮಾಜದಲ್ಲಿ ಹೆಸರು ಮರೆಯಾಗುತ್ತಿರುವಾಗ ವರ್ತಿಸುವ ರೀತಿಯೇ ಬೇರೆ. ಯಾವುದೂ ಶಾಶ್ವತವಲ್ಲ. ಆದ್ದರಿಂದ ಇರುವಷ್ಟು ದಿನ ನಮ್ಮ ಸುತ್ತ ಮುತ್ತ ಇರುವ ಜನರೊಂದಿಗೆ ಸ್ನೇಹ ಸೌಹಾರ್ದದಿಂದ ಬದುಕಬೇಕು. ಎಲ್ಲಾ ಸಂದರ್ಭದಲ್ಲಿಯೂ ಬುದ್ಧಿಯೇ ಬಳಕೆಗೆ ಬರುವುದಿಲ್ಲ, ಹೃದಯವಂತಿಕೆಯ ಅಗತ್ಯವೂ ಇದೆ. ರೂಪಾಯಿಯಲ್ಲಿ ರಾಜನಾದರೂ ಕೆಲವರು ಸ್ನೇಹ ಸಂಬಂಧಗಳಲ್ಲಿ ಬಿಕಾರಿಗಳಾಗಿರುತ್ತಾರೆ. 'ಶರಣರ ಬಾಳನ್ನು ಮರಣದಲ್ಲಿ ಕಾಣು' ಎಂಬಂತೆ ಒಬ್ಬ ವ್ಯಕ್ತಿಯ ಬದುಕು ಬಯಲಾಗುವುದು ಆ ವ್ಯಕ್ತಿ ನಿಧನರಾದಾಗ ಸೇರುವ ಜನರಿಂದ ತಿಳಿಯುತ್ತದೆ. ಮನುಷ್ಯ ಸಿರಿವಂತನಾದಂತೆಲ್ಲಾ ಹಣ ಕೂಡಿಡುವ ಬದಲು ಒಂದಷ್ಟು ಭಾಗವನ್ನು ಕಷ್ಟದಲ್ಲಿರುವವರಿಗೆ ಹಂಚಿದರೆ ಅವನ ಬದುಕು ಸಾರ್ಥಕ ಎನಿಸುತ್ತದೆ. ಇಲ್ಲವಾದಲ್ಲಿ ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಎನ್ನುವಂತಾಗುತ್ತದೆ. ಏನಂತೀರಿ?

ಪದ ತಾಂಬೂಲ

ಬದುಕು ಬುದ್ಧಿವಂತನಿಗೆ ಸುಖ ಕೊಟ್ಟರೆ ಹೃದಯವಂತನಿಗೆ ನೆಮ್ಮದಿ ಕೊಡುತ್ತದೆ.

ನನ್ನ ಸಾವು ನಾ ಕಂಡಂತೆ...!

ಒಂದು ಆತ್ಮಾವಲೋಕನ ಚಿಂತನೆ

'ಆಶ್ಚರ್ಯವಾಗಬಹುದು! ನಾ ಸತ್ತ ಸುದ್ದಿ ಎಲ್ಲ ಕಡೆ ಹರಡಿತು. ಸತ್ತ ಐದೇ ನಿಮಿಷದಲ್ಲಿ, ನನ್ನ ಶವ ಇನ್ನೂ ಆಸ್ಪತ್ರೆಯಿಂದ ಮನೆಗೆ ಬಂದಿರಲೇ ಇಲ್ಲ, ಆಗಲೇ ಸಾಮಾಜಿಕ ಜಾಲತಾಣವಾದ ಫೇಸ್ ಬುಕ್ ಮತ್ತು ವಾಟ್ಸ್‌ಆಪ್‌ಗಳಲ್ಲಿ ನನ್ನ ಫೋಟೊ ಹಾಕಿ RIP ಎಂದು ಬರೆದಿದ್ದರು. ಫೇಸ್‌ಬುಕ್‌ನಲ್ಲಿ ನನ್ನ ಸಾವಿನ ಸುದ್ದಿಗೆ ಪೋಸ್ಟ್ ಮಾಡಿದ ಒಂದು ಗಂಟೆಯಲ್ಲಿ ನೂರಾರು ಲೈಕ್‌ಗಳು. ಇವುಗಳನ್ನು ನೋಡಿದಾಗ ನನಗೆ ಅನಿಸಿದ್ದು ನನ್ನ ಸಾವು ಇವರಿಗೆಲ್ಲ ಅಷ್ಟು ಇಷ್ಟವಾಯ್ತಾ ಅಂತ! ಒಬ್ಬರಿಗೂ ನನ್ನ ಬಗ್ಗೆ ಒಂದಷ್ಟು ಬರೆಯಬೇಕು ಅನಿಸಲಿಲ್ಲವೇ? ನನ್ನ ಅರವತ್ತು ವರ್ಷಗಳ ಜೀವನದಲ್ಲಿ ನಾನು ಯಾರಿಗೂ ಏನೂ ಸಹಾಯ ಮಾಡಲಿಲ್ಲವೆ? ಸತ್ತಾಗಲಾದರೂ ನನ್ನ ಸಹಾಯವನ್ನು ಸ್ಮರಣೆ ಮಾಡಿಕೊಳ್ಳುವವರು ಇಲ್ಲದಾಯಿತಲ್ಲ. ಈ ಜನ್ಮ ವ್ಯರ್ಥ ಅಂದುಕೊಂಡೆ...

ಇರಲಿ, ನನ್ನ ಶವವನ್ನು ಮನೆಯ ಮುಂದಿನ ಅಂಗಳದಲ್ಲಿ ತಂದಿರಿಸಿದರು. ವಾಕಿಂಗ್‌ಗೆ ಹೋದ ಐದಾರು ಮಂದಿ ಒಮ್ಮೆ ಬಂದು ಹೋದರು. ಎಲ್ಲರಿಗೂ ವಿಷಯ ತಿಳಿಸಲು ಹೆಂಡತಿ ತನ್ನ ಮೊಬೈಲ್‌ನಲ್ಲಿದ್ದ ನಂಬರ್‌ಗಳಿಗೆ ಫೋನ್ ಮಾಡಲು ಆರಂಭಿಸಿದಳು. ಗೆಳೆಯನೊಬ್ಬ ಬಂದು ಹರಿಶ್ಚಂದ್ರ ಘಾಟ್‌ಗೆ ವಿಷಯ ತಿಳಿಸಿದ. ಅವನು ಅರ್ಧ ಗಂಟೆಯಲ್ಲಿ ಬರುವುದಾಗಿ ಹೇಳಿದ. ಬೇಡ... ಬೇಡ... ಜನ ಬರುವವರು ಇದ್ದಾರೆ. ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಬಂದರೆ ಸಾಕು ಎಂದ. ಅತ್ತ ಕಡೆಯಿಂದ ಆಯ್ತು ಎಂದು ಫೋನಿಟ್ಟ, ಅಕ್ಕಪಕ್ಕದವರು ಬಂದರು. ಮದುವೆ ಕಾಲದಲ್ಲಿ ಕೊರಳಿಗೆ ಬಿದ್ದಿದ್ದ ಹೂವಿನ ಹಾರ ಮತ್ತೆ ನನ್ನ ಕೊರಳಿಗೆ ಬಿದ್ದಿದ್ದು ಈಗಲೇ. ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ ಮನೆ ಮುಂದೆ ಸಾಕಷ್ಟು ಜನ ಸೇರಿದರು. ಅವರಲ್ಲಿ ಕೆಲವರು ಅಳತೊಡಗಿದರು. ಡಯಾಬಿಟಿಸ್ ಇತ್ತು ಆದರೆ ಅದನ್ನು ಪತ್ತೆ ಮಾಡಲೇ ಇಲ್ಲ! ಎಲ್ಲವನ್ನೂ ತಿನ್ನುತ್ತಾ ಇದ್ದ, ಕಂಟ್ರೋಲ್ ಮಾಡಲೇ ಇಲ್ಲ ಎಂದು ಹೇಳುತ್ತಾ ಹೇಳುತ್ತಲೇ ಅತ್ತರು.

ಹೀಗೆ ಎಲ್ಲರ ಅಳುವಿನ ನಡುವೆ ಶವವನ್ನು ವ್ಯಾನಿನಲ್ಲಿ ಇಡಲಾಯಿತು. ವ್ಯಾನ್ ಮನೆ ದಾಟಿತು. ಅಳುವವರು ತಮ್ಮ ಅಳುವನ್ನು ನಿಲ್ಲಿಸಿ, ಸ್ನಾನ ಮಾಡಲು ಹೋದರು. ಪಕ್ಕದ ಮನೆಯವರು ಉಪ್ಪಿಟ್ಟು, ಕಾಫಿ ಮಾಡಿಕೊಂಡು ಬಂದರು. ಹಸಿದ ಹೊಟ್ಟೆಗೆ ಉಪ್ಪಿಟ್ಟು ಕಾಫಿ ಬಿದ್ದ ಮೇಲೆ ತಣ್ಣಗಾಯಿತು. ಮನೆಯಲ್ಲಿ ಅಳುವೂ ತಣ್ಣಗಾಗಿತ್ತು.

ಶವ ಸಂಸ್ಕಾರ ಮಾಡಿ ಬಂದ ಮಗ ಮೊದಲು ಮಾಡಿದ ಮೊದಲ ಕೆಲಸವೆಂದರೆ ನನ್ನ ಬ್ಯಾಂಕ್ ಪಾಸ್‌ಬುಕ್ ಮತ್ತು ಫಿಕ್ಸೆಡ್ ಬಾಂಡ್‌ಗಳ ಪರಿಶೀಲನೆ.

ನನ್ನ ಅತ್ತೆ ಬಂದು ಮುಂದಿನ ಕಾರ್ಯಗಳ ಬಗ್ಗೆ ಮಾತನಾಡಿದರು. ಮನೆಯಲ್ಲಿ ದೀಪ ಹಚ್ಚಿಟ್ಟು ಮೊದಲನೆಯ ದಿನವೂ ಕಳೆದು ಹೋಯಿತು. ಎರಡನೆಯ ದಿನಕ್ಕೆ ಮನೆಯಲ್ಲಿದ್ದ ಕೆಲವರು ಕೆಲಸದ ನೆಪವೊಡ್ಡಿ ಹತ್ತನೆಯ ದಿನ ಬರುವುದಾಗಿ ಹೇಳಿ ಹೊರಟರು.

ಅತ್ತೆ ಅಡುಗೆ ಮನೆ ಜವಾಬ್ದಾರಿ ಹೊತ್ತು ಮೈಲಿಗೆಯಲ್ಲಿದ್ದ ಎಲ್ಲರಿಗೂ ಅನ್ನ–ಸಾರು, ಚಟ್ನಿ ಮಾಡಿ ಹಾಕಿದರು. ಮಗ, ಬ್ಯಾಂಕಿಗೆ ಅಡ್ಡಾಡಿ ಕೆಲವು ಪತ್ರಗಳನ್ನು ತನ್ನ ಅಮ್ಮನ ಮುಂದೆ ಹಿಡಿದು ಸಹಿ ಮಾಡಿಸಿಕೊಂಡ. ಎಷ್ಟು ಬರುತ್ತೆ.. ಮಗನನ್ನು ಅಮ್ಮ ಕೇಳಿದಳು.

ಅವನು ತನ್ನ ಹೆಂಡತಿ ಮುಖ ನೋಡಿದ. ಆಗ ಅವನ ಹೆಂಡತಿಯೇ ತನ್ನ ಅತ್ತೆಗೆ ಇಪ್ಪತ್ತು ಲಕ್ಷ ಅತ್ತೆ ಎಂದಳು. ಅಷ್ಟಕ್ಕೆ ನನ್ನ ಹೆಂಡತಿ ಮುಖ ಅರಳಿತು. ಮತ್ತೆ ನನ್ನ ಪೆನ್ಷನ್ ಎಂದು ಮೆಲ್ಲಗೆ ಕೇಳಿದಳು. ಇಪ್ಪತ್ತೆರಡು ಸಾವಿರ ಬರುತ್ತೆ ಎಂದು ಸೊಸೆನೇ ಹೇಳಿದಳು. ಅಷ್ಟರಲ್ಲಿ ಅಪ್ಪನ ದುಡ್ಡಲ್ಲಿ ನನಗೆ ಪಾಲು ಬೇಕು ಎಂದು ಮಧ್ಯೆ ಬಂದು ಕುಳಿತಳು ಮಗಳು.

ಕೊಡ್ತೀನಿ ಎಂದಳು ಅವಳ ಅಮ್ಮ. ಒಮ್ಮೆ ಅಮ್ಮನ ನಂತರ ತಮ್ಮದೇ ಮುಖ ಮುಖ ನೋಡಿಕೊಂಡರು ಮಗ, ಸೊಸೆ. ಅವಳಿಗೂ ಕೊಡೋದು ನ್ಯಾಯ ಕಣೋ ಎಂದಳು ಅಮ್ಮ. ಒಂದೆರಡು ಲಕ್ಷ ಕೊಡೋಣ ಬಿಡಿ ಎಂದಳು ಸೊಸೆ. ಯಾರಿಗೆ ಬೇಕು ಎರಡು ಲಕ್ಷ ನೀವೇ ಇಟ್ಟುಕೊಳ್ಳಿ ಎಂದಳು ಮಗಳು. ಕೊಡ್ತಾರೆ ಬಿಡಮ್ಮ ಸಮಾಧಾನ ಪಡಿಸಿದಳು ಅವಳಮ್ಮ. ನೀವು ಏನೂ ನನಗೆ ಭಿಕ್ಷೆ ಕೊಡ್ತಾ ಇಲ್ಲ, ಅವರು ನನಗೂ ಅಪ್ಪನೇ, ಸಮಪಾಲು ಬೇಕು, ಇಲ್ಲಾಂದ್ರೆ ಕೋರ್ಟ್‌ಗೆ ಹೋಗ್ತಿನಿ ಎಂದು ಆವಾಜ್ ಹಾಕಿದಳು ಮಗಳು. ದೊಡ್ಡವರು ಮಧ್ಯೆ ಬಂದರು. ಐದು ಲಕ್ಷಕ್ಕೆ ಮಗಳನ್ನು ಸಮಾಧಾನ ಮಾಡಿದರು.

ದುಡ್ಡಿನ ವ್ಯವಹಾರದಲ್ಲಿ ಎರಡು ಮೂರು ದಿನ ಕಳೆದು ಹೋದವು. ಈ ಎರಡು ಮೂರು ದಿನವೂ ದುಡ್ಡು ದುಡ್ಡು ಅಂತ ಕಳೆದು ಹೋದವೇ ಹೊರತು ಯಾರೂ ಸಹ ಸತ್ತ ನನ್ನ ಜ್ಞಾಪಿಸಿಕೊಳ್ಳಲೇ ಇಲ್ಲ! ಮಗ ಬ್ಯಾಂಕಿಗೆ ಹೋಗಿ ತಂದಿದ್ದು ನನ್ನ ನಲ್ವತ್ತು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು. ಬಂದವನೇ ಹೆಂಡತಿಗೆ ಇಪ್ಪತ್ತು ಲಕ್ಷ ಕೊಟ್ಟು, ಉಳಿದ ಇಪ್ಪತ್ತು ಲಕ್ಷ ಎಲ್ಲರ ಮುಂದೆ ಹಿಡಿದ. ಮಗಳು ಐದು ಲಕ್ಷ ತಕ್ಕೊಂಡು ತನ್ನ ಬ್ಯಾಗ್‌ನಲ್ಲಿಟ್ಟುಕೊಂಡಳು. ಉಳಿದ ಹದಿನೈದು ಲಕ್ಷನ ಅತ್ತೆ ಹೆಸರಿನಲ್ಲಿ ಬಾಂಡ್ ಮಾಡೋಣ ಎಂಬ ಸಲಹೆಯನ್ನು ಸೊಸೆ ಕೊಟ್ಟಳು. ಅತ್ತೆ, ನೀನು ಐದು ಲಕ್ಷ ತಗೊ ಎಂದು ಸೊಸೆಯ ಕೈಗೆ ಕೊಟ್ಟಳು. ಬೇಡ... ನನಗೆ ಬೇಡ... ಎಂದ ಸೊಸೆಗೆ ಒತ್ತಾಯ ಮಾಡಿ ಕೈಗಿಟ್ಟಳು. ಹತ್ತು ಲಕ್ಷ ರೂಪಾಯಿಗಳ ಬಾಂಡ್ ಅನ್ನು ಅಮ್ಮನ ಕೈಗೆ ತಂದು ಕೊಟ್ಟ ಮಗ. ಅದನ್ನು ಕಣ್ಣಿಗೆ ಒತ್ತಿಕೊಂಡು, ಸಾಯೊ ಕಾಲದಲ್ಲಿ ನನ್ನ ಗಂಡ ಬಿಟ್ಟು ಹೋಗಿದ್ದು ಎಂದು ಕಣ್ಣೀರು ಹಾಕಿದಳು ನನ್ನ ಹೆಂಡತಿ. ಏಳನೆಯ ದಿನ ಸ್ನೇಹಿತರೆಲ್ಲ ಸೇರಿ ಸಂತಾಪ ಸಭೆ ನಡೆಸಿದರು. ನನ್ನ ಫೋಟೋಗೆ ಹೂವಿನ ಹಾರ ಹಾಕಿ, ತಮಗೆ ತೋಚಿದ್ದನ್ನು ಮಾತಾಡಿ ಸಂತಾಪ ಸಭೆಯನ್ನು ಮುಗಿಸಿದರು. ಕೊನೆಗೆ ನನ್ನ ಹೆಸರಲ್ಲಿ ಸಮೋಸಾ ತಿಂದು, ಕಾಫಿ ಕುಡಿದು ಸಭೆಯನ್ನು ಮುಗಿಸಿದರು.

ಹದಿಮೂರನೆಯ ದಿನ ಎಲ್ಲಾ ಕಾರ್ಯ ಮುಗಿಸಿ, ಹದಿನಾಲ್ಕನೆಯ ದಿನ ಮಗಳು ಊರಿಗೆ ಹೊರಟು ನಿಂತಳು. ಮಗಳನ್ನು ಕಳುಹಿಸಿದ ಮರುದಿನ ಮಗ–ಸೊಸೆ ಊರಿಗೆ ಹೋಗಲು ತಯಾರಾಗಿ ನಿಂತರು. ಇನ್ನೊಂದು ವಾರ ಇದ್ದು ಹೋಗಿ ಎಂದ ಅವರಮ್ಮನ ಮಾತಿಗೆ, ಆಫೀಸಿನಲ್ಲಿ ಕೆಲಸ ಇದೆ, ರಜೆ ಇಲ್ಲ. ನಿನ್ನ ಮೊಮ್ಮಗನ ಶಾಲೆ ಬೇರೆ. ಮತ್ತೆ ಬರುತ್ತೇವೆ ಎಂದು ಹೇಳಿ ಹೊರಟೇ ಬಿಟ್ಟರು.

ಮನೇಲಿ ಈಗ ಹೆಂಡತಿ ಒಬ್ಬಳೆ. ಅಕ್ಕಪಕ್ಕದ ಮನೆ ಹುಡುಗರು ಬಂದು ಟಿವಿಯಲ್ಲಿ ಕ್ರಿಕೆಟ್ ಮ್ಯಾಚ್ ಹಚ್ಚಿದರು. ಅವರ ಜೊತೆ ಆ ಮ್ಯಾಚ್‌ಗಳನ್ನು ನೋಡ್ತಾ ಕುಳ್ತಿರುತ್ತಿದ್ದ ಹೆಂಡತಿ ಆಮೇಲೆ ಒಂದೊಂದೇ ಧಾರಾವಾಹಿಗಳಲ್ಲಿ ಮಗ್ನಳಾದಳು. ಬರುವ ಪೆನ್ಷನ್ ಹಣದಲ್ಲಿ ತನಗೆ ಇಷ್ಟವಾದನ್ನು ಮಾಡಿಕೊಂಡು ತಿನ್ನೋದು, ಅಕ್ಕಪಕ್ಕದವರ ಜೊತೆ ಶಾಪಿಂಗ್ ಎಂದು ಸುತ್ತಾಡಿ ಸಮಯ ಕಳೆಯ ತೊಡಗಿದಳು.

ಮೂವತ್ತಾರು ವರ್ಷಗಳ ಕಾಲ ದುಡಿದು ನನಗೆ ಅಂತ ಏನನ್ನು ಬಯಸದೆ ಕೂಡಿಟ್ಟ ಹಣದಲ್ಲಿ ಎಲ್ಲರೂ ಸಂತೋಷಪಟ್ಟರು. ಆ ಸಂತೋಷದಲ್ಲಿ ನನ್ನ ಸಂಪೂರ್ಣವಾಗಿ ಮರೆತೇ ಹೋದರು. ನಾನೊಬ್ಬ ಅವರ ಜೊತೆಗಿದ್ದೆ ಎಂಬುದು ಅವರ ಮನದಿಂದ ಬಹುದೂರ ಹೋಯಿತು. ನನ್ನ ಇರುವಿಕೆಗೆ ಸಾಕ್ಷಿಯಾಗಿ, ನನ್ನ ನಗು ಮುಖದ ಫೋಟೊವೊಂದು ಮನೆಯಲ್ಲಿ ಗೋಡೆಯ ಮೇಲೆ ಅನಾಥವಾಗಿ ನೇತಾಡುತ್ತಿತ್ತು. ಸತ್ತ ಹದಿಮೂರನೆಯ ದಿನ ಹಾಕಿದ ಹೂವಿನ ಹಾರ ವರ್ಷವಾದರೂ ಹಾಗೆ ಫೋಟೋಗೆ ಅಂಟಿ ಕೊಂಡಿತ್ತು

ಬದುಕು ಅಂದ್ರೆ ಇಷ್ಟೇ. ಅರವತ್ತು ವರ್ಷ ಬಾಳಿದರೂ ಅರವತ್ತು ನಿಮಿಷದಲ್ಲಿ ಮರೆತು ಹೋಗ್ತಾರೆ. ಏನು ಮಾಡಿದರು, ಎಷ್ಟು ಮಾಡಿದರು ಜೀವನ ಅಂದ್ರೆ ಇಷ್ಟೇ ಅಲ್ವೇ...! ಹೀಗೆ ಅಂದುಕೊಂಡೆ ನನ್ನ ಆತ್ಮದ ಮನದೊಳಗೆ!!!

(ಮಾಹಿತಿ ಹಂಚಿಕೆ : ಡಾ ಕೃಷ್ಣ ಕುಮಾರ್. ಬಿ, ಮೈಸೂರು.– ವಾಟ್ಸಾಪ್ ಗ್ರೂಪ್)

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸರ್ವ ಜನಾಂಗದ ಶಾಂತಿಯ ತೋಟ ಈಗ ಕುಡುಕರ ತೋಟ

ಮನೆಮನೆಗೂ 'ಮದ್ಯಭಾಗ್ಯ' ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ



ಬೆಂಗಳೂರು, ಸೆ.24– ಕರ್ನಾಟಕ ರಾಜ್ಯವು ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ, ಐಟಿ–ಬಿಟಿಗೆ ಪ್ರಸಿದ್ಧಿ. ಇನ್ನು ಮುಂದೆ ಇದು ಬದಲಾಗಬಹುದು. ಕಾರಣ ವಿಷ್ಟೇ, ಕಾಂಗ್ರೆಸ್ ಸರಕಾರ 'ಕರ್ನಾಟಕವನ್ನು ಕುಡುಕರ ತೋಟ'ವನ್ನಾಗಿ ಮಾಡಲಿದೆ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹೇಳಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಚುನಾವಣೆಗೆ ಮುನ್ನ 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುತ್ತಿದ್ದರು, ಗೆದ್ದ ನಂತರ 'ಕರ್ನಾಟಕ ಕುಡುಕರ ತೋಟ' ಎನ್ನುತ್ತಿದ್ದಾರೆ. ಇದು ಕಾಂಗ್ರೆಸ್ ಸರ್ಕಾರದ ಸಂಕಲ್ಪ ಎಂದು ಹೇಳಿದ್ದಾರೆ.

ಯೋಜನೆಗಳ ಹೆಸರಲ್ಲಿ ಕೊಳ್ಳೆ ಹೊಡೆಯುವ ಹುನ್ನಾರ ಕಾಂಗ್ರೆಸ್ ಸರಕಾರದ್ದು. ಒಂದೆಡೆ ಮನೆಮನೆಗೂ ಗೃಹಜ್ಯೋತಿ ಎಂದ್ಹೇಳಿ, ಈಗ ಮನೆಮನೆಗೂ 'ಮದ್ಯಭಾಗ್ಯ' ನೀಡಲು ಹೊರಟಿದೆ. ಸರಕಾರವು ಧನ ಪಿಶಾಚಿ ಅವತಾರವೆತ್ತಿ ಅಬಕಾರಿ ಆದಾಯ ಹೆಚ್ಚಿಸಿಕೊಳ್ಳಲು ಈಗ ಮದ್ಯ ಸಮಾರಾಧನೆಗೆ ಶ್ರೀಕಾರ ಹಾಡಿದೆ. ಇದು 6ನೇ ಗ್ಯಾರಂಟಿ. ಖೊಟ್ಟಿ ಗ್ಯಾರಂಟಿಗಳಿಂದ ಜನರನ್ನು ಯಾಮಾರಿಸಿದ್ದು ಸಾಲದೆಂಬಂತೆ ಪ್ರತೀ ಪಂಚಾಯಿತಿಯಲ್ಲೂ ಮದ್ಯದ ಅಂಗಡಿ ತೆರೆಯಲು ಸಿದ್ಧತೆ ನಡೆಸಿರುವುದು ನಾಚಿಕೆಗೇಡು. ಅಕ್ಕಿ, ಬೇಳೆ, ದವಸ ಧಾನ್ಯ, ಹಣ್ಣು ತರಕಾರಿ, ಹಾಲು–ಮೊಸರು ಸಿಗುವ ಸೂಪರ್ ಮಾರುಕಟ್ಟೆಗಳಲ್ಲೂ ಮುಕ್ತವಾಗಿ ಮದ್ಯ ಮಾರಾಟಕ್ಕೆ ಅವಕಾಶ ನೀಡುವುದು ಅಸಹ್ಯದ ಪರಮಾವಧಿ. ಇದಾ ಸಮಾಜವಾದ?

> ನಾರಿಯರಿಗೆ 'ಶಕ್ತಿ' ತುಂಬುತ್ತೇವೆ ಎಂದ ಸರಕಾರ, ಈಗ ಅವರ ಬಾಳಿಗೆ ಬೆಂಕಿ ಹಾಕುತ್ತಿದೆ. 'ಗೃಹಲಕ್ಷ್ಮೀ' ಎಂದ ಸರಕಾರ ಅವರ ಬಾಳಿಗೆ ಗ್ರಹಣವಾಗಿದೆ. 'ಗೃಹಜ್ಯೋತಿ' ಎಂದ ಸರಕಾರ ಅವರ ಬಾಳ ಜ್ಯೋತಿಯನ್ನೇ ನಂದಿಸುತ್ತಿದೆ. 'ಅನ್ನಭಾಗ್ಯ' ಎಂದ ಸರಕಾರ, ಈಗ 'ಮದ್ಯಭಾಗ್ಯ' ಎನ್ನುತ್ತಿದೆ. **–ಹೆಚ್.ಡಿ.ಕುಮಾರಸ್ವಾಮಿ**

3,000 ಜನಸಂಖ್ಯೆಯುಳ್ಳ ಪ್ರತೀ ಪಂಚಾಯಿತಿ ವ್ಯಾಪ್ತಿಯಲ್ಲಿ ಬಾರ್ ತೆಗೆದು ಮನೆಹಾಳು ಮಾಡಲಿದೆ ಸರಕಾರ. ಸುಳ್ಳು ಗ್ಯಾರಂಟಿಗಳನ್ನು ನಂಬಿ ಮೋಸ ಹೋದ ಮಹಿಳೆಯರಿಗೆ ಕರ್ನಾಟಕದಲ್ಲಿ ಕೇಡುಗಾಲ ಶುರುವಾಗಿದೆ. ಅವರ ಸೌಭಾಗ್ಯಕ್ಕೆ ಎದುರಾಗಿದೆ ಸಂಚಕಾರ. ಇದು ಮನೆಹಾಳು ಸರಕಾರ ಎಂದು ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿದ್ವಾನ್ ವಿಷ್ಣುದೇವ್ ನಂಬೂದರಿ ಗಾನಮೋಡಿ



ಮೈಸೂರು, ಸೆ.24(ಎಸ್‌ಪಿಎನ್)– ಮೈಸೂರಿನ ವಾಣಿವಿಲಾಸ(ವಿವಿ) ಮೊಹಲ್ಲಾ 8ನೇ ಕ್ರಾಸ್‌ನಲ್ಲಿ ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟಬಲ್(ಎಸ್‌ಪಿವಿಜಿಎಂಸಿ) ಟ್ರಸ್ಟ್ ವತಿಯಿಂದ ಗಣೇಶ ಮಹೋತ್ಸವದ ಅಂಗವಾಗಿ 62ನೇ 'ಪಾರಂಪರಿಕ ಸಂಗೀತೋತ್ಸವ'ದ ಆರನೇ ದಿನದ ವಿದ್ವಾನ್ ವಿಷ್ಣುದೇವ್ ನಂಬೂದರಿ ಅವರ ಗಾಯನ ಸಂಗೀತ ಪ್ರಿಯರ ಮನಸೂರೆಗೊಂಡಿತು.

ವಿವಿಧ ರಾಗ ಸಂಯೋಜನೆಗಳಲ್ಲಿ ಸಂಗೀತ ಗಾಯನ ನಡೆಸಿಕೊಟ್ಟರಲ್ಲದೆ, ದೇವರನಾಮಗಳು, ವಿನಾಯಕನ ಕುರಿತಾದ ವಿವಿಧ ಭಜನ್‌ಗಳನ್ನು ಹಾಡಿ, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ವಿದ್ವಾನ್ ಕಾರ್ತಿಕ ನಾಗರಾಜ್ (ವಯೋಲಿನ್), ವಿದ್ವಾನ್ ರಮಣಮೂರ್ತಿ (ಮೃದಂಗ), ವಿದ್ವಾನ್ ಅಮೃತ್ (ಖಂಜಿರ) ನುಡಿಸಿದರು. ಇದಕ್ಕೂ ಮುನ್ನ ರಾಜಶೇಖರ ವಿಳಾಸ ಕುರಿತು ವಿದುಷಿ ಧನ್ಯ ಗಮಕ ವಾಚನ ಮಾಡಿದರು. ಪ್ರೊ.ಮೊರಬದ ಮಲ್ಲಿಕಾರ್ಜುನ ವ್ಯಾಖ್ಯಾನಿಸಿದರು. ಈ ವೇಳೆ ಟ್ರಸ್ಟ್‌ನ ಕಾರ್ಯದರ್ಶಿ ಸಿ.ಆರ್. ಹಿಮಾಂಶು, ಗುರುರಾಜ್ ಮತ್ತಿತರರಿದ್ದರು.

ಕೆಪಿಎಸ್‌ಸಿ ಸದಸ್ಯರಾಗಿ ನೇಮಕ



ಮೈಸೂರು, ಸೆ. 24(ಆರ್‌ಕೆ)– ಕೆಪಿಎಸ್‌ಸಿ ಸದಸ್ಯರಾಗಿ ಬೆಂಗಳೂರಿನ ಜಿಲ್ಲಾ ನ್ಯಾಯಾಧೀಶರಾದ ಮೀಡಿಯೇಷನ್ ಸೆಂಟರ್ ನಿರ್ದೇಶಕ ಮುಸ್ತಫಾ ಹುಸೇನ್ ಸೈಯದ್ ಅಜೀಜ್ ಅವರನ್ನು ನೇಮಕ ಮಾಡಲಾಗಿದೆ.

ಆಡಳಿತ ಸುಧಾರಣೆ ಇಲಾಖೆ ಅಧೀನ ಕಾರ್ಯದರ್ಶಿ ಹೆಚ್.ಕೆ.ಶಾಂತರಾಜು ರಾಜ್ಯಪಾಲರ ಹೆಸರಿನಲ್ಲಿ ಸೆ.22ರಂದು ಮುಸ್ತಫಾ ಅವರನ್ನು ನೇಮಿಸಿ ಅಧಿಸೂಚನೆ ಹೊರಡಿಸಿದ್ದಾರೆ. ಮೈಸೂರಿನವರಾದ ಅವರು, ಮಹಾರಾಜ ಕಾಲೇಜಿನಲ್ಲಿ ಕ್ರಿಮಿನಾಲಜಿ, ಪತ್ರಿಕೋದ್ಯಮ ಮತ್ತು ಸಾರ್ವಜನಿಕ ಆಡಳಿತ ಪದವಿ ಪಡೆದು, ಶಾರದಾ ವಿಲಾಸ ಕಾಲೇಜಿನಲ್ಲಿ ಕಾನೂನು ಪದವಿ ಗಳಿಸಿದ್ದಾರೆ. ಮೈಸೂರಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದ ಮುಸ್ತಫಾ ಅವರು, 1997ರಲ್ಲಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯಾಗಿ ನೇಮಕಗೊಂಡು ನಂತರ ವಿವಿಧ ಹುದ್ದೆಗಳನ್ನು ನಿರ್ವಹಿಸಿ ಪ್ರಸ್ತುತ ಬೆಂಗಳೂರಿನ ಮೀಡಿಯೇಷನ್ ಸೆಂಟರ್ ಡೈರೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡ ಅವರನ್ನು ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಕೇಬಲ್ ನಾಗರಾಜು, ಮೇಟಗಳ್ಳಿ ವಾಸು, ನಿಂಗರಾಜು ಮತ್ತಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಮನ್ ಕಿ ಬಾತ್: ಕನ್ನಡ ಹಾಡು ಹಾಡಿದ ವಿದೇಶಿ ಪ್ರಜೆ ಉಲ್ಲೇಖಿಸಿದ ಮೋದಿ

ಬೆಂಗಳೂರು, ಸೆ.24– ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕಿ ಬಾತ್‌ನ 105ನೇ ಸಂಚಿಕೆಯಲ್ಲಿ ಜರ್ಮನಿಯ ಕ್ಯಾಸ್ಮೆ ಅವರು ಭಾರತೀಯ ಸಂಗೀತದ ಬಗೆಗಿನ ವಿಶೇಷ ಒಲವನ್ನು ಹೊಂದಿರುವ ಬಗ್ಗೆ ಮಾತನಾಡಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ದೃಷ್ಟಿ ಕಳೆದುಕೊಂಡಿರುವ ಜರ್ಮನಿಯ 21 ವರ್ಷದ ಕ್ಯಾಸ್ಮೆ ಅವರಿಗೆ ವಿಕಲಚೇತನತೆ ಎಂದೂ ಅಡ್ಡಿಯಾಗಿಲ್ಲ. ಭಾರತೀಯ ಭಾಷೆಗಳಲ್ಲಿ ಕ್ಯಾಸ್ಮೆ ಅವರು ಹಾಡುವುದನ್ನು ಕೇಳಿದರೆ ನೀವು ಮಂತ್ರಮುಗ್ಧರಾಗುತ್ತೀರಿ. ಸಂಗೀತ ಬಗೆಗೆ ಅಪಾರ ಒಲವನ್ನು ಹೊಂದಿರುವ ಅವರು ಕನ್ನಡ ಭಾಷೆಯಲ್ಲೂ ಹಾಡಿದ್ದಾರೆ. ಕ್ಯಾಸ್ಮೆ ಹಾಡಿರುವ ಕ್ಲಿಪ್ ಒಂದನ್ನು ಇಂದು ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ಲೇ ಮಾಡಿದ್ದಾರೆ.

ವರ್ಗೀಕೃತ ಜಾಹೀರಾತು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 25 ಸೆಪ್ಟೆಂಬರ್ 2023

ಕೊಡವ ಸಂಸ್ಕೃತಿ ಬಿಂಬಿಸಿದ ಕೊಡವ ಸಮಾಜದ ನೂರಾಂಡ್ ನಮ್ಮೆ



ಸಾಂಪ್ರದಾಯಿಕ ಉಡುಪಿನಲ್ಲಿ ಕಂಗೊಳಿಸಿದ ಕೊಡವರು, ವೈಭವದ ಮೆರವಣಿಗೆ



ವಿರಾಜಪೇಟೆ, ಸೆ.24– ವಿರಾಜಪೇಟೆ ಕೊಡವ ಸಮಾಜದ ನೂರಾಂಡ್ ನಮ್ಮೆ ಕಾರ್ಯಕ್ರಮದಲ್ಲಿ ಕೊಡವ ಸಾಂಪ್ರದಾಯ ವಿಜೃಂಭಿಸಿತು. ಕೊಡವ ಸಮಾಜದ ಸದಸ್ಯರು ಹಾಗೂ ಕೊಡವ ಬಾಂಧವರು ಕೊಡವ ಸಾಂಪ್ರದಾಯಿಕ ಉಡುಪಿನೊಂದಿಗೆ ಭಾಗವಹಿಸಿ ತಮ್ಮ ಆಚಾರ–ವಿಚಾರ ಮತ್ತು ಸಂಸ್ಕೃತಿಯನ್ನು ಬಿಂಬಿಸಿ ಎಲ್ಲರ ಗಮನ ಸೆಳೆದರು. ಇಲ್ಲಿನ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ನಂತರ ವೈಭವದ ಮೆರವಣಿಗೆ ನಡೆಯಿತು. ಗಡಿಯಾರ ಕಂಬದ ಮೂಲಕ ದೊಡ್ಡಟ್ಟಿ ಚೌಕದ ಮಾರ್ಗವಾಗಿ ಅಪ್ಪಯ್ಯಸ್ವಾಮಿ ರಸ್ತೆ ಮೂಲಕ ಕೊಡವ ಸಮಾಜದ ಜಮ್ಮ ಕಲಾವೇದಿಕೆವರೆಗೆ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಕೊಡವ ಸಾಂಪ್ರದಾಯಿಕ ವಾದ್ಯ, ಕಲಾ ತಂಡಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ದಾರಿಯುದ್ದಕ್ಕೂ ಸಾರ್ವಜನಿಕರು ರಸ್ತೆ ಬದಿ ನಿಂತು ಮೆರವಣಿಗೆ ಕಣ್ತುಂಬಿಕೊಂಡರು. ನಂತರ ನಡೆದ ವೇದಿಕೆ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು. ನಂತರ ಸಂಸದ ಪ್ರತಾಪ್ ಸಿಂಹ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಕೊಡವ ಸಮಾಜದ ಅಧ್ಯಕ್ಷ ಕುಂಬೆರ ಎ.ಮನುಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿದ್ದ ಲೆಫ್ಟಿನೆಂಟ್ ಜನರಲ್ ಚೆನ್ನಿರ ಬನ್ನಿ ಪೊನ್ನಪ್ಪ, ಎನ್.ಎಸ್.ಜಿ ಮನೆಯಪಂಡ ಎ.ಗಣಪತಿ, ತೀತಿರ ರೋಷನ್ ಅಪ್ಪಚ್ಚು ಮಾತನಾಡಿದರು.

ಈ ಸಂದರ್ಭ ಪದ್ಮಶ್ರೀ ಪ್ರಶಸ್ತಿ ವಿಜೇತೆ ಐಮುಡಿಯಂಡ ರಾಣಿ ಮಾಚಯ್ಯ, ಅಂತ ರಾಷ್ಟ್ರೀಯ ಹಾಕಿ ತರಬೇತುದಾರ ಬೊಳ್ಳಪಂಡ ಜೆ. ಕಾರ್ಯಪ್ಪ, ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಪೊನ್ನಣ್ಣ, ಲೆಫ್ಟಿನೆಂಟ್ ಜನರಲ್ ಚೆನ್ನಿರ ಬನ್ನಿ ಪೊನ್ನಪ್ಪ, ಡೈರೆಕ್ಟರ್ ಜನರಲ್ ಆಫ್ ಎನ್.ಎಸ್.ಜಿ ಮನೆಯಪಂಡ ಎ.ಗಣಪತಿ, ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ತೀತಿರ ರೋಷನ್ ಅಪ್ಪಚ್ಚು ಅವರುಗಳಿಗೆ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಕೆ.ಸುಬ್ರಮಣಿ, ಕೊಡವ ಸಮಾಜದ ಉಪಾಧ್ಯಕ್ಷ ಕುಂಞಮ್ಮಂಡ ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಕೊಡವ ಸಮಾಜದ ಸಾಂಸ್ಕೃತಿಕ ಕಾರ್ಯದರ್ಶಿ ಮಾದೇಯಂಡ ಸಂಪಿ ಪೂಣಚ್ಚ, ಕ್ರೀಡಾ ಕಾರ್ಯದರ್ಶಿ ಅಮ್ಮಣಿಚಂಡ ಸುಬ್ರಮಣಿ, ನಿರ್ದೇಶಕರುಗಳಾದ ಬಾಚಿರ ಜಗದೀಶ್, ಚೇಮಿರ ಅರ್ಜುನಾ, ತಾತಂಡ ಕಬೀರ್, ಪುಲಿಯಂಡ ಪೊನ್ನಣ್ಣ, ಚೋಕಂಡ ರೇಖಾ ಪುಷ್ಪಾವತಿ, ಮೇರಿಯಂಡ ಗಾಯತ್ರಿ, ಮುಲ್ಲೆಂಗಡ ಶೀಲಾ ಅಪ್ಪಯ್ಯ, ಕೊಡವ ಕೇರಿಯ ಪದಾಧಿಕಾರಿಗಳು, ವಿವಿಧ ಕೊಡವ ಸಮಾಜದ ಪ್ರತಿನಿಧಿಗಳು, ಕೊಡವ ಸಮುದಾಯ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕೋವಿ ಲೈಸೆನ್ಸ್ 10 ವರ್ಷಕ್ಕೊಮ್ಮೆ ನವೀಕರಿಸಲು ಅವಕಾಶವಿದೆ; ಇದು ಕಾಯ್ದೆ ನಿಯಮ ಅಷ್ಟೆ

- ಸಂಸದ ಪ್ರತಾಪ ಸಿಂಹ ಸ್ಪಷ್ಟನೆ
- ಜಮ್ಮಾ ಬಾಣೆ ಹಕ್ಕು ಕೊಡಗಿನವರದ್ದು



ವಿರಾಜಪೇಟೆ, ಸೆ.24– ಪ್ರಸಕ್ತ ಪರಿಸ್ಥಿತಿಯಲ್ಲಿ ಶಸ್ತ್ರಾಸ್ತ್ರ ಕಾಯಿದೆ(ಆರ್ಮ್ಸ್ ಆಕ್ಟ್) ಯನ್ವಯ ಈಗ ಕೋವಿಗೆ 10 ವರ್ಷಕ್ಕೆ ಸೀಮಿತವಾಗಿ ಲೈಸೆನ್ಸ್ ನೀಡಲು ಅವಕಾಶವಿರುತ್ತದೆ. ಮತ್ತೆ ಅದನ್ನು ನವೀಕರಿಸಿಕೊಳ್ಳಬೇಕಾಗುತ್ತದೆ ಅಷ್ಟೆ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ವಿರಾಜಪೇಟೆ ಕೊಡವ ಸಮಾಜದ ವತಿಯಿಂದ ಪ್ರವೀಣ ಶಾಲೆಯಲ್ಲಿ ಭಾನುವಾರ ಏರ್ಪಡಿಸಿದ್ದ ನೂರಾಂಡ್ ನಮ್ಮೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ವೇದಿಕೆಯಲ್ಲಿ ರಾಜಕೀಯ ವಿಚಾರಗಳನ್ನು ಮಾತನಾಡಲು ನನಗೆ ಇಷ್ಟವಿಲ್ಲ. ಆದರೆ ಶಾಸಕರಾದ ಪೊನ್ನಣ್ಣನವರು ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದರಿಂದ ಅನಿವಾರ್ಯವಾಗಿ ಸ್ಪಷ್ಟನೆ ನೀಡುತ್ತಿದ್ದೇನೆ ಎಂದು ಹೇಳಿ, ಆರ್ಮ್ಸ್ ಆಕ್ಟ್‌ನಲ್ಲಿ 10 ವರ್ಷ ಅವಧಿಗೆ ಮಾತ್ರ ಲೈಸೆನ್ಸ್ ನವೀಕರಣಕ್ಕೆ ಅವಕಾಶವಿದೆ. ಅದರಂತೆ 2029ರವರೆಗೆ ಈಗ ನವೀಕರಣ ಮಾಡಿಕೊಟ್ಟಿದ್ದು, ನಂತರ ಮತ್ತೆ 10 ವರ್ಷಗಳಿಗೆ ನವೀಕರಣಕ್ಕೆ ಅವಕಾಶವಿರುತ್ತದೆ. ಯುಪಿಎ ಸರ್ಕಾರವಿದ್ದಾಗಲೂ ಇದೇ ನಿಯಮವಿತ್ತು. ಹಾಗಾದರೆ 54 ವರ್ಷ ಕಾಂಗ್ರೆಸ್ ಆಡಳಿತವಿದ್ದ ಸಂದರ್ಭದಲ್ಲೇ ಶಾಶ್ವತ ಅನುಮತಿ ನೀಡಬಹುದಿತ್ತಲ್ಲವೇ ಎಂದು ಅವರು ಪ್ರಶ್ನಿಸಿದರು.

ಸಿದ್ದರಾಮಯ್ಯನವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಕೊಡಗಿನವರನ್ನು ಅವಹೇಳನ ಮಾಡಿದ ಕೊ.ಚೆನ್ನಬಸಪ್ಪ ಅವರನ್ನು 2013ರಲ್ಲಿ ಕೊಡಗಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿದ್ದರು. ಜಮ್ಮಾ ಬಾಣೆ ಹಿಡುವಳಿದಾರರ ಜಮೀನು ಸರ್ಕಾರಿ ಭೂಮಿ ಎಂದು 2004ರಲ್ಲಿ ಧರ್ಮಸಿಂಗ್ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಎಷ್ಟೇ ಹೋರಾಟ ನಡೆಸಿದರೂ ವಾಪಸ್ ಪಡೆಯಲಿಲ್ಲ. ಆದರೆ 2008ರಲ್ಲಿ ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ ಒಂದೇ ತಿಂಗಳಲ್ಲಿ ಸುತ್ತೋಲೆ ವಾಪಸ್ ಪಡೆದು, ಜಮ್ಮಾ ಬಾಣೆ ಜಮೀನಿನ ಹಕ್ಕನ್ನು ಮತ್ತೆ ಕೊಡವರಿಗೆ ನೀಡಿದರು ಎಂದು ತಿಳಿಸಿದರು. ಕೊಡಗು ಅಭಿವೃದ್ಧಿ ನಿಗಮವನ್ನು ಇಷ್ಟು ವರ್ಷ ಯಾರೂ ಮಾಡಿರಲಿಲ್ಲ. ಆದರೆ ಬಿಜೆಪಿ ಸರ್ಕಾರ ಮಾಡಿ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟಿತು. ಕುರ್ಚಿಯಲ್ಲಿ ಕೂರುವವರು ಬದಲಾದರೂ ಆಡಳಿತ ನಿರಂತರವಾಗಿರುತ್ತದೆ ಎಂದರು.

ಕೋವಿಗೆ ಶಾಶ್ವತ ವಿನಾಯಿತಿ ಕಲ್ಪಿಸಿಕೊಡುವಂತೆ ಸಂಸದ ಪ್ರತಾಪ್‌ಸಿಂಹ ಅವರಲ್ಲಿ ಶಾಸಕ ಪೊನ್ನಣ್ಣ ಮನವಿ



ವಿರಾಜಪೇಟೆ, ಸೆ.24– ನೂರಾಂಡ್ ನಮ್ಮೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿರಾಜಪೇಟೆ ಶಾಸಕರೂ ಆದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಬ್ರಿಟಿಷ್ ಸರ್ಕಾರ 1850ರಲ್ಲಿ ಕೊಡವರಿಗೆ ನೀಡಿದಂತಹ ಕೋವಿ ವಿನಾಯಿತಿಯನ್ನು, ಸ್ವಾತಂತ್ರ್ಯ ನಂತರ ಸ್ವತಂತ್ರ ಭಾರತ ಸರ್ಕಾರವು ಕೊಡವರಿಗೆ ಕೋವಿ ವಿನಾಯಿತಿಯನ್ನು ಮುಂದುವರೆಸಿತ್ತು.

ಈ ವಿನಾಯಿತಿಯನ್ನು ನ್ಯಾಯಾಲಯದಲ್ಲಿ ಒಬ್ಬರು ಮೊಕದ್ದಮೆ ಹೂಡಿದ್ದರಿಂದ ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ 2018ರಲ್ಲಿ ಹಾಲಿ ವಿನಾಯಿತಿ ಅವಕಾಶವನ್ನು ಮರುಪರಿಶೀಲನೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿತ್ತು. ಕೇಂದ್ರ 2019ರಲ್ಲಿ 10 ವರ್ಷಗಳಿಗೆ ವಿನಾಯಿತಿ ನೀಡುವ ಮೂಲಕ ಮೊದಲು ಕೊಡವರಿಗಿದ್ದ ಖಾಯಂ ವಿನಾಯಿತಿ ಮೇಲೆ ಮಿತಿ ಹಾಕಿತು. ಇದರ ಬಗ್ಗೆ ಸಂಸದರಾದ ಪ್ರತಾಪ್ ಸಿಂಹ ಅವರು ಕೇಂದ್ರದ ಗಮನ ಸೆಳೆದು ಮೊದಲಿದ್ದ ರೀತಿಯಲ್ಲಿ ಶಾಶ್ವತ ವಿನಾಯಿತಿಯನ್ನು ಕಲ್ಪಿಸಬೇಕಿದೆ ಎಂದು ವೇದಿಕೆಯಲ್ಲಿದ್ದ ಸಂಸದರಲ್ಲಿ ಮನವಿ ಮಾಡಿಕೊಂಡರು.

ಹಾಗೆಯೇ ಕೊಡಗಿನ ಜಮ್ಮಾ ಬಾಣೆ ಸೇರಿದಂತೆ ಜನರ ನಾನಾ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಸರಕಾರದ ಗಮನ ಸೆಳೆದು ಚರ್ಚೆ ನಡೆಸಿ ಬಗೆಹರಿಸಿಕೊಳ್ಳಬೇಕಿದೆ. ಜನಾಂಗದ ಏಳಿಗೆಗಾಗಿ ನಾನಾ ಸಂಘ–ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ನಮ್ಮ ಸಹಕಾರ ಸದಾ ಇರುವುದಾಗಿ ತಿಳಿಸಿದರು.

ನಾವೆಲ್ಲರೂ ಪರಸ್ಪರ ಒಗ್ಗಟ್ಟು, ಹೊಂದಾಣಿಕೆಯೊಂದಿಗೆ ಜೀವನ ಸಾಗಿಸಬೇಕು ಹಾಗೂ ನಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕೆ ಜೀವಿತಾವಧಿಯಲ್ಲಿ ಆದಷ್ಟು ಸಮಾಜ ಮುಖಿ ಕಾರ್ಯದಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡು ಸಮಾಜಕ್ಕೆ ಮಾದರಿಯಾಗಿ ಬದುಕನ್ನು ನಡೆಸುವಂತಾಗಬೇಕು. ನಮ್ಮ ಸಂಸ್ಕೃತಿ ಉಳಿಸುವ ಜವಾಬ್ದಾರಿ ಕೊಡವ ಸಮಾಜಗಳ ಮೇಲಿದೆ. ಜನಾಂಗದ ಸಮಸ್ಯೆ ಬಗ್ಗೆ ಸರಕಾರದ ಗಮನ ಸೆಳೆಯುವ ಮೂಲಕ ಸಂಸ್ಕೃತಿಯ ಉಳಿವಿಗಾಗಿ ನಾನು ನಿಮ್ಮೊಡನೆ ಸದಾ ಸಹಕರಿಸುತ್ತೇನೆ ಎಂದು ಅವರು ಹೇಳಿದರು. ನಮಗೆ ಒಗ್ಗಟ್ಟಿನ ರಾಜಕೀಯದ ಅವಶ್ಯವಿದೆ. ಕೊಡವ ಅನ್ನುವ ಪದ ಬಳಕೆಯ ಆದೇಶ ಸರಕಾರದಿಂದ ಅಧಿಕೃತವಾಗಿದ್ದು, ಎಲ್ಲಾ ಸಮಸ್ಯೆಗಳಿಗೂ ಹಂತಹಂತವಾಗಿ ಪರಿಹಾರ ದೊರಕುವುದಾಗಿ ಹೇಳಿದರು.

ಆದಿಚುಂಚನಗಿರಿಯಲ್ಲಿ ರಾಜ್ಯಮಟ್ಟದ ಜಾನಪದ ಕಲಾಮೇಳ

ಬಾಲಗಂಗಾಧರಶ್ರೀಗಳಿಂದ ಜಾನಪದ ಕಲಾವಿದರಿಗೆ ಗೌರವ

ಜಾನಪದ ಕಲಾವಿದೆ ಜೋಗತಿ ಮಂಜಮ್ಮ



ಚುಂಚಶ್ರೀ ಪ್ರಶಸ್ತಿ ಪ್ರದಾನ

ಜಾನಪದ ಕ್ಷೇತ್ರದ ಅನುಪಮ ಸೇವೆಗಾಗಿ ಜೋಗತಿ ಮಂಜಮ್ಮ, ಸಮಾಜ ಸೇವೆ ಸಾಧನೆಗೆ ಮೈಸೂರಿನ ಡಿ.ಮಾದೇಗೌಡ, ಶೈಕ್ಷಣಿಕ ಕ್ಷೇತ್ರದ ಸೇವೆಗೆ ಡಾ.ಎನ್.ಎಸ್. ರಾಮೇಗೌಡ, ಸಾಹಿತ್ಯ ಸೇವೆಯಲ್ಲಿ ಖ್ಯಾತರಾದ ಪ್ರೊ.ಬಿ.ಜಯಪ್ರಕಾಶ್‌ಗೌಡ, ಪರಿಸರ ಮತ್ತು ದೇಶಸೇವೆಗೈದ ಹೆಚ್.ಎಂ.ಶಿವಣ್ಣ ಇವರನ್ನು ಬೆಳ್ಳಿರಥದ ಜೋಡಿ ಸಾರೋಟಿನಲ್ಲಿ, ಸಾವಿರಾರು ಸಂಖ್ಯೆಯ ಜಾನಪದ ಕಲಾವಿದರ ವಿವಿಧ ಬಗೆಯ ಮೇಳಗಳು, ಬೃಹತ್ ಜನಸಾಗರದೊಂದಿಗೆ ಮೆರವಣಿಗೆ ಮೂಲಕ ಕರೆತಂದು, ಬಿಜಿಎಸ್ ಸಭಾ ಭವನದ ವೇದಿಕೆಯಲ್ಲಿ ಚುಂಚಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿಯು ವಿಶೇಷ ಸ್ಮರಣಿಕೆಯೊಂದಿಗೆ, 50 ಸಾವಿರ ನಗದು, ಪ್ರಶಸ್ತಿ ಪತ್ರ, ಬಾಲಗಂಗಾಧರನಾಥ ಸ್ವಾಮೀಜಿಯವರ ಪುತ್ಥಳಿ, ಗುರುಗಳ ಆಶೀರ್ವದಿತ ಏಲಕ್ಕಿಹಾರ, ಶ್ರೀ ಕ್ಷೇತ್ರದ ಗ್ರಂಥಗಳು, ಫಲತಾಂಬೂಲ ಇತ್ಯಾದಿ ಒಳಗೊಂಡಿದೆ. ಇದೇ ಸಂದರ್ಭ ಚುಂಚಶ್ರೀ ಪುಸ್ತಕ ಬಿಡುಗಡೆಗೊಳಿಸಲಾಯಿತು.

ಮಂಡ್ಯ, ಸೆ.24– ಕಳೆದ 2 ದಶಕಗಳ ಹಿಂದೆ ಜಾನಪದ ಕಲಾವಿದರಿಗೆ ಅಷ್ಟು ಗೌರವ ಸಿಗುತ್ತಿರಲಿಲ್ಲ. ಆದರೆ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರಿಂದಾಗಿ ಕಲಾವಿದರಿಗೆ ಗೌರವ ಸಿಗುತ್ತಿದೆ ಎಂದು ಜಾನಪದ ಕಲಾವಿದೆ ಜೋಗತಿ ಮಂಜಮ್ಮ ಹೇಳಿದರು.

ಭಾನುವಾರ ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯ ಬಿಜಿಎಸ್ ಸಭಾ ಭವನದಲ್ಲಿ ನಡೆದ ರಾಜ್ಯಮಟ್ಟದ 44ನೇ ಶ್ರೀಕಾಲಭೈರವೇಶ್ವರ ಜಾನಪದ ಕಲಾ ಮೇಳ ಹಾಗೂ ಚುಂಚಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚುಂಚಶ್ರೀ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಸುಗಮ ದಾರಿಯ ಮಾರ್ಗದರ್ಶನ ತೋರಿ ಕೈ ಹಿಡಿದು ಮುನ್ನಡೆಸುವ ಗುರುಗಳು ನೀಡಿದ ಈ ಪ್ರಶಸ್ತಿ ಜೀವಮಾನದ ಶ್ರೇಷ್ಠ ಪ್ರಶಸ್ತಿಯಾಗಿದೆ. ಡಾ.ಹೆಚ್.ಎಲ್.ನಾಗೇಗೌಡ ಪ್ರಶಸ್ತಿಯನ್ನು ಇದೇ ವೇದಿಕೆಯಲ್ಲಿ ನನ್ನ ಆರಾಧ್ಯ ದೈವ ಸಾಕ್ಷಾತ್ ಬಾಲಗಂಗಾಧರನಾಥ ಸ್ವಾಮೀಜಿ ಅವರಿಂದ ಪಡೆದು ಧನ್ಯಳಾಗಿದ್ದೆ. ಚೌಡಿಕೆ ಪದ ಮತ್ತು ಜೋಗತಿ ನೃತ್ಯ ಕಲಾವಿದೆಯಾದ ಆದ ನಾನು ನನ್ನ ಸಾವಿರಾರು ಜಾನಪದ ಕಲಾವಿದರ ಸಮ್ಮುಖದಲ್ಲಿ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಚುಂಚಶ್ರೀ ಪ್ರಶಸ್ತಿ ಪಡೆದು ನನ್ನ ಜನ್ಮ ಸಾರ್ಥಕ ಭಾವವನ್ನು ಮೆರೆಯುತ್ತಿದೆ. ಕಲಾವಿದರಾದ ತಾವು ಯಾವತ್ತೂ ಪ್ರಶಸ್ತಿಗಳ ಬೆನ್ನತ್ತಬೇಡಿ. ಪ್ರತಿಭೆ ಮತ್ತು ಸಮಯಕ್ಕೆ ಗೌರವ ಕೊಡಿ. ಪ್ರಶಸ್ತಿ ತಾನಾಗಿಯೇ ಹುಡುಕಿಕೊಂಡು ಬರುತ್ತದೆ ಎಂದು ಕಿವಿಮಾತು ಹೇಳಿದರು.

ಯಕ್ಷಗಾನ ಇತ್ಯಾದಿ ಶಾಸ್ತ್ರೀಯ ಕಲಾ ಪ್ರಕಾರಗಳಂತೆ ಜಾನಪದಕ್ಕೆ ನಿಗದಿತ ನಿಯಮಗಳ ಚೌಕಟ್ಟು ಇರುವುದಿಲ್ಲ. ನೀವು ನಂಬಿರುವ ಕಲೆಯನ್ನು ಶ್ರದ್ಧೆಯಿಂದ ಗೌರವಿಸಿ ಪೂಜಿಸಿ ಬೆಳೆಸಿದರೆ ತಮ್ಮ ಸ್ಥಾನಮಾನವೂ ಎತ್ತರಕ್ಕೆ ಏರುತ್ತದೆ. ಆ ನಿಟ್ಟಿನಲ್ಲಿ ಅರ್ಪಣಾ ಮನೋಭಾವದಿಂದ ಶ್ರೇಷ್ಠ ಕಲಾವಿದರಾಗಿ ಕಲಾ ಸಾಮ್ರಾಜ್ಯ ವಿಸ್ತಾರಗೊಳಿಸಿ ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸಕಲ ಕಲೆಗಳಿಗೂ ಜಾನಪದವೇ ಬೇರು. ಈ ಬೇರನ್ನು ಗಟ್ಟಿಗೊಳಿಸಿ ಮತ್ತಷ್ಟು ಬೆಳೆಸಬೇಕಿದೆ. ಪ್ರವರ್ಧಮಾನವಾಗಿರುವ ವಿಜ್ಞಾನ, ತಂತ್ರಜ್ಞಾನ ಯುಗದಲ್ಲೂ ತನ್ನ ಅಸ್ತಿತ್ವವನ್ನು ಮೇಲ್ಪಂಕ್ತಿಯಲ್ಲೇ ತೋರುವ ಮಾತೃ ಸ್ವರೂಪ ಈ ಜಾನಪದ ಎಂದು ಹೇಳಿದರು. ತಾಯಿ ಲಿಪಿ ಇಲ್ಲದ ಪ್ರಾರ್ಥನೆ ಮತ್ತು ಹಾರೈಕೆಯಿಂದ ನಾವೆಲ್ಲ ಇಷ್ಟು ಎತ್ತರಕ್ಕೆ ಬೆಳೆದಿದ್ದೇವೆ. ಪುಣ್ಯ ಪುರುಷರ ಸಾಧನೆ ಅರಿಯಬೇಕು ಎಂದು ಬೋಧಿಸಿದ ಬಾಲಗಂಗಾಧರನಾಥ ಸ್ವಾಮೀಜಿಯವರು ಆರಂಭಿಸಿದ ಈ ಚುಂಚಶ್ರೀ ಪ್ರಶಸ್ತಿ ನಾಡಿನ ಮಹಾನ್ ಶ್ರೇಷ್ಠ ಸಾಧಕರಿಗೆ ಸಲ್ಲುತ್ತಿರುವುದು ಸಾರ್ಥಕತೆಯೊಂದಿಗೆ ಸಂತಸವೂ ನೆಲೆಗೊಂಡಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಶ್ರಮಿಕ ವರ್ಗದ ಜನರಿಂದ ಹುಟ್ಟಿಕೊಂಡಿರುವ ಜನಪದ ಕಲೆಯನ್ನು ಕಳೆದ 43 ವರ್ಷಗಳಿಂದಲೂ ಪೋಷಣೆ ಮಾಡುತ್ತಿರುವ ಶ್ರೀಮಠವು, ರಾಜ್ಯದ ವಿವಿಧ ಭಾಗಗಳಿಂದ ಕಲಾವಿದರನ್ನು ಕರೆಸಿ ಜನಪದ ಕಲೆಗಳ ಉಳಿವಿಗೆ ಶ್ರಮಿಸುತ್ತಿದೆ ಎಂದು ಬಣ್ಣಿಸಿದರು. ಆಧ್ಯಾತ್ಮಿಕ, ಸಂಸ್ಕಾರಯುತ ಪರಂಪರೆ ಮತ್ತು ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ ಕರ್ತೃತ್ವ ಶಕ್ತಿಯಿಂದ ಶ್ರೀಮಠದ ಕೀರ್ತಿ ಜಗದೆತ್ತರಕ್ಕೆ ವ್ಯಾಪಿಸಿ ಲಕ್ಷಾಂತರ ಭಕ್ತರು ಮತ್ತು ವಿದ್ಯಾರ್ಥಿಗಳ ಬದುಕಿನ ದಾರಿದೀವಿಗೆಯಾಗಿದೆ. ಬಾಲಗಂಗಾಧರನಾಥ ಸ್ವಾಮೀಜಿ ಅವರ ಆಶೀರ್ವಾದದಿಂದ ಶ್ರೀ ಕ್ಷೇತ್ರದ ಶೈಕ್ಷಣಿಕ ಪ್ರಗತಿ, ಕಲೆ, ವಿಜ್ಞಾನ, ತಂತ್ರಜ್ಞಾನ, ಜಾನಪದ ಮತ್ತು ಇತರ ಕ್ಷೇತ್ರಕ್ಕೆ ನೀಡುವ ಪ್ರೋತ್ಸಾಹಕ ಕಾರ್ಯಕ್ರಮಗಳು ಸಾಂಗವಾಗಿ ನೆರವೇರುತ್ತಿವೆ. ಶ್ರೀಮಠದ ಸೇವೆಯಲ್ಲಿ ಕೈಜೋಡಿಸಲು ನಾವೆಲ್ಲ ಸದಾ ಸಿದ್ದರಿದ್ದೇವೆ ಎಂದರು.

ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಶ್ರೀಪ್ರಸನ್ನನಾಥ ಸ್ವಾಮೀಜಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಶಾಖಾ ಮಠಗಳ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಶೇಖರ ಸ್ವಾಮೀಜಿ, ಶಂಭುನಾಥ ಸ್ವಾಮೀಜಿ, ಗುಣನಾಥ ಸ್ವಾಮೀಜಿ, ಧರ್ಮ ಪಾಲನಾಥ ಸ್ವಾಮೀಜಿ, ಚಂದ್ರಶೇಖರನಾಥ ಸ್ವಾಮೀಜಿ, ಮಂಗಳನಾಥ ಸ್ವಾಮೀಜಿ, ವಿವಿಧ ಇಲಾಖಾ ಅಧಿಕಾರಿಗಳು, ಜಾನಪದ ಕಲಾವಿದರು ಹಾಗೂ ಶ್ರೀಮಠದ ಸದ್ಭಕ್ತರು ಹಾಜರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಸೆ.22– ಸಮಾಜ ಕಲ್ಯಾಣ ಇಲಾಖೆಯಿಂದ 2023–24ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ಅರ್ಹ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (State Scholarship portal) ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಅ.20 ಕೊನೆ ದಿನ. ಮಾಹಿತಿಗೆ ದೂ:08232–223471 ಅನ್ನು ಸಂಪರ್ಕಿಸಿ.

ಟೆಂಪೋ ಉರುಳಿ ಮಹಿಳೆ ಸಾವು, 13 ಮಂದಿಗೆ ಗಾಯ



ಮಳವಳ್ಳಿ, ಸೆ.24– ಕೂಲಿ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಟೆಂಪೋ ಉರುಳಿ ಬಿದ್ದ ಪರಿಣಾಮ ಸ್ಥಳದಲ್ಲೇ ಮಹಿಳೆ ಸಾವನ್ನಪ್ಪಿ, 13 ಮಂದಿ ಗಾಯಗೊಂಡಿರುವ ಘಟನೆ ಶನಿವಾರ ಇಲ್ಲಿಗೆ ಸಮೀಪದ ಅಂತರವಳ್ಳಿ ಬೆಟ್ಟದ ಬಳಿ ಸಂಭವಿಸಿದೆ.

ತಾಲೂಕಿನ ಪುಟ್ಟೇಗೌಡನದೊಡ್ಡಿ ಗ್ರಾಮದ ಪದ್ಮ (40) ಸಾವನ್ನಪ್ಪಿದವರು. ಗ್ರಾಮದ ಮಹಿಳಾ ಕಾರ್ಮಿಕರು ಹಲ್ಲೇಗಾಲ ಗ್ರಾಮಕ್ಕೆ ನರೇಗಾ ಕಾಮಗಾರಿ ಕೂಲಿ ಕೆಲಸಕ್ಕೆ ತೆರಳುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಟೆಂಪೋ ಉರುಳಿ ಬಿದ್ದು, ಈ ಘಟನೆ ಸಂಭವಿಸಿದೆ.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ 13 ಮಂದಿಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲಗೂರು ಡಿವೈಎಸ್ಪಿ ಕೃಷ್ಣಯ್ಯ, ಸಿಪಿಐ ಶ್ರೀಧರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನರೇಂದ್ರಸ್ವಾಮಿ, ಅನ್ನದಾನಿ ಭೇಟಿ ಸಾಂತ್ವನ: ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಶಾಸಕ ಪಿ.ಎಂ. ನರೇಂದ್ರಸ್ವಾಮಿ ಹಾಗೂ ಮಾಜಿ ಶಾಸಕ ಡಾ.ಕೆ.ಅನ್ನದಾನಿ ಪ್ರತ್ಯೇಕ ವಾಗಿ ಭೇಟಿ ಮಾಡಿ ಸಾಂತ್ವನ ಹೇಳಿದರು. ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಗಾಯಾಳುಗಳ ಚಿಕಿತ್ಸೆಬಗ್ಗೆ ಕ್ರಮವಹಿಸಬೇಕೆಂದು ಒತ್ತಾಯಿಸಿದರು.

ಟಾಟಾ ಏಸ್ ಪಲ್ಟಿ: 25 ಮಂದಿಗೆ ಗಾಯ

ಮಳವಳ್ಳಿ: ಟಾಟಾ ಏಸ್ ಪಲ್ಟಿಯಾಗಿ 25ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಬಸವನಪುರ ಬಳಿ ನಡೆದಿದೆ.

ಗಾಯಗೊಂಡವರು ತಳಗವಾದಿ ಗ್ರಾಮದವರಾಗಿದ್ದು, ಇವರೆಲ್ಲರೂ ಕುಂದೂರು ಬೆಟ್ಟದಲ್ಲಿ ನಡೆಯುತ್ತಿದ್ದ ಮದುವೆಗೆ ಹೋಗುತ್ತಿದ್ದ ಸಂದರ್ಭ ಈ ದುರ್ಘಟನೆ ಸಂಭವಿಸಿದೆ. ಗಾಯಗೊಂಡವರಿಗೆ ಮಳವಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹಲವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ ಭೇಟಿ ಹಿನ್ನೆಲೆ: ಡಿಸಿ ಸಿದ್ಧತೆ ಪರಿಶೀಲನೆ



ಚಾಮರಾಜನಗರ, ಸೆ.24– ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.27ರಂದು ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಲು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್, ಇತರೆ ಹಿರಿಯ ಅಧಿಕಾರಿಗಳು ಜಿಲ್ಲಾಡಳಿತ ಭವನದ ಆವರಣ ಹಾಗೂ ಜಿಪಂ ಸಭಾಂಗಣದಲ್ಲಿ ಸಿದ್ಧತೆಗಳನ್ನು ಪರಿಶೀಲಿಸಿದರು.

ನಗರದ ಜಿಪಂ ಸಭಾಂಗಣದಲ್ಲಿ ಮುಖ್ಯಮಂತ್ರಿಯವರು ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದು, ಈ ಸಂಬಂಧ ಕೈಗೊಂಡಿರುವ ಸಿದ್ಧತೆಗಳನ್ನು ವ್ಯಾಪಕವಾಗಿ ವೀಕ್ಷಣೆ ಮಾಡಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ವಾಹನಗಳ ನಿಲುಗಡೆ, ಸ್ವಚ್ಛತೆ, ಇನ್ನಿತರ ಅಗತ್ಯ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಜಿಲ್ಲಾಡಳಿತ ಭವನದ ಪ್ರವೇಶದ್ವಾರದಿಂದ ಪ್ರಗತಿ ಪರಿಶೀಲನಾ ಸಭೆ ನಡೆಸುವ ಜಿಪಂ ಸಭಾಂಗಣ ಹಾಗೂ ಇತರೆ ಸ್ಥಳಗಳಲ್ಲಿ ವಹಿಸಬೇಕಿರುವ ಸಿದ್ಧತಾ ಕ್ರಮಗಳಿಗೆ ಸೂಚನೆ ನೀಡಿದರು. ಜಿಪಂ ಸಭಾಂಗಣದೊಳಗೆ ಆಸನಗಳು, ಧ್ವನಿವರ್ಧಕ, ಮೈಕ್ ವ್ಯವಸ್ಥೆ ಸಮರ್ಪಕವಾಗಿರಬೇಕು. ಶಿಷ್ಟಾಚಾರ ಪ್ರಕಾರ ಎಲ್ಲಾ ವ್ಯವಸ್ಥೆ ಆಗಬೇಕು. ಜಿಪಂ ಹೊರ ಆವರಣದಲ್ಲಿ ಗಣ್ಯರ ವಾಹನಗಳ ನಿಲುಗಡೆಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದರು.

ಅತ್ಯಂತ ಶಿಸ್ತುಬದ್ಧವಾಗಿ ಎಲ್ಲಾ ಸಿದ್ಧತೆ ಕೈಗೊಳ್ಳಬೇಕು. ಯಾವುದೇ ಲೋಪಗಳಿಗೆ ಆಸ್ಪದ ನೀಡಬಾರದು. ಮುಂಜಾಗ್ರತೆಯಿಂದ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ಈ ವೇಳೆ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಸ್ಪಿ ಪದ್ಮಿನಿ ಸಾಹು, ಎಡಿಸಿ ಗೀತಾ ಹುಡೇದ, ಎಎಸ್ಪಿ ಉದೇಶ, ಡಿವೈಎಸ್‌ಪಿ ಲಕ್ಷ್ಮಯ್ಯ, ತಹಸೀಲ್ದಾರ್ ಬಸವರಾಜು, ನಗರಸಭೆ ಆಯುಕ್ತ ಎಸ್.ವಿ.ರಾಮದಾಸ್, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ರಂಗನಾಥಪುರ ಡೈರಿ ವಾರ್ಷಿಕ ಸಾಮಾನ್ಯ ಸಭೆ



ಗುಂಡ್ಲುಪೇಟೆ, ಸೆ.24– ತಾಲೂಕಿನ ರಂಗನಾಥಪುರದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಸಾಮಾನ್ಯ ಸಭೆ ಮತ್ತು ನೂತನ ಸಭಾ ಭವನ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಹೈನುಗಾರಿಕೆ ರೈತರ ಬಾಳಿನ ಜೀವಾಳವಾಗಿದೆ. ಗುಣಮಟ್ಟದ ಹಾಲನ್ನು ಡೇರಿಗೆ ಹಾಕುವ ಮೂಲಕ ಹಾಲು ಉತ್ಪಾದಕರು ಉತ್ತಮ ಲಾಭ ಪಡೆಯಬಹುದು. ಚಾಮುಲ್ ಯಾವಾಗಲೂ ರೈತರ ಪರವಾಗಿರಲಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡೈರಿ ಅಧ್ಯಕ್ಷ ಸಣ್ಣಮಾದಶೆಟ್ಟಿ, ಎಲ್ಲಾ ಸದಸ್ಯರ ಸಹಕಾರದೊಂದಿಗೆ ಡೇರಿ ಪ್ರಗತಿ ಪಥದಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಚಾಮುಲ್ ನಿರ್ದೇಶಕ ಎಂ.ಪಿ.ಸುನೀಲ್, ಸಹಾಯಕ ವ್ಯವಸ್ಥಾಪಕ ಜಿ.ಪ್ರಭು, ಮಾರ್ಗ ವಿಸ್ತರಣಾಧಿಕಾರಿ ಆರ್.ರಂಜಿತ, ಸಂಘದ ಉಪಾಧ್ಯಕ್ಷ ಮಾದಯ್ಯ, ನಿರ್ದೇಶಕರಾದ ಮಹದೇವಶೆಟ್ಟಿ, ಅಂಕಶೆಟ್ಟಿ, ಶಂಕರ್, ಎಸ್.ದೊರೆಸ್ವಾಮಿ, ಮಹೇಶ್, ಮಹದೇವಶೆಟ್ಟಿ ಕಾಳಶೆಟ್ಟಿ, ಮರಿಸಿದ್ದಮ್ಮ, ಪುಟ್ಟಮ್ಮ, ಸಿದ್ದಮ್ಮ, ಮಹದೇವಮ್ಮ, ಸಿಇಓ ಪುಟ್ಟಸ್ವಾಮಿ, ಸಿಬ್ಬಂದಿಗಳಾದ ಶಿವನಾಗ, ಎಸ್.ಜಯಪಾಲ, ಮರಯ್ಯ ಹಾಗೂ ಹಾಲು ಉತ್ಪಾದಕರು ಹಾಜರಿದ್ದರು.

ಕಾವೇರಿ ನೀರು ಬಿಡುಗಡೆ ಖಂಡಿಸಿ

ತಮಿಳುನಾಡು ವಾಹನ ತಡೆದು ಬಾರುಕೋಲು ಚಳವಳಿ



ಚಾಮರಾಜನಗರ, ಸೆ.24– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ನಗರದಲ್ಲಿ ತಮಿಳುನಾಡು ವಾಹನ ತಡೆದು ಬಾರುಕೋಲು ಚಳವಳಿ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಬಾರುಕೋಲು ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಾಷ್ಟ್ರೀಯ ಹೆದ್ದಾರಿ ತಡೆದು ತಮಿಳುನಾಡು ಸರ್ಕಾರ, ಕೇಂದ್ರ, ರಾಜ್ಯ ಸರ್ಕಾರ ಹಾಗೂ ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಸರಕು ತುಂಬಿಕೊಂಡು ತಮಿಳುನಾಡಿಗೆ ತೆರಳುತ್ತಿದ್ದ ಲಾರಿ ತಡೆದು ನೀರು ಕೇಳಿದರೆ ಬಾರುಕೋಲಲ್ಲಿ ಹೊಡೆಯುತ್ತೇವೆ ಎಂದು ಆಕ್ರೋಶ ಹೊರಹಾಕಿದರು.

ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಶುಕ್ರವಾರ ಅಥವಾ ಶನಿವಾರ ಸ್ವಯಂ ಪ್ರೇರಿತವಾಗಿ ಚಾಮರಾಜನಗರ ಬಂದ್ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಶಾ. ಮುರಳಿ, ರಾಜು, ಚಾ.ವೆಂ.ರಾಜ್‌ಗೋಪಾಲ್, ಚಾ.ರಾ.ಕುಮಾರ್, ಗು.ಪುರುಷೋತ್ತಮ್, ಮಹೇಶ್‌ಗೌಡ, ಚಾ.ಹ.ರಾಮು, ಸಾಗರ್ ಸಾವತ್, ಸೋಮವಾರಪೇಟೆ ಮಂಜು, ತಾಂಡವಮೂರ್ತಿ, ವೀರಭದ್ರ, ಭೈರಲಿಂಗು, ಲಿಂಗರಾಜು, ಆಟೋ ನಾಗೇಶ್, ನಾಗಯ್ಯ, ಚಾ.ಸಿ.ಸಿದ್ದರಾಜು ಇತರರಿದ್ದರು.

ಉಸ್ತುವಾರಿ ಸಚಿವರ ಪರಿಷ್ಕೃತ ಜಿಲ್ಲಾ ಪ್ರವಾಸ

ಚಾಮರಾಜನಗರ, ಸೆ.24– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೆ.25, 26 ಮತ್ತು 27ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದು, ಪರಿಷ್ಕೃತ ವಿವರ ಇಂತಿದೆ.

ಸೆ.25ರಂದು ಬೆಳಗ್ಗೆ 10 ಗಂಟೆಗೆ ಚಾಮರಾಜನಗರ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲೆಗೆ ಸಂಬಂಧಿಸಿದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 5.30ಕ್ಕೆ ಮೈಸೂರಿಗೆ ತೆರಳುವರು.

ಸೆ.26ರಂದು ರಾತ್ರಿ 8.30ಕ್ಕೆ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ವಾಸ್ತವ್ಯ ಮಾಡುವರು. ಸೆ.27ರಂದು 9.50ಕ್ಕೆ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ಮುಖ್ಯಮಂತ್ರಿಯವರೊಂದಿಗೆ ಶ್ರೀಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಆಯೋಜಿಸಲಾಗಿರುವ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 2.30ಕ್ಕೆ ಚಾಮರಾಜನಗರಕ್ಕೆ ಆಗಮಿಸಿ ಜಿಪಂ ಸಭಾಂಗಣದಲ್ಲಿ ಮುಖ್ಯಮಂತ್ರಿಯವರೊಂದಿಗೆ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವರು. ಸಂಜೆ 6 ಗಂಟೆಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಅದ್ದೂರಿ ಶ್ರೀಶಂಕರೇಶ್ವರಸ್ವಾಮಿ ಜಾತ್ರೆ



ಚಾಮರಾಜನಗರ, ಸೆ.24– ತಾಲೂಕಿನ ಯಡಿಯೂರು–ಮಂಗಲ ಬಳಿಯ ಶ್ರೀಶಂಕರೇಶ್ವರಸ್ವಾಮಿ ಬೆಟ್ಟದಲ್ಲಿ ಶಂಕರೇಶ್ವರಸ್ವಾಮಿ ಜಾತ್ರೆ ಅದ್ದೂರಿಯಾಗಿ ನಡೆಯಿತು.

ಯಡಿಯೂರು ಗ್ರಾಮದಿಂದ ಹುಲಿವಾಹನ ಮತ್ತು ಮಂಗಲ ಗ್ರಾಮದಿಂದ ಶ್ರೀಶಂಕರೇಶ್ವರ ಸ್ವಾಮಿ, ಬಿರೇಶ್ವರಸ್ವಾಮಿ ಉತ್ಸವ ಮೂರ್ತಿಗಳನ್ನು ಶಂಕರೇಶ್ವರ ಸ್ವಾಮಿ ಬೆಟ್ಟಕ್ಕೆ ತರಲಾಯಿತು. ನಂತರ ಬೆಟ್ಟದ ತಪ್ಪಲಿನಲ್ಲಿರುವ ಶ್ರೀವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಉತ್ಸವ ಮೂರ್ತಿಗಳಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ಉತ್ಸವ ಮೂರ್ತಿಗಳು ತಮ್ಮ–ತಮ್ಮ ಗ್ರಾಮಗಳಿಗೆ ತೆರಳಿದವು. ಈ ವೇಳೆ ಮಂಗಲ ಗ್ರಾಮದ ಬಿರೇಶ್ವರ ಮೂರ್ತಿಯನ್ನು ಹೊತ್ತು ಕುಣಿಯಲಾಯಿತು. ಇದನ್ನು ಕಂಡು ಭಕ್ತರು ಮನಸೂರೆಗೊಂಡರು. ಜಾತ್ರೆ ಪ್ರಯುಕ್ತ ಶ್ರೀಶಂಕರೇಶ್ವರಸ್ವಾಮಿಗೆ ವಿಶೇಷ ಪೂಜೆಗಳು ನಡೆದವು. ನಂತರ ಮಂಗಲ ಗ್ರಾಮದಲ್ಲಿ ರಾತ್ರಿ ಗಣೇಶ, ಶಂಕರೇಶ್ವರ, ಬಿರೇಶ್ವರ ದೇವರುಗಳನ್ನು ಮೆರವಣಿಗೆ ಮಾಡಲಾಯಿತು. ನಂತರ ಗಣೇಶ ಮೂರ್ತಿ ಪೂಜಿಸಲಾಯಿತು.

ನಾಳೆ 'ಬೆಂಗಳೂರು ಬಂದ್'! ಶುಕ್ರವಾರ 'ಕರ್ನಾಟಕ ಬಂದ್'!!

ಬೆಂಗಳೂರು: ಕಾವೇರಿ ನದಿ ನೀರಿನ ಹೋರಾಟ ನಾನಾ ತಿರುವು ಪಡೆದು ಕೊಳ್ಳುತ್ತಿದ್ದು, ರೈತರು ಹಾಗೂ ಕನ್ನಡ ಪರ ಸಂಘಟನೆಗಳು ದಿನದಿಂದ ದಿನಕ್ಕೆ ಪ್ರತಿಭಟನೆಯನ್ನು ತೀವ್ರತರ ಘಟ್ಟಕ್ಕೆ ಕೊಂಡೊಯ್ಯುತ್ತಿದ್ದಾರೆ.

ಮಂಡ್ಯದಲ್ಲಿ ರೈತರು ಹಾಗೂ ವಿವಿಧ ಸಂಘಟನೆಗಳು ನಿರಂತರವಾಗಿ ಪ್ರತಿಭಟನಾ ಧರಣಿ ನಡೆಸುತ್ತಾ ಬರುತ್ತಿದ್ದರೆ, ಅತ್ತ ಬೆಂಗಳೂರಲ್ಲಿ ಕಾವೇರಿಗಾಗಿ ಬಂದ್ ಆಚರಿಸಲು ತೀರ್ಮಾನಿಸಲಾಗಿದೆ. ನಾನಾ ಸಂಘಟನೆಗಳು ಮಂಗಳವಾರದಂದು ಕರೆದಿರುವ ಬೆಂಗಳೂರು ಬಂದ್ ಪಕ್ಕಾ ಆಗಿದೆ. ಇದಕ್ಕೆ ನಾನಾ ಸಂಘಟನೆಗಳು ಬೆಂಬಲವನ್ನು ಸೂಚಿಸಿವೆ. ಬೆಂಗಳೂರು ಬಂದ್ ಯಶಸ್ವಿಗೊಳಿಸಲು ರೈತರು ಮತ್ತು ಕನ್ನಡ ಪರ ಸಂಘಟನೆಗಳು ನಿರ್ಧರಿಸಿ ನಿರಂತರವಾಗಿ ಸಭೆಗಳನ್ನು ನಡೆಸುತ್ತಿವೆ. ಸಾರಿಗೆ, ವ್ಯಾಪಾರ, ವಾಣಿಜ್ಯೋದ್ಯಮ, ಚಿತ್ರೋದ್ಯಮ ಹಾಗೂ ಸಾರ್ವಜನಿಕರಿಂದಲೂ ಬಂದ್‌ಗೆ ಬೆಂಬಲ ವ್ಯಕ್ತವಾಗುವ ಸಾಧ್ಯತೆಗಳು ಹೆಚ್ಚಾಗಿವೆ.

ಈ ಮಧ್ಯೆ ಕನ್ನಡಪರ ಸಂಘಟನೆಗಳ ಒಕ್ಕೂಟ ಸೆ.29ರಂದು ಅಖಂಡ ಕರ್ನಾಟಕ ಬಂದ್‌ಗೆ ಕರೆ ನೀಡಿದೆ. ಇಂದು ಈ ಸಂಬಂಧ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಘೋಷಿಸಿದ್ದಾರೆ. ಈ ಸಂಬಂಧ ಸೋಮವಾರ ನಡೆಯಲಿರುವ ಸಭೆಯಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ತಿಳಿಸಿದ್ದಾರೆ. 29ರಂದು ನಡೆಯುವ ಬಂದ್‌ಗೆ ಎಲ್ಲಾ ಕನ್ನಡ ಪರ ಸಂಘಟನೆಗಳು, ರೈತ ಸಂಘಟನೆಗಳು, ಸಾಹಿತಿಗಳು, ವ್ಯಾಪಾರಸ್ಥರು ಬೆಂಬಲ ನೀಡಿ ಸಹಕರಿಸುವಂತೆಯೂ ಮನವಿ ಮಾಡಿದ್ದಾರೆ.

ಗೊಂದಲ: ಒಂದೇ ವಾರದಲ್ಲಿ ಎರಡು ಬಂದ್‌ಗೆ ಕರೆ ನೀಡಿರುವುದು ಕನ್ನಡ ಪರ ಸಂಘಟನೆಗಳಲ್ಲಿ ಗೊಂದಲ ಉಂಟು ಮಾಡಿದೆ. ಈಗಾಗಲೇ ಮಂಗಳವಾರ ಬೆಂಗಳೂರು ಬಂದ್‌ಗೆ ಕರೆ ನೀಡಲಾಗಿದೆ. ಹೀಗಾದರೆ ಸಾಮಾನ್ಯ ಜನತೆಯ ಜೀವನಕ್ಕೆ ಕಷ್ಟವಾಗಲಿದೆ ಎಂದು ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ. ಈ ಮಧ್ಯೆ ಬೆಂಗಳೂರು ಬಂದ್ ಕೈಬಿಡುವಂತೆ ವಾಟಾಳ್ ನಾಗರಾಜ್ ಆಮ್ ಆದ್ಮಿ ಪಕ್ಷದ ಮುಖಂಡರೂ ಆದ ಮುಖ್ಯಮಂತ್ರಿ ಚಂದ್ರ ಅವರಿಗೆ ಸಲಹೆ ನೀಡಿದ್ದಾರೆ. ಅದಕ್ಕೆ ಅವರು ನಿರಾಕರಿಸಿದ್ದು, ಬೆಂಗಳೂರು ಬಂದ್ ನಿಶ್ಚಿತ ಅದಕ್ಕೆ ನೀವೇ ಬೆಂಬಲಿಸಿ ಎಂದು ವಾಟಾಳ್ ಅವರಿಗೆ ಕರೆ ನೀಡಿದ್ದಾರೆ.

ಈಗಾಗಲೇ ಬೆಂಗಳೂರು ಬಂದ್‌ಗೆ ಖಾಸಗಿ ಬಸ್‌ಗಳ ಒಕ್ಕೂಟ, ಕೆಎಸ್ ಆರ್‌ಟಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಬೆಂಬಲ ವ್ಯಕ್ತಪಡಿಸಿವೆ.

ಪಠ್ಯದಲ್ಲಿ ಶೈಕ್ಷಣಿಕ ರಂಗಭೂಮಿ ಪಠ್ಯ ಅಳವಡಿಸಬೇಕು

ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ಆಗ್ರಹ

ಮೈಸೂರು, ಸೆ.24(ಎಸ್‌ಪಿಎನ್)– ಶಾಲಾ–ಕಾಲೇಜುಗಳ ಪಠ್ಯದಲ್ಲಿ ಶೈಕ್ಷಣಿಕ ರಂಗಭೂಮಿ ಪಠ್ಯವನ್ನು ಅಳವಡಿಸಬೇಕು ಹಾಗೂ ಮಕ್ಕಳ 'ಮಗುತನ'ವನ್ನು ರಕ್ಷಿಸಿ, ವಿದ್ಯಾರ್ಜನೆಗೆ ಅವಕಾಶ ಕಲ್ಪಿಸಬೇಕು ಎನ್ನುವ ಮಕ್ಕಳ ಬೇಡಿಕೆಗೆ ನನ್ನ ಬೆಂಬಲವೂ ಇದೆ ಎಂದು ನಿವೃತ್ತ ಮುಖ್ಯ ಕಾರ್ಯದರ್ಶಿ ಹಾಗೂ 7ನೇ ವೇತನ ಆಯೋಗದ ಅಧ್ಯಕ್ಷ ಸುಧಾಕರ್ ರಾವ್ ದನಿಗೂಡಿಸಿದರು.



ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಇಂಡಿಯನ್ ಥಿಯೇಟರ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಮಕ್ಕಳ ನಾಟಕೋತ್ಸವದ ಮುಕ್ತಾಯ ಸಮಾರಂಭದಲ್ಲಿ ಮಕ್ಕಳು ಪ್ರತಿಭಟನಾ ಮೆರವಣಿಗೆಯಲ್ಲಿ ವೇದಿಕೆಗೆ ಬಂದು ನೀಡಿದ ಮನವಿ ಪತ್ರವನ್ನು ಓದಿ, ದನಿಗೂಡಿಸಿದರು.

ರಾಜ್ಯದ ಎಲ್ಲಾ ಶಾಲಾ–ಕಾಲೇಜುಗಳಲ್ಲೂ ರಂಗಭೂಮಿ ಕೇಂದ್ರಿತ ಬೋಧನಾ ವ್ಯವಸ್ಥೆ ಜಾರಿಗೆ ಬರಬೇಕು. ಪಾಠದ ಜೊತೆಗೆ ನಾಟಕದ ಪಠ್ಯವನ್ನು ನಲಿಕಲಿ ವ್ಯವಸ್ಥೆಯಲ್ಲಿ ಜಾರಿಗೆ ತರಬೇಕು ಎನ್ನುವ ಹಿರಿಯ ರಂಗಕರ್ಮಿ ಪ್ರಸನ್ನ ಅವರ ಶೈಕ್ಷಣಿಕ ಪರಿಕಲ್ಪನೆಗೆ ನನ್ನ ಬೆಂಬಲವೂ ಇದೆ. ಈ ವ್ಯವಸ್ಥೆ ಜಾರಿಗೆ ತರಬೇಕು ಎನ್ನುವವರಲ್ಲಿ ನಾನು ಕೂಡ ಮೊದಲಿಗ. ಆದರೆ, ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿ 13 ವರ್ಷ ಕಳೆದಿದೆ. ಸರ್ಕಾರದ ಮಟ್ಟದಲ್ಲಿ ನನ್ನ ಮಾತನ್ನು ಯಾರೂ ಕೇಳುವುದಿಲ್ಲ. ಬೇರೆ ಬೇರೆ ವೇದಿಕೆಗಳಲ್ಲಿ ಅವಕಾಶ ಸಿಕ್ಕರೆ, ಈ ಶೈಕ್ಷಣಿಕ ವ್ಯವಸ್ಥೆ ಅನುಷ್ಠಾನಗೊಳಿಸಿ ಎಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡುತ್ತೇನೆ ಎಂದರು.

ರಂಗಭೂಮಿ ಕಲಾವಿದೆ ಗೀತಾಂಜಲಿ ಕುಲಕರ್ಣಿ ಮಾತನಾಡಿ, ಪ್ರಾಥಮಿಕ ಶಿಕ್ಷಣದಿಂದ ಕಾಲೇಜು ಶಿಕ್ಷಣದವರೆಗೂ ರಂಗಭೂಮಿ ಪಠ್ಯದ ಮೂಲಕ ವಿದ್ಯಾರ್ಥಿಗಳಿಗೆ ಕಲಿಕೆ ಆರಂಭಿಸಬೇಕು. ಇದು ಮಕ್ಕಳ ಮಗುತನವನ್ನು ರಕ್ಷಿಸಿ, ವಿದ್ಯಾಭ್ಯಾಸಕ್ಕೂ ಅನುಕೂಲ ಮಾಡಿಕೊಡುತ್ತದೆ. ಪ್ರಸ್ತುತ ಯಾಂತ್ರಿಕ ಬೋಧನೆಯಿಂದ ಮಕ್ಕಳ ಬಾಲ್ಯ ನಶಿಸುತ್ತದೆ ಅಲ್ಲದೆ, ಇದು ಮಕ್ಕಳ ಹಕ್ಕುಗಳಿಗೆ ತಡೆಯಾಗುತ್ತಿದೆ. ಅಲ್ಲದೆ, ಈಗಿನ ಕಸ್ತೂರಿರಂಗನ್ ನೇತೃತ್ವದಲ್ಲಿ ರಚನೆಗೊಂಡಿರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೂ ಅಳವಡಿಸಬೇಕು ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರ ಒತ್ತಾಯಿಸುತ್ತೇನೆ ಎಂದರು.

ಹಿರಿಯ ರಂಗಕರ್ಮಿ ಪ್ರಸನ್ನ ಮಾತನಾಡಿ, 'ಮಗುತನ' ಮಕ್ಕಳ ಜನ್ಮಸಿದ್ಧ ಹಕ್ಕು, ಆ 'ಮಗುತನ'ವನ್ನು ರಕ್ಷಿಸುತ್ತ, ಪಾಠ ಕಲಿಸುವ ವ್ಯವಸ್ಥೆ ಜಾರಿಗೆ ಬರಬೇಕು. ರಂಗಭೂಮಿ ಮಾತ್ರವೇ ಬುದ್ಧಿಯ ಜೊತೆಗೆ ಭಾವ, ಪಾಠ ಜೊತೆಗೆ ನಾಟಕ, ಎಲ್ಲವನ್ನು ಬೆರೆಸಿ ನಲಿಕಲಿ ವ್ಯವಸ್ಥೆಯಾಗುತ್ತದೆ ಎಂದು ತಿಳಿಸಿದರು.

ಶಿಕ್ಷಣ ಕ್ಷೇತ್ರಕ್ಕೆ ಪಿಡುಗಾಗಿ ಪರಿಣಮಿಸಿರುವ ಪುಸ್ತಕಗಳ ಹೊರೆ, ಪರೀಕ್ಷೆಗಳ ಹೊರೆ ಹಾಗೂ ಅತಿ– ಬೌದ್ಧಿಕತೆಯ ಒತ್ತಡದಿಂದ ಮಗುವಿನ ಸಂವೇದನಾಶೀಲತೆ ಹಾಗೂ ಕಲಿಕೆಯ ಸಂತಸವನ್ನು ವಿದ್ಯಾರ್ಥಿ ದಿಸೆಯಲ್ಲಿ ಕಳೆದುಕೊಳ್ಳುತ್ತದೆ. ಇದನ್ನು ರಕ್ಷಿಸುವ ಜವಾಬ್ದಾರಿ ರಂಗಭೂಮಿ ಮೇಲಿದೆ ಎಂದರಲ್ಲದೆ, ನಂತರ ಈ ವೇದಿಕೆಯಲ್ಲಿ ಹಿರಿಯ ನಾಟಕಕಾರ ಟಿ.ಪಿ.ಕೈಲಾಸಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ನಂತರ ಮೋಹಿತ್ ತಕ್ಲರ್ ನಿರ್ದೇಶನದ ಹಾಗೂ ಜೈಪುರ ಉಜಾಗರ್ ಡ್ರಾಮಾಟಿಕ್ ಅಸೋಸಿಯೇಷನ್‌ನ ಕಲಾವಿದರು ಅಭಿನಯಿಸಿರುವ ಹುಂಕರೂ (ಮಾರ್ವರಿ) ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ವೈದ್ಯ ಡಾ.ಹೆಚ್.ಜಿ. ಉದಯ್‌ಶಂಕರ್‌ಗೆ ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿ

ಸುದ್ದಿ ನಿರೂಪಕ ಅಜಿತ್ ಹನುಮಕ್ಕನವರ್‌ಗೆ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ ಪ್ರದಾನ



ಮೈಸೂರು, ಸೆ.24(ಎಸ್‌ಪಿಎನ್)– ಕೊಪ್ಪ ಪ್ರಶಮನಿ ಆಸ್ಪತ್ರೆಯ ಕೀಲು ಮತ್ತು ಮೂಳೆ ತಜ್ಞ ಡಾ.ಹೆಚ್.ಜಿ.ಉದಯ್ ಶಂಕರ್ ಅವರಿಗೆ 'ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿ' ಹಾಗೂ ಖಾಸಗಿ ಚಾನಲ್‌ನ ಸುದ್ದಿ ನಿರೂಪಕ ಅಜಿತ್ ಹನುಮಕ್ಕನವರ್ ಅವರಿಗೆ 'ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ' ನೀಡಿ, ಗೌರವಿಸಲಾಯಿತು.

ಮೈಸೂರು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯ ಆವರಣದಲ್ಲಿ ವೃದ್ಧ ಪಿತಾಮಹ ಎಂ.ವೆಂಕಟಸುಬ್ಬಯ್ಯ (ತಾತಯ್ಯ)ನವರ 179ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಈ ಇಬ್ಬರು ವಿವಿಧ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿಗಳನ್ನು ವಿತರಿಸಲಾಯಿತು.

'ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಖಾಸಗಿವಾಹಿನಿಯ ಸುದ್ದಿ ನಿರೂಪಕ ಅಜಿತ್ ಹನುಮಕ್ಕನವರ್, ಬ್ರಿಟಿಷರ ಕಾಲದಲ್ಲೇ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ಅನುಕೂಲಕಾರಿಯಾಗಿ ಎಲ್ಲಾ ಮೂಲಸೌಕರ್ಯ ಒದಗಿಸಿದ ಕೀರ್ತಿ ತಾತಯ್ಯನವರಿಗೆ ಸಲ್ಲುತ್ತದೆ ಎಂದು ಅಭಿಪ್ರಾಯಪಟ್ಟರು.

ಎಂ.ವೆಂಕಟಕೃಷ್ಣಯ್ಯ ಅವರ ಆಲೋಚನೆ ದೂರದೃಷ್ಟಿವುಳ್ಳದ್ದು. ಆ ಕಾಲಕ್ಕೆ ಅವರು ನೆಟ್ಟ ಸಸಿಗಳು ಇಂದು ಮರವಾಗಿ ಬೇರೆಯವರಿಗೆ ನೆರಳಾಗುತ್ತಿವೆ. ಇಂದು ಸಾವಿರಾರು ವಿದ್ಯಾರ್ಥಿಗಳು ಅವರ ಹೆಸರಿನಲ್ಲಿ ವಿದ್ಯಾಭ್ಯಾಸ ಮುಗಿಸಿ, ಉನ್ನತ ಹುದ್ದೆಗಳನ್ನು ಅಲಂಕರಿಸಿರುವುದು ಸಾಮಾನ್ಯ ಸಂಗತಿಯಲ್ಲ. ಇಂತಹ ಆಲೋಚನೆಗಳು ಒಬ್ಬ ವ್ಯಕ್ತಿಯಲ್ಲಿ ಬಂದಿವೆ ಎಂದರೆ ಇಂದು ನಾವು–ನೀವು ಊಹಿಸಲು ಅಸಾಧ್ಯ ಎಂದು ತಿಳಿಸಿದರು.

ನಮ್ಮ ಹಿರಿಯರ ಜೀವಿತಾವಧಿಯಲ್ಲಿ ಅವರ ಆಲೋಚನೆಗಳಲ್ಲಿ ಸಮುದಾಯಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ತವಕವಿತ್ತು. ಸ್ವಲ್ಪ ದಿನಗಳ ನಂತರ ನಮ್ಮ ಕುಟುಂಬಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ತವಕವಿತ್ತು. ತದನಂತರ ಈಗ ನನಗಾಗಿ ಬದುಕಬೇಕು ಎನ್ನುವ ಕಾಲ ಬಂದಿದೆ. 179 ವರ್ಷಗಳ ಹಿಂದೆ ಬೇರೆಯವರ ಏಳಿಗೆಗಾಗಿ ಬದುಕು ಸವೆಸಿದ ತಾತಯ್ಯನವರ ತ್ಯಾಗ–ಬಲಿದಾನ ಮುಂದೆಯೂ ಮರೆಯಲಾಗದು ಎಂದು ತಾತಯ್ಯನವರ ಸೇವೆಯನ್ನು ಕೊಂಡಾಡಿದರು.

ಅನಾಥಾಲಯದಲ್ಲಿ ಓದಿದ ವಿದ್ಯಾರ್ಥಿಗಳು, ಮುಂದೆ ಉನ್ನತ ಹುದ್ದೆಗಳನ್ನು ಅಲಂಕರಿಸಿದ ಸಂದರ್ಭದಲ್ಲಿ ತಮ್ಮ ಹಿಂದಿನ ಜೀವನ ಶೈಲಿಯನ್ನು ಎಂದಿಗೂ ಮರೆಯಬೇಡಿ. ನಿಮ್ಮ ಕೈಲಾದ ಸೇವೆಯನ್ನು ಇಂತಹವರ ಶಿಕ್ಷಣಕ್ಕಾಗಿ ಮೀಸಲಿಡಿ. ನಿಮ್ಮ ಸೇವೆ ಒಂದು ದೀಪದಿಂದ ಮತ್ತೊಂದು ದೀಪವನ್ನು ಹಚ್ಚಿದ ರೀತಿಯಂತಿರಬೇಕು. ಇದು ತಮ್ಮ ಜೀವನದ ವ್ಯಕ್ತಿತ್ವವನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರಲ್ಲದೆ, ಮೈಸೂರು ನಿವೃತ್ತ ಉಪನ್ಯಾಸಕ ಚಕ್ರವರ್ತಿ ಶ್ರೀಧರ್ ಅವರ ಸಾರ್ಥಕ ಸೇವೆಯನ್ನು ನೆನೆದರು.

'ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿ' ಸ್ವೀಕರಿಸಿ ಮಾತನಾಡಿದ ಕೊಪ್ಪ ಪ್ರಶಮನೀ ಆಸ್ಪತ್ರೆಯ ಕೀಲು ಮತ್ತು ಮೂಳೆ ತಜ್ಞ ಡಾ.ಹೆಚ್.ಜಿ.ಉದಯ್‌ಶಂಕರ್, ನಾನು ತಾತಯ್ಯನವರು ಸ್ಥಾಪಿಸಿರುವ ಅನಾಥಾಲಯದ ವಿದ್ಯಾರ್ಥಿ ಎಂದು ಹೇಳಿಕೊಳ್ಳಲು ಇಂದಿಗೂ ಸಂತೋಷವಾಗುತ್ತೆ ಅವರು ಸ್ಥಾಪಿಸಿದ ಅನಾಥಾಲಯದಲ್ಲಿ ಉಳಿದುಕೊಂಡು ಎಂಬಿಬಿಎಸ್ ಓದಿ, ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಅನಾಥಾಲಯದಲ್ಲಿ ಉಳಿದುಕೊಂಡು ಓದಿದ ಕಾರಣಕ್ಕೆ ಬಡವರ ಸಂಕಷ್ಟದ ಬಗ್ಗೆ ನನಗೆ ಅರಿವಿದೆ ಎಂದರು. ಈ ವೇಳೆ ಅನಾಥಾಲಯದ ಅಧ್ಯಕ್ಷ ಸಿ.ವಿ.ಗೋಪಿನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಲೆಯಲ್ಲಿ ಈಗ ನಾಟಕೀಯತೆ ಹೊಕ್ಕಿದೆ; ರಂಗಭೂಮಿಯಿಂದ ಸಹಜತೆ ತರಬೇಕು

ಹಿರಿಯ ರಂಗ ನಿರ್ದೇಶಕ ಪ್ರೊ.ಎಚ್.ಎಸ್.ಉಮೇಶ್ ಪ್ರತಿಪಾದನೆ



ಮೈಸೂರು, ಸೆ.24(ಜಿಎ)– ಕಲೆಯಲ್ಲಿ ಸಹಜತೆ ಮರೆಯಾಗಿ ನಾಟಕೀಯತೆ ಹೊಕ್ಕಿದೆ. ರಂಗಭೂಮಿಯ ಮೂಲಕ ಸಹಜತೆಯನ್ನು ಕಾಣುವ ಪ್ರಯತ್ನವಾಗಬೇಕು ಎಂದು ಹಿರಿಯ ರಂಗ ನಿರ್ದೇಶಕ ಪ್ರೊ.ಎಚ್.ಎಸ್.ಉಮೇಶ್ ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯ ಗಾಂಧಿಭವನದಲ್ಲಿ ನಿರಂತರ ಫೌಂಡೇಶನ್ ಹಮ್ಮಿಕೊಂಡಿದ್ದ ಸಹಜರಂಗ– 23 ರಂಗ ತರಬೇತಿ ಶಿಬಿರದಲ್ಲಿ ಮಾತನಾಡಿದ ಅವರು, ನಾಟಕ ಕಲಿಸುವುದು ಈ ಶಿಬಿರದ ಉದ್ದೇಶವಲ್ಲ, ಸಹಜತೆಯನ್ನು ಕಲಿಸುವುದು ಇದರ ಉದ್ದೇಶ. ಮಗುವಿನಿಂದ ದೊಡ್ಡವರಾಗುತ್ತಾ ಹೋಗುತ್ತೇವೆ. ಮಗು ದೊಡ್ಡವರನ್ನು ಅನುಕರಣೆ ಮಾಡುತ್ತಾ ಹೋಗುತ್ತದೆ. ನಾಟಕ ಪ್ರಕ್ರಿಯೆ ಇಲ್ಲಿಂದ ಪ್ರಾರಂಭವಾಗುತ್ತದೆ. ಮಗು ಅಥವಾ ಮನುಷ್ಯ ಬೆಳೆಯುತ್ತಾ ಹೋದಂತೆ ಸಹಜತೆಯಿಂದ ದೂರವಾಗುತ್ತಾ ನಾಟಕೀಯವಾಗುತ್ತಾ ಹೋಗುತ್ತಾನೆ ಎಂದರು.


ಮಗುವಿನಂತಾಗುವುದೇ ಸರಳತೆಯ ಗುಣಲಕ್ಷಣ. ಅಲ್ಲಿ ಯಾವುದೇ ಹೊರಗಿನ ಉದ್ದೇಶ, ಹೇರಿಕೆ ಇರುವುದಿಲ್ಲ. ಬದಲಾಗಿ ನೈಜತೆಯನ್ನು ಕಾಣಲು ಸಾಧ್ಯ. ಮಗು ಹಂತದಿಂದ ಮುಂದೆ ಹೆಜ್ಜೆಯಿಟ್ಟು ಬೆಳೆದಾಗ ಸಹಜತೆ ದೂರವಾಗುತ್ತಾ ಹೋಗುತ್ತದೆ. ಹೀಗಾಗಿ ಪುನಃ ಮೂಲಕ್ಕೆ ಮರಳಲು ಮರೆಯಬಾರದು ಎಂದು ತಿಳಿಸಿದರು.

ರಂಗಭೂಮಿಯಲ್ಲಿ ನಾವು ಸಮಾಜವನ್ನು ಅರ್ಥೈಸಿಕೊಳ್ಳುವ ಮೊದಲು ನಮ್ಮನ್ನು ಅರ್ಥೈಸಿಕೊಳ್ಳಬೇಕು. ಸರಳವಾಗಿ ಇರುವುದನ್ನೇ ಸಹಜತೆಯೆಡೆಗೆ ತೆರಳುವುದು ಎನ್ನುತ್ತಾರೆ. ಆದರೆ, ಸರಳವಾಗಿರುವುದೂ ಕಷ್ಟ, ಅದನ್ನು ಸಿದ್ಧಿಸಿಕೊಂಡರೆ ಉತ್ತಮ ಬದುಕು ಸಾಧ್ಯ ಎಂದರು.

ರಂಗ ನಿರ್ದೇಶಕ ಪ್ರಸಾದ್ ಕುಂದೂರು ಮಾತನಾಡಿ, ಅತ್ಯುತ್ತಮ ಕಲಾವಿದನಾಗಲು ಅನೇಕ ತರಬೇತಿಗಳಿವೆ. ಆದರೆ, ಉತ್ತಮ ಮನುಷ್ಯನಾಗಲು ಕಷ್ಟಪಡುತ್ತಿದ್ದೇವೆ. ಮನಸ್ಸಿನಾಳದಿಂದ ಕಲೆಯನ್ನು ಗ್ರಹಿಸುವ ಶಕ್ತಿ ನಮ್ಮಲ್ಲಿ ಮೂಡಬೇಕು. ರಂಗಭೂಮಿಯ ಸಾಧ್ಯತೆಗಳೊಂದಿಗೆ ಮನುಷ್ಯನಾಗಿ ನಾನೇನು ಮಾಡಬಹುದು ಎಂಬುದನ್ನೂ ರಂಗ ತರಬೇತಿ ಮೂಲಕ ತಿಳಿಸಲಾಗುತ್ತಿದೆ ಎಂದು ತಿಳಿಸಿದರು.

ಲೇಖಕರು ಹಾಗೂ ಅಂಕಣಕಾರರಾದ ನಾ.ದಿವಾಕರ್ ಅವರು ಮಾತನಾಡಿ, "ಎಷ್ಟೋ ಸಿನಿಮಾ ನಟರು ಅನುಕರಣೆಯನ್ನು ದಾಟಿ ಮುಂದಕ್ಕೆ ಹೋಗಿಲ್ಲ. ರಂಗಭೂಮಿ ಅನುಕರಣೆಯನ್ನು ವಿಸ್ತರಣೆ ಮಾಡಿ ಮುಂದಕ್ಕೆ ಕರೆದುಕೊಂಡು ಹೋಗುತ್ತದೆ. ಸಮಾಜ ಪರಿವರ್ತನೆ ಮಾಡುವ ಚಿಕಿತ್ಸಕ ಗುಣ ರಂಗಭೂಮಿಗೆ ಇದೆ. ಇಂದಿನ ಪರಿಸ್ಥಿತಿಯಲ್ಲಿ ಈ ಸಮಾಜಕ್ಕೆ ಚಿಕಿತ್ಸೆ ನೀಡುವ ಮನಸ್ಸುಗಳು ಬೇಕಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶಿಬಿರದಲ್ಲಿ ನಿರಂತರದ ಅಧ್ಯಕ್ಷೆ ಸುಗುಣ, ಶ್ರೀನಿವಾಸ ಪಾಲಹಳ್ಳಿ, ಹಿರಿಯ ಶಿಬಿರಾರ್ಥಿ ಅವಿನಾಶ ಸೇರಿದಂತೆ 35 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು.



ಅಮೇರಿಕಾದಲ್ಲಿ ಶೈಕ್ಷಣಿಕ ಸಂಶೋಧನಾ ಪ್ರವಾಸದಲ್ಲಿರುವ ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕರ ತಂಡ ಭಾನುವಾರ ನ್ಯೂಜೆರ್ಸಿಯಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿಗಳನ್ನು ಭೇಟಿಯಾಯಿತು. ಈ ವೇಳೆ ಉನ್ನತ ಶಿಕ್ಷಣದ ಅನುಭವಗಳನ್ನು ಹಾಗೂ ವಿದ್ಯಾರ್ಥಿಗಳಿಗೆ ದೊರಕುವ ಅವಕಾಶಗಳ ಬಗ್ಗೆ ವಿಚಾರ ವಿನಿಮಯ ನಡೆಯಿತು.

ಬಿಜೆಪಿ ಟಿಕೆಟ್ ಹಗರಣ

ಚೈತ್ರಾ ಸುದ್ದಿ ಪ್ರಕಟಿಸುವಾಗ ಕುಂದಾಪುರ ಹೆಸರು ಬಳಕೆಗೆ ನ್ಯಾಯಾಲಯ ಮಧ್ಯಂತರ ನಿರ್ಬಂಧ

ಬೆಂಗಳೂರು: ಬಿಜೆಪಿ ಟಿಕೆಟ್ ಕೊಡಿಸುವುದಾಗಿ 5 ಕೋಟಿ ರೂಪಾಯಿ ಪಡೆದು ಉದ್ಯಮಿಯೊಬ್ಬರಿಗೆ ವಂಚಿಸಿದ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ಹಿಂದೂಪರ ಸಂಘಟನೆಯ ಚೈತ್ರಾ ಅವರಿಗೆ ಸಂಬಂಧಿಸಿದಂತೆ ಸುದ್ದಿ ಪ್ರಕಟ ಹಾಗೂ ಪ್ರಸಾರ ಮಾಡುವಾಗ ಕುಂದಾಪುರ ಹೆಸರು ಉಲ್ಲೇಖಿಸಬಾರದು ಎಂದು ಮಾಧ್ಯಮಗಳಿಗೆ ನಿರ್ಬಂಧ ಹೇರಿ ಬೆಂಗಳೂರಿನ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ ಶನಿವಾರ ಏಕಪಕ್ಷೀಯ ಮಧ್ಯಂತರ ಆದೇಶ ಮಾಡಿದೆ.



ಚೈತ್ರಾ ಪ್ರಕರಣದಲ್ಲಿ ಕುಂದಾಪುರ ಹೆಸರು ಉಲ್ಲೇಖಿಸುವುದಕ್ಕೆ ಮಾಧ್ಯಮ ಹಾಗೂ ಸಾಮಾಜಿಕ ಮಾಧ್ಯಮಗಳಿಗೆ ನಿರ್ಬಂಧ ಹೇರುವಂತೆ ಕೋರಿ ಬೆಂಗಳೂರಿನ ಬಸವನಗುಡಿಯಲ್ಲಿ "ಕಾಫಿ ಶಾಪ್" ಹೋಟೆಲ್ ಮಾಲೀಕ ಕುಂದಾಪುರ ಮೂಲದ ಗಣೇಶ್ ಶೆಟ್ಟಿ ಸಲ್ಲಿಸಿದ್ದ ಮೂಲ ದಾವೆಯ ವಿಚಾರಣೆಯನ್ನು ಬೆಂಗಳೂರಿನ 7ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರಾದ ಬಾಲಗೋಪಾಲಕೃಷ್ಣ ಅವರು ಆದೇಶಿಸಿದ್ದಾರೆ.

ಸುದ್ದಿ ವಾಹಿನಿ, ಮಾಧ್ಯಮದಲ್ಲಿ ಕುಂದಾಪುರ ಹೆಸರು ಉಲ್ಲೇಖ ಮತ್ತು ಪ್ಯಾನಲ್ ಚರ್ಚೆ ನಡೆಸುವುದಕ್ಕೆ ಮುಂದಿನ ಆದೇಶದವರೆಗೆ ತಾತ್ಕಾಲಿಕ ನಿರ್ಬಂಧ ಆದೇಶ ಮಾಡಲಾಗಿದೆ ಎಂದು ನ್ಯಾಯಾಲಯವು ಆದೇಶದಲ್ಲಿ ಉಲ್ಲೇಖಿಸಿದೆ.

ವಂಚನೆ ಆರೋಪದಲ್ಲಿ ಚೈತ್ರಾ ಹಾಗೂ ಇತರೆ ಆರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಚೈತ್ರಾ ಸಹ ಕುಂದಾಪುರದ ಮೂಲದವರಾಗಿದ್ದಾರೆ. ಆದರೆ, ಈ ವಂಚನೆ ಪ್ರಕರಣಕ್ಕೆ ಮಾಧ್ಯಮಗಳು ಚೈತ್ರಾ ಹೆಸರು ಬಳಸುವಾಗ ಕುಂದಾಪುರ ಎಂಬುದಾಗಿ ಉಲ್ಲೇಖಿಸುತ್ತಿವೆ. ಇದರಿಂದ ಕುಂದಾಪುರ ಪಟ್ಟಣದ ಹೆಸರು ಮತ್ತು ಘನತೆಗೆ ಧಕ್ಕೆಯಾಗುತ್ತಿದೆ. ಕುಂದಾಪುರ ಎಂದು ಉಲ್ಲೇಖಿಸಿ ಮಾಧ್ಯಮಗಳು ಸುದ್ದಿ ಪ್ರಕಟಿಸುವುದು ಅವಹೇಳನಕಾರಿಯಾಗಿದೆ ಎಂದು ದಾವೆಯಲ್ಲಿ ಆಕ್ಷೇಪಿಸಲಾಗಿದೆ.

ಮಾಧ್ಯಮಗಳು ತಮ್ಮ ಟಿಆರ್‌ಪಿ, ಲೈಕ್ಸ್ ಮತ್ತು ವ್ಯೂಸ್ ಹೆಚ್ಚಿಸುವ ಉದ್ದೇಶದಿಂದ ಕುಂದಾಪುರ ಹೆಸರು ಬಳಸುತ್ತಿವೆ. ಕುಂದಾಪುರ ಪಟ್ಟಣದಲ್ಲಿ ಜನಿಸಿರುವ ದಾವೆದಾರು ಕಳೆದ 23 ವರ್ಷಗಳಿಂದ ಬೆಂಗಳೂರಿನ ಬಸನಗುಡಿಯಲ್ಲಿ ಕಾಫಿ ಶಾಪ್ ನಡೆಸುತ್ತಿದ್ದಾರೆ. ನಿತ್ಯ ನೂರಾರು ಸಂಖ್ಯೆಯಲ್ಲಿ ಗ್ರಾಹಕರು ಶಾಪ್‌ಗೆ ಭೇಟಿ ನೀಡುತ್ತಾರೆ. ಚೈತ್ರಾ ಪ್ರಕರಣ ಬೆಳಕಿಗೆ ಬಂದ ನಂತರ ಗ್ರಾಹಕರು ಕುಂದಾಪುರ ಬಗ್ಗೆ ವಿಚಾರಿಸತೊಡಗಿದ್ದಾರೆ. ಇದರಿಂದ ಕುಂದಾಪುರ ದೂಷಣೆಗೆ ಒಳಗಾಗುತ್ತಿದೆ. ಈ ಒಂದು ಘಟನೆಯಿಂದ ಅಲ್ಲಿನ ಭವಿಷ್ಯದ ಪೀಳಿಗೆಯನ್ನು ಕೆಟ್ಟ ದೃಷ್ಟಿಯಿಂದ ನೋಡುವಂತಾಗಬಹುದು ಎಂದು ದಾವೆಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಇನ್ಫೋಸಿಸ್ ಸುಧಾಮೂರ್ತಿ ಹೆಸರು ಬಳಸಿ ವಂಚನೆ

ಇಬ್ಬರು ಯುವತಿಯರ ವಿರುದ್ಧ ಕೇಸ್ ದಾಖಲು


ಬೆಂಗಳೂರು, ಸೆ.24– ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಡಾ. ಸುಧಾಮೂರ್ತಿ ಅವರ ಹೆಸರು ಬಳಸಿಕೊಂಡು ವಂಚನೆ ನಡೆಸಿರುವ ಘಟನೆ ಬೆಳಕಿಗೆ ಬಂದಿದೆ.

ಈ ಸಂಬಂಧ ಸುಧಾಮೂರ್ತಿ ಅವರ ಪರ್ಸನಲ್ ಅಸಿಸ್ಟೆಂಟ್ ಮಮತಾ ಸಂಜಯ್ ಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಶ್ರುತಿ ಹಾಗೂ ಲಾವಣ್ಯ ಎಂಬವರ ವಿರುದ್ಧ ದೂರು ದಾಖಲಾಗಿದೆ.

ಕೆಕೆಎನ್‌ಸಿಯಿಂದ 50ನೇ ವರ್ಷದ ಕಾರ್ಯಕ್ರಮಕ್ಕೆ ಸುಧಾಮೂರ್ತಿಯವರಿಗೆ ಆಹ್ವಾನಿಸಲಾಗಿತ್ತು ಆದರೆ ಅವರು ಇಮೇಲ್ ಮೂಲಕ ಅಮೆರಿಕದಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ಬರಲು ಆಗುವುದಿಲ್ಲ ಎಂದು ಸಂದೇಶ ಕಳುಹಿಸಿದ್ದರು. ಅಮೆರಿಕದಲ್ಲಿ ಮೀಟ್ ಅಂಡ್ ಗ್ರೀಟ್ ವಿತ್ ಡಾ. ಸುಧಾಮೂರ್ತಿ ಕಾರ್ಯಕ್ರಮ ಆಯೋಜಿಸಿರುವುದಾಗಿ ಟಿಕೆಟ್ ಮಾರಾಟ ಮಾಡಿದ್ದಾರೆ. ಪ್ರತಿ ಟಿಕೆಟ್‌ಗೆ 40 ಡಾಲರ್ ಪಡೆದಿರುವುದಾಗಿ ಆರೋಪಿಸಲಾಗಿದೆ. ಘಟನೆ ಸಂಬಂಧ ಸದ್ಯ ಜಯನಗರ ಠಾಣೆಯಲ್ಲಿ ಐಟಿ ಆಕ್ಟ್ 66ಸಿ, 66ಡಿ ಹಾಗೂ ಐಪಿಸಿ 419, 420 ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಹಿರಿಯ ಲೇಖಕಿ ಕಮಲಾ ಹೆಮ್ಮಿಗೆ ನಿಧನ

ಬೆಂಗಳೂರು, ಸೆ. 24– ಕನ್ನಡದ ಹಿರಿಯ ಲೇಖಕಿ ಕಮಲಾ ಹೆಮ್ಮಿಗೆ (71) ಅವರು ಭಾನುವಾರ ಧಾರವಾಡದಲ್ಲಿ ನಿಧನರಾಗಿದ್ದಾರೆ.



1952ರ ನವೆಂಬರ್ 20ರಂದು ಮೈಸೂರು ಜಿಲ್ಲೆಯ ಹೆಮ್ಮಿಗೆಯಲ್ಲಿ ಜನಿಸಿದ ಅವರು, ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಜಾನಪದವನ್ನು ಮುಖ್ಯ ವಿಷಯವನ್ನಾಗಿಸಿಕೊಂಡು ಎಂ.ಎ. ಪದವಿ ಪಡೆದರು. ಸವದತ್ತಿ ಎಲ್ಲಮ್ಮ ಹಾಗೂ ದೇವದಾಸಿ ಪದ್ಧತಿಯ ಮೇಲೆ ಮಹಾಪ್ರಬಂಧ ರಚಿಸಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಗಳಿಸಿದರು. ಇದಲ್ಲದೆ ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಭಾಷಾಂತರ ಡಿಪ್ಲೊಮಾ ಪಡೆದಿದ್ದರು.

ಆಕಾಶವಾಣಿಯ ಉದ್ಯೋಗಿಯಾಗಿದ್ದ ಕಮಲ ಹೆಮ್ಮಿಗೆ ಅವರು, ಧಾರವಾಡ ಮತ್ತು ಮಂಗಳೂರು ಕೇಂದ್ರಗಳಲ್ಲಿ ಹಾಗೂ ದೂರದರ್ಶನದ ಬೆಂಗಳೂರು ಮತ್ತು ಕೇರಳದ ತಿರುವನಂತಪುರದ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿದ್ದು, ಇತ್ತೀಚೆಗೆ ನಿವೃತ್ತಿ ಹೊಂದಿದ್ದರು. ಅವಿವಾಹಿತರಾಗಿಯೇ ಇದ್ದ ಹೆಮ್ಮಿಗೆ ಅವರು, ಧಾರವಾಡದಲ್ಲಿ ತಮ್ಮ ಅಕ್ಕನ ಮನೆಯಲ್ಲೇ ನೆಲೆಸಿದ್ದರು. ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಹಲವು ರೂಪಗಳಲ್ಲಿನ ಬರಹಗಳನ್ನು ನೀಡುತ್ತಾ ಬಂದಿದ್ದರು.

ಕಮಲಾ ಹೆಮ್ಮಿಗೆ ಅನೇಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿನ ಸಮಾವೇಶಗಳಲ್ಲಿ, ನ್ಯಾಶನಲ್ ಬುಕ್ ಟ್ರಸ್ಟ್ ಸಂವಾದ ಕಾರ್ಯಕ್ರಮದಲ್ಲಿ ಹಾಗೂ ಅನೇಕ ವೇದಿಕೆಗಳಲ್ಲಿ ಸಾಹಿತ್ಯ ವಿಚಾರ ಮಂಡಿಸಿದ್ದರು. ಇವರ ಸಾಹಿತ್ಯ ಸೇವೆಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆ.ಎಸ್.ಎನ್. ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಂತಾರಾಷ್ಟ್ರೀಯ ಮಹಿಳಾ ವರ್ಷದ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ರಾಜ್ಯ ಸರಕಾರದ ಕಿತ್ತೂರು ಚೆನ್ನಮ್ಮ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯಶ್ರೀ ಪ್ರಶಸ್ತಿ, ಮಾಸ್ತಿ ಕಾದಂಬರಿ ಪುರಸ್ಕಾರ ಸೇರಿದಂತೆ ಅನೇಕ ಪ್ರಶಸ್ತಿ ಗೌರವಗಳು ಸಂದಿದ್ದವು.

ನಾಳೆ ನಿರ್ಗಮನ ಪಥಸಂಚಲನ

ಮೈಸೂರು,ಸೆ.24–ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರಿನ 37ನೇ ತಂಡದ ಪ್ರೊಬೆಷನರಿ ಪೊಲೀಸ್ ಉಪಾಧೀಕ್ಷಕರು (ಸಿವಿಲ್) ಮತ್ತು ಅಬಕಾರಿ ಉಪಾಧೀಕ್ಷಕರು ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮವನ್ನು ಸೆ.26ರಂದು ಸಂಜೆ 4 ಗಂಟೆಗೆ ಕರ್ನಾಟಕ ಪೊಲೀಸ್ ಅಕಾಡೆಮಿಯ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ.

ಜಾರ್ಖಂಡ್‌ನಲ್ಲಿ ಫುಟ್ಬಾಲ್ ಪಂದ್ಯದ ವೇಳೆ ಸಿಡಿಲು ಬಡಿದು ಇಬ್ಬರ ಸಾವು


ರಾಂಚಿ, ಸೆ.24– ಫುಟ್ಬಾಲ್ ಪಂದ್ಯದ ವೇಳೆ ಮೈದಾನಕ್ಕೆ ಸಿಡಿಲು ಬಡಿದು ಇಬ್ಬರು ಸಾವಿಗೀಡಾದ ಘಟನೆ ಜಾರ್ಖಂಡ್‌ನಲ್ಲಿ ವರದಿಯಾಗಿದೆ.



ಜಾರ್ಖಂಡ್‌ನ ದುಮ್ಕಾ ಜಿಲ್ಲೆಯಲ್ಲಿ ಸ್ಥಳೀಯ ಫುಟ್‌ಬಾಲ್ ಪಂದ್ಯದ ಆಟದ ಮೈದಾನಕ್ಕೆ ಸಿಡಿಲು ಬಡಿದು ಇಬ್ಬರು ಪ್ರೇಕ್ಷಕರು ಸಾವನ್ನಪ್ಪಿದ್ದಾರೆ ಮತ್ತು ಮೂವರು ಗಾಯಗೊಂಡಿದ್ದಾರೆ. ಗಾಯಗೊಂಡವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ಸಂಜೆ ದುಮ್ಕಾ ಜಿಲ್ಲೆಯಲ್ಲಿ ಗುಡುಗು ಸಹಿತ ಭಾರಿ ಮಳೆ ಪ್ರಾರಂಭವಾದ ನಂತರ ಹನ್ಸ್ದಿಹಾ ಪ್ರದೇಶದ ಆಟದ ಮೈದಾನದ ಪಕ್ಕದಲ್ಲಿ ಹಲವಾರು ಪ್ರೇಕ್ಷಕರು ಟೆಂಟ್ ಅಡಿಯಲ್ಲಿ ಆಶ್ರಯ ಪಡೆದಿದ್ದರು. ಇದೇ ವೇಳೆ ಸಿಡಿಲು ಬಡಿದಿದೆ. ಸಿಡಿಲು ಟೆಂಟ್ ಮೇಲೆ ಅಪ್ಪಳಿಸಿದ್ದು, ಈ ವೇಳೆ ಟೆಂಟ್ ಒಳಗಿದ್ದ ಶಿವಲಾಲ್ ಸೊರೆನ್ (32 ವರ್ಷ) ಮತ್ತು ಸಂತ್ಲಾಲ್ ಹೆಂಬ್ರಾಮ್ (20 ವರ್ಷ) ಎಂಬ ಇಬ್ಬರು ಸಾವನ್ನಪ್ಪಿದ್ದಾರೆ ಮತ್ತು ಅದೇ ಗುಡಾರದಲ್ಲಿದ್ದ ಮೂವರು ಗಾಯಗೊಂಡಿದ್ದಾರೆ ಎಂದು ಪ್ರಭಾರ ಪೊಲೀಸ್ ಠಾಣಾಧಿಕಾರಿ ಜಿತೇಂದ್ರ ಕುಮಾರ್ ಸಾಹು ತಿಳಿಸಿದ್ದಾರೆ.


ಎಲ್ಲಾ ಗಾಯಾಳುಗಳನ್ನು ಸರೈಯಾಹತ್ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಜಿಲ್ಲಾ ಸಿವಿಲ್ ಸರ್ಜನ್ ಬಚ್ಚಾ ಪ್ರಸಾದ್ ಸಿಂಗ್ ಮಾತನಾಡಿ, ಅವರಲ್ಲಿ ಒಬ್ಬರನ್ನು ಪ್ರಥಮ ಚಿಕಿತ್ಸೆ ನೀಡಿದ ನಂತರ ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಗಿದೆ. ಇನ್ನಿಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.



ಮೈಸೂರಿನ ದಿ ಕಾಸ್ಮೋಪಾಲಿಟನ್ ಕ್ಲಬ್ ಅಧ್ಯಕ್ಷರಾಗಿ ಹೆಚ್.ಎಸ್.ವೆಂಕಟೇಶ್, ಉಪಾಧ್ಯಕ್ಷರಾಗಿ ಎಂ.ವಿ.ಪ್ರಮೋದ್, ಗೌರವ ಕಾರ್ಯದರ್ಶಿಯಾಗಿ ಎಂ.ಎಸ್. ಜಯಪ್ರಕಾಶ್, ಗೌರವ ಖಜಾಂಚಿಯಾಗಿ ಜಿ.ರಿಷಭ್‌ದೇವ್, ಕಮಿಟಿ ಸದಸ್ಯರಾಗಿ ಆರ್.ಆನಂದ್, ಸಿ.ಮೋಹನ್ ಕುಮಾರ್, ಆರ್.ಯಶವಂತ್ ಕುಮಾರ್. ಎಸ್.ಸಂದೀಪ್, ಎಂ.ಜೆ.ಚರಣ್, ಮಹೇಂದ್ರ ಎಂ. ನಾಗಪ್ಪ, ಸತೀಶ್ ಅಂಚಲ್ಕರ್ ಆಯ್ಕೆಯಾಗಿದ್ದಾರೆ.

ಕೊಡಗು ಮಾಡೆಲ್ ಸ್ಕೂಲ್‌ನ ವಿಜ್ಞಾನ ವಸ್ತು ಪ್ರದರ್ಶನಕ್ಕೆ ತೆರೆ

ಮೈಸೂರು,ಸೆ.24(ಪಿಎಂ)– ವಿಜ್ಞಾನದ ವಿವಿಧ ಮಾದರಿಗಳ ಪ್ರದರ್ಶನದ ಮೂಲಕ ವೈಜ್ಞಾನಿಕ ಲೋಕದ ಅನಾವರಣಕ್ಕೆ ವೇದಿಕೆಯಾಗಿದ್ದ ಮೈಸೂರಿನ ಸಾತಗಳ್ಳಿಯ ವಿದ್ಯಾಶಂಕರ ಬಡಾವಣೆಯಲ್ಲಿರುವ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ (ಮೈಸೂರು ಪೂರ್ವ) ಅಧೀನದ ಕೊಡಗು ಮಾಡೆಲ್ ಸ್ಕೂಲ್‌ನ ಅಂತರ ಶಾಲಾ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಭಾನುವಾರ ತೆರೆ ಬಿದ್ದಿತು.



ಶಾಲೆಯ ಶ್ರೀಮತಿ ಪಾಂಡಂಡ ಚೀತಮ್ಮ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭದಲ್ಲಿ ಉತ್ತಮ ಮಾದರಿಗಳನ್ನು ಪ್ರದರ್ಶಿಸಿದ ವಿವಿಧ ಶಾಲಾ ವಿದ್ಯಾರ್ಥಿಗಳಿಗೆ ಮೈಸೂರು ಮಹಾನಗರಪಾಲಿಕೆ ವಾರ್ಡ್ 36ರ ಪಾಲಿಕೆ ಸದಸ್ಯೆ ರಜಿನಿ ಅಣ್ಣಯ್ಯ ಬಹುಮಾನ ವಿತರಣೆ ಮಾಡಿದರು.

7 ಮತ್ತು 8ನೇ ತರಗತಿ ವಿಭಾಗದಲ್ಲಿ ವಿಜಯ ವಿಠ್ಠಲ ಶಾಲೆ ವಿದ್ಯಾರ್ಥಿಗಳು ಪ್ರಥಮ (ಮಾದರಿ–ಜಿರೊಸ್ಕೋಪಿಕ್ ಟ್ರಾನ್ಸ್‌ಪೋರ್ಟ್) ಮತ್ತು ದ್ವಿತೀಯ (ಆಂಫಿಬಿಯಸ್ ಮೆಕಲ್) ಬಹುಮಾನಕ್ಕೆ ಭಾಜನರಾದರು. 9 ಮತ್ತು 10ನೇ ತರಗತಿ ವಿಭಾಗದಲ್ಲಿ ವಿದ್ಯಾಜ್ಯೋತಿ ಶಾಲೆಯ ವಿದ್ಯಾರ್ಥಿಗಳು ಪ್ರಥಮ (ಚಂದ್ರಯಾನ–3ರ ವಿಕ್ರಮ್ ಲ್ಯಾಂಡರ್) ಮತ್ತು ಎಸ್‌ಎನ್‌ಎಸ್ ಶಾಲೆ ವಿದ್ಯಾರ್ಥಿಗಳು ದ್ವಿತೀಯ (ಫ್ರೀ ಎಲೆಕ್ಟ್ರಿಕ್ ಜನರೇಟರ್) ಬಹುಮಾನ ಪಡೆದರು. ಅಲ್ಲದೆ, ಈ ಎರಡೂ ವಿಭಾಗಗಳಲ್ಲೂ ಕೊಡಗು ಮಾಡೆಲ್ ಸ್ಕೂಲ್‌ನ ವಿದ್ಯಾರ್ಥಿಗಳು ವಿಶೇಷ ಬಹುಮಾನಕ್ಕೆ ಭಾಜನರಾದರು.

ಇದೇ ವೇಳೆ ಮಾತನಾಡಿದ ರಜಿನಿ ಅಣ್ಣಯ್ಯ, ವಿಜ್ಞಾನ ವಸ್ತು ಪ್ರದರ್ಶನದಲ್ಲಿನ ಮಾದರಿಗಳು ಆಕರ್ಷಕವಾಗಿ ಮೂಡಿಬಂದಿವೆ. ಈ ರೀತಿಯ ಪ್ರಾಯೋಗಿಕ ಕಲಿಕೆಯು ಮಕ್ಕಳ ಜ್ಞಾನಾಭಿವೃದ್ಧಿಗೆ ಸಹಕಾರಿಯಾಗಲಿದೆ. ಕೊಡಗು ಮಾಡೆಲ್ ಸ್ಕೂಲ್‌ನಲ್ಲಿ ಮಕ್ಕಳ ಕಲಿಕೆ ಉತ್ತಮ ವಾತಾವರಣ ಕಲ್ಪಿಸಲಾಗಿದೆ. ಆ ಮೂಲಕ ಈ ಭಾಗದ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡುತ್ತಿದ್ದು, ಪಿಯುಸಿ ಶಿಕ್ಷಣವನ್ನೂ ಶಾಲೆಯಲ್ಲಿ ಆರಂಭಿಸಬೇಕೆಂದು ಸಲಹೆ ನೀಡಿದರು.

ಶಾಲೆಯ ಅಧ್ಯಕ್ಷೆ ಸಿ.ಕೆ.ಸೀತಮ್ಮ ಮಾತನಾಡಿ, ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತು ಪ್ರದರ್ಶನದ ಎಲ್ಲಾ ಮಾದರಿಗಳು ಉತ್ತಮವಾಗಿರುವ ಮೂಲಕ ಪ್ರದರ್ಶನ ಯಶಸ್ಸು ಕಂಡಿದೆ. ಪ್ರತಿಯೊಬ್ಬರು ವೈಜ್ಞಾನಿಕ ಮನೋಭಾವ ಹಾಗೂ ತಾರ್ಕಿಕ ಆಲೋಚನೆ ಬೆಳೆಸಿಕೊಳ್ಳಬೇಕು. ಪ್ರತಿಯೊಂದನ್ನು ವಿಶ್ಲೇಷಿಸಿ ಅರ್ಥೈಸಿಕೊಂಡು ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್‌ನ (ಮೈಸೂರು ಪೂರ್ವ) ಉಪಾಧ್ಯಕ್ಷ ಪಿ.ಕೆ.ಬೋಪಯ್ಯ, ಕಾರ್ಯದರ್ಶಿ ಕೆ.ಎಂ.ಬೆಳ್ಳಿಯಪ್ಪ, ಖಜಾಂಚಿ ಸಿ.ಎಂ.ಚಂಗಪ್ಪ ಶಾಲೆಯ ಆಡಳಿತಾಧಿಕಾರಿ ಕಾವೇರಿ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಹಾಜರಿದ್ದರು.

ಮೈಸೂರು ಮಿತ್ರ

ಭಾರತ ಫುಟ್ಬಾಲ್ ತಂಡ ಪ್ರತಿನಿಧಿಸಿದ್ದ ಮೈಸೂರು ಪಿ.ನರಸಿಂಹ ನಿಧನ



ಮೈಸೂರು, ಸೆ.24– ಭಾರತ ಫುಟ್ಬಾಲ್ ತಂಡವನ್ನು ಪ್ರತಿನಿಧಿಸಿದ್ದ ಮೈಸೂರಿನ ದೊಡ್ಡ ಒಕ್ಕಲಗೇರಿ ನಿವಾಸಿ ಪಿ.ನರಸಿಂಹ(80) ಅವರು ಭಾನುವಾರ ನಿಧನರಾದರು. ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ಬೆಳಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಜಾವಾ ಫ್ಯಾಕ್ಟರಿ ಉದ್ಯೋಗಿಯಾಗಿದ್ದಾಗ ಐಡಿಯಲ್ ಜಾವಾ ಫುಟ್ಬಾಲ್ ತಂಡದಲ್ಲಿ ಆಡುತ್ತಿದ್ದ ನರಸಿಂಹ ಅವರು, ನಂತರ ಹಂತಹಂತವಾಗಿ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಆಟಗಾರರಾಗಿ ಗುರುತಿಸಿಕೊಂಡಿದ್ದರು. ಬಳಿಕ ದಕ್ಷಿಣ ಕೊರಿಯಾದ ಸಿಯೋಲ್‌ನಲ್ಲಿ 1976ರಲ್ಲಿ ನಡೆದ 6ನೇ ಪ್ರೆಸಿಡೆಂಟ್ ಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಇವರು ಭಾರತ ತಂಡವನ್ನು ಪ್ರತಿನಿಧಿಸಿ, ಉತ್ತಮ ಪ್ರದರ್ಶನ ನೀಡಿದ್ದರು. ಅಲ್ಲದೆ ಕರ್ನಾಟಕ ರಾಜ್ಯ ಫುಟ್ಬಾಲ್ ಅಸೋಸಿಯೇಷನ್ ಆಡಳಿತ ಮಂಡಳಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಇಂದು ಮೈಸೂರು ನಗರ ಪೊಲೀಸ್ ಸ್ಪಂದನ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆ

ಮೈಸೂರು,ಸೆ.24(ಪಿಎಂ)–ಮೈಸೂರು ನಗರ ಪೊಲೀಸ್ ಸ್ಪಂದನ ಪತ್ತಿನ ಸಹಕಾರ ಸಂಘದ 2021–22 ಮತ್ತು 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಸೆ.25ರಂದು ಬೆಳಗ್ಗೆ 11ಕ್ಕೆ ಕರ್ನಾಟಕ ಪೊಲೀಸ್ ಅಕಾಡೆಮಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಂಘದ ಅಧ್ಯಕ್ಷರೂ ಆದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅಧ್ಯಕ್ಷತೆ ವಹಿಸಲಿದ್ದು, ಸಂಘದ ಸಂಸ್ಥಾಪಕರೂ ಆದ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಉಪ ಪೊಲೀಸ್ ಆಯುಕ್ತರಾದ ಎಂ.ಮುತ್ತುರಾಜು, ಜಾಹ್ನವಿ, ಮಾರುತಿ, ಸಂಘದ ಸಿಇಓ ಕುಮಾರ್, ಗೌರವ ಸಲಹೆಗಾರ ಉಮಾಮಹೇಶ್ವರ, ಲೆಕ್ಕಪರಿಶೋಧಕ ಫ್ರಾನ್ಸಿಸ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಸರ್ಪ ಸಂಸ್ಕಾರ ಪೂಜೆ

ಮೈಸೂರು,ಸೆ.24(ಪಿಎಂ)– ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಸೆ.25ರಂದು ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರ ಮತ್ತು ಕಾಲಸರ್ಪಶಾಂತಿ, ಸೆ.26ರಂದು ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರಾಂಗ ಹೋಮ, ಆಶ್ಲೇಷಾ ಬಲಿ ಕಾಲಸರ್ಪ ಶಾಂತಿ ಮತ್ತು ಕುಜದೋಷ ನೆರವೇರಿಸಲಾಗುತ್ತಿದೆ. ಮಾಹಿತಿಗೆ ಜಾತಕ ವಿಮರ್ಶಕ ಮೈ.ಕುಮಾರ್ (98451 83399, 93421 83392) ಅವರನ್ನು ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಜನತಾ ದರ್ಶನ

ಅಧಿಕಾರಿಗಳು ಸಭೆಯಲ್ಲಿ ಹಾಜರಿರುತ್ತಾರೆ. ಇವರೆಲ್ಲರ ನಡುವೆ ಸಮನ್ವಯ ಸಾಧಿಸಿ ಜನತಾ ದರ್ಶನ ಅರ್ಥಪೂರ್ಣವಾಗಿ ಮತ್ತು ಫಲಪ್ರದವಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾಗಿ ನೇಮಕಗೊಂಡಿರುವ ಹಿರಿಯ ಐಎಎಸ್ ಅಧಿಕಾರಿಗಳ ಮೇಲಿರುತ್ತದೆ. ಪ್ರತಿ ಜಿಲ್ಲೆಯಲ್ಲೂ ಜನತಾ ದರ್ಶನ ನಡೆಸುವ ಬಗ್ಗೆ ಸಾರ್ವಜನಿಕರಿಗೆ ಈಗಾಗಲೇ ತಿಳಿವಳಿಕೆ ನೀಡಲಾಗಿದೆ. ನಿಗದಿತ ಸ್ಥಳದಲ್ಲಿ, ನಿಗದಿತ ಸಮಯಕ್ಕೆ ಜನತಾ ದರ್ಶನ ಆರಂಭವಾಗಬೇಕು ಎನ್ನುವ ಸೂಚನೆಯನ್ನೂ ಸರ್ಕಾರ ನೀಡಿದೆ. ಇಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು. ಇವುಗಳಿಗೆ ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ಒದಗಿಸುವುದು ಪ್ರಥಮ ಆದ್ಯತೆಯಾಗಿರುತ್ತದೆ. ತಾಂತ್ರಿಕ ಕಾರಣಗಳಿಂದ ಇದು ಸಾಧ್ಯವಾಗದಿದ್ದರೆ ಸಾರ್ವಜನಿಕರ ಅಹವಾಲುಗಳು ಸ್ಥಳದಲ್ಲೇ ದಾಖಲಾಗಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ವರ್ಗಾವಣೆಗೊಳ್ಳುತ್ತವೆ. ಎಲ್ಲದಕ್ಕೂ ಕಾಲ ಮಿತಿಯಲ್ಲಿ ಪರಿಹಾರ ಒದಗಿಸುವ ಮತ್ತು ಸಾರ್ವಜನಿಕರು ನೀಡಿದ ಅಹವಾಲಿನ ಸ್ಥಿತಿಗತಿಯನ್ನು ಅರ್ಜಿದಾರರಿಗೆ ಮನವರಿಕೆ ಮಾಡಿಸುವ ಜವಾಬ್ದಾರಿ ಕೂಡ ಜಿಲ್ಲಾಡಳಿತದ ಮೇಲೆ ಇರುತ್ತದೆ.

ಜನತಾ ದರ್ಶನದಲ್ಲಿ ಸಲ್ಲಿಕೆಯಾಗುವ ಸಾರ್ವಜನಿಕರ ಅಹವಾಲುಗಳು ಈಗಾಗಲೇ ಚಾಲ್ತಿಯಲ್ಲಿರುವ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಐಪಿಜಿಆರ್‌ಎಸ್–ಇಂಟೆಗ್ರೇಟೆಡ್ ಪಬ್ಲಿಕ್ ಗ್ರಿವಿಯೆನ್ಸ್ ರಿಡ್ರೆಸಲ್ ಸಿಸ್ಟಂ) ತಂತ್ರಾಂಶದಲ್ಲಿ ದಾಖಲಾಗುತ್ತದೆ. ಇಲ್ಲಿಂದಲೇ ಸಂಬಂಧಪಟ್ಟ ಇಲಾಖೆಗಳಿಗೆ ಅರ್ಜಿಗಳ ವಿಲೇವಾರಿಯೂ ಆಗಲಿದೆ. ಬಳಿಕ ಕಾಳಜಿ ವಹಿಸಿ ಕಾಲಮಿತಿಯಲ್ಲಿ ಪರಿಹಾರ ಒದಗಿಸಲು ಕ್ರಮ ವಹಿಸಬೇಕು ಎನ್ನುವ ಸೂಚನೆ ಈಗಾಗಲೇ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನೆಯಾಗಿದೆ.

ಮುಂದುವರೆದ ರೈತರ ಹೋರಾಟ

ಇರಲ್ಲ ಅಂದಿದ್ದರು. ಹೀಗೆ ನೀರು ಬಿಟ್ಟರೆ ಕಾಂಗ್ರೆಸ್‌ನ ಒಬ್ಬರೂ ನಮ್ಮ ವೇದಿಕೆಗೆ ಬರಬೇಡಿ ಎಂದು ಅಸಮಾಧಾನ ಹೊರ ಹಾಕಿದರು.

ರೈತನ ಮಗನಾಗಿ ಬಂದಿದ್ದೇನೆ: ಈ ವೇಳೆ ಮಾತನಾಡಿದ ಶಾಸಕ ಪಿ.ಎಂ.ನರೇಂದ್ರಸ್ವಾಮಿ, ನಾನು ಶಾಸಕನಾಗಿ ಅಲ್ಲ. ರೈತನ ಮಗನಾಗಿ ಬಂದಿದ್ದೇನೆ. ನಾವು ಇಂದು ಆಡಳಿತ ಪಕ್ಷದಲ್ಲಿದ್ದೇವೆ. ಆದರೆ ಸಂಕಷ್ಟ ಸೂತ್ರ ಕಂಡುಕೊಳ್ಳದೆ ಎಲ್ಲರೂ ಲೋಪ ಎಸಗಿದ್ದೇವೆ ಎಂದು ಸ್ವಪಕ್ಷದ ಸರ್ಕಾರದ ವಿರುದ್ಧ ಗುಡುಗಿದರು.

ಕಾವೇರಿ ವಿಚಾರದಲ್ಲಿ ಅನ್ಯಾಯ ಆಗುತ್ತಿರುವುದು ನಮಗೆ. ಮಂಡ್ಯ ನಾಗಕರಿಕನಾಗಿ ನೀರು ನಿಲ್ಲಿಸಬೇಕು ಎಂದು ಹೇಳುತ್ತೇನೆ. ಸಮಸ್ಯೆ ಸಂದರ್ಭ ಮಾತನಾಡಿ, ಬೇರೆ ಸಂದರ್ಭ ಮೈ ಮರೆತು ಕುಳಿತಿದ್ದೇವೆ. ನಮಗೆ ತಿನ್ನಲು ಇಲ್ಲದಿದ್ದಾಗ ಬೇರೆಯವನಿಗೆ ಅನ್ನ ಕೊಡು ಅಂದರೆ ಹೇಗೆ?. ಈ ವರ್ಷ ನಮಗೆ ಭಗವಂತನೇ ದಾರಿ ತೋರಿಸಬೇಕು. ಮಂಡ್ಯದ ಹಿತಕ್ಕಾಗಿ ಎಲ್ಲಾ ತ್ಯಾಗಕ್ಕೂ ನಾನು ಸಿದ್ಧ ಎಂದರು.

ಪ್ರಾಧಿಕಾರ ಕೇಂದ್ರ ಸರ್ಕಾರದ ಅಡಿ ಕೆಲಸ ಮಾಡುತ್ತಿದೆ. ಎಷ್ಟು ಜನ ಬಿಜೆಪಿ ಸಂಸದರಿದ್ದಾರೆ? ಇದರಲ್ಲಿ ರಾಜಕೀಯ ಮಾಡದೇ ತಪ್ಪು ಒಪ್ಪಿಕೊಂಡು ಕಾನೂನು ಮೂಲಕ ಜಯ ಪಡೆಯಬೇಕು. ಪ್ರಾಧಿಕಾರ ಮೌಖಿಕ ಸೂಚನೆ ಮೇರೆಗೆ ನೀರು ಬಿಡಲಾಗಿದೆ. ಒಕ್ಕೂಟದ ವ್ಯವಸ್ಥೆಯಲ್ಲಿ ಇರುವುದರಿಂದ ನಮಗೆ ಸಮಸ್ಯೆ. ಒಕ್ಕೂಟ ವ್ಯವಸ್ಥೆಯಲ್ಲಿರುವ ರಾಜ್ಯಗಳನ್ನು ನೋಡಿಕೊಳ್ಳಬೇಕಾದವರು ಯಾರು ಎನ್ನುವ ಮೂಲಕ ಕಾವೇರಿ ವಿವಾದಕ್ಕೆ ಕೇಂದ್ರ ಕಾರಣ ಎಂದು ಕಿಡಿಕಾರಿದರು.

ಸಿಎಂ ಜೊತೆ ನಾನು ಮಾತನಾಡುತ್ತೇನೆ. ಸುಪ್ರೀಂಕೋರ್ಟ್ ಆದೇಶ ಧಿಕ್ಕರಿಸಲು ಆಗಲ್ಲ ಎಂದಿದ್ದಾರೆ. ನಾನು ವೈಯಕ್ತಿಕವಾಗಿ ಕಾವೇರಿ ವಿಚಾರದಲ್ಲಿ ಮಾತನಾಡುತ್ತೇನೆ. ಕುಮಾರಸ್ವಾಮಿ ಪಕ್ಷದ ರಾಜಕೀಯ ವಿಚಾರಕ್ಕೆ ದೆಹಲಿಗೆ ಹೋಗಿದ್ದಾರೆ. ಆದರೆ ಹೆಚ್ಚಿಕೆಗೆ ಅವಕಾಶ ಕೊಡುವ ಪ್ರಧಾನಿ ನಮಗೆ ಸಮಯ ಕೊಡುತ್ತಿಲ್ಲ. ಮಂಡ್ಯ ಜನ ಜೆಡಿಎಸ್‌ಗೆ ಹೆಚ್ಚು ತ್ಯಾಗ ಮಾಡಿದ್ದಾರೆ. ಅವರ ಪರ ನಿಲ್ಲಿ ಎಂದು ಹೆಚ್ಚಿಕೆಗೆ ಮನವಿ ಮಾಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಕಾವೇರಿ ವಿಚಾರದಲ್ಲಿ ದೃಢ ನಿರ್ಧಾರ ತೆಗೆದುಕೊಳ್ಳಬೇಕು. ನಿನ್ನೆ ಖುದ್ದು ಸಿಎಂ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಮಾತನಾಡಿದ್ದೇವೆ. ಸೆ.26ರಂದು ಸಿಡಬ್ಲ್ಯೂಆರ್‌ಸಿ ಸಭೆ ಮುಂದೆ ನೀರು ಬಿಡಲು ಆಗಲ್ಲ ಎನ್ನುತ್ತೇವೆ ಎಂದಿದ್ದಾರೆ. ಅಂತಹ ದೃಢ ನಿರ್ಧಾರ ತೆಗೆದುಕೊಳ್ಳಬೇಕೆನ್ನುವುದು ಕೂಡ ನಮ್ಮ ಒತ್ತಾಯ. ಸೆ.29ಕ್ಕೆ ಕರ್ನಾಟಕ ಬಂದ್‌ಗೆ ಕರೆ ಕೊಡಲಾಗಿದೆ. ಕಾವೇರಿ ವಿಚಾರದಲ್ಲಿ ಯಾರೇ ಹೋರಾಟ ಮಾಡಿದರೂ ಅದಕ್ಕೆ ನಮ್ಮ ಬೆಂಬಲ ಇರುತ್ತದೆ. ಒಗ್ಗಟ್ಟಾಗಿ ಒಂದೇ ವೇದಿಕೆಯಲ್ಲಿ ಹೋರಾಟ ನಡೆಸಲು ನಾವು ಕೂಡ ಪ್ರಯತ್ನ ಮಾಡುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಕೆ.ಟಿ.ಶ್ರೀಕಂಠೇಗೌಡ, ಎಂ.ಎಸ್. ಆತ್ಮಾನಂದ, ಜಿ.ಬಿ.ಶಿವಕುಮಾರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಂ, ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಕನ್ನಡಸೇನೆ ಮಂಜು, ದಸಂಸ ಕೃಷ್ಣ, ಅಂಬುಜಮ್ಮ ಇನ್ನಿತರರು ಭಾಗವಹಿಸಿದ್ದರು.

ರಾಜಕೀಯ ಮಾಡಬಾರದು

ಮಾಡಿಕೊಟ್ಟಿದ್ದೇವೆ. ನಮ್ಮ ಅಧಿಕಾರಿಗಳು, ವಕೀಲರು ರಾಜ್ಯದ ಪರ ಸಮರ್ಥವಾದ ಮಂಡಿಸಿದ್ದಾರೆ. ಆದರೂ ಈ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸುವುದು ಸರಿಯಲ್ಲ ಎಂದರು. ತಮಿಳುನಾಡಿಗೆ ನೀರು ಬಿಡುವುದನ್ನು ವಿರೋಧಿಸಿ, ಬೆಂಗಳೂರು ಬಂದ್‌ಗೆ ಕರೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ಹೋರಾಟ ಮಾಡಲು ಪ್ರತಿಯೊಬ್ಬರಿಗೂ ಹಕ್ಕಿದೆ. ಆದರೆ ಸಾರ್ವಜನಿಕ ಆಸ್ತಿ–ಪಾಸ್ತಿಗೆ ನಷ್ಟವಾಗದಂತೆ ಶಾಂತಿಯುತವಾಗಿ ಪ್ರತಿಭಟನೆ ಮಾಡಿ ಎಂದು ಪ್ರತಿಭಟನಾಕಾರರಿಗೆ ಸಲಹೆ ನೀಡಿದರು.

ಕಾವೇರಿ ವಿಚಾರವಾಗಿ ಸೆ.27ರಂದು ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದ್ದು, ಅಂದು ನಮ್ಮ ಪರವಾದ ಆದೇಶ ಬರುತ್ತದೆ ಎಂಬ ನಿರೀಕ್ಷೆ ಇದೆ. ಏನೇ ಆದರೂ ಮೈಸೂರು ದಸರಾ ಮಹೋತ್ಸವದ ಮೇಲೆ ಕರಿಛಾಯೆ ಬೀರುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರು ದಸರಾವನ್ನು ಅದ್ದೂರಿಯಾಗಿ ಆಚರಣೆ ಮಾಡಲು ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಇದಕ್ಕೆ ಸಮ್ಮತಿ ಸೂಚಿಸಿದ್ದರು. ಆದರೆ ಈಗ ಮಳೆಯ ಅಭಾವದಿಂದ ಕರ್ನಾಟಕದ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇದೆ. ಜೊತೆಗೆ ಬರದ ಛಾಯೆ ಮೂಡಿದೆ. ಈ ಕಾರಣದಿಂದ ಈಗ ಮೈಸೂರು ದಸರಾವನ್ನು ಅದ್ದೂರಿಯಾಗಿ ಅಲ್ಲದೆ, ಸರಳವೂ ಇಲ್ಲದೆ ಸಾಂಪ್ರದಾಯಿಕವಾಗಿ ಆಚರಣೆ ಮಾಡಲಾಗುವುದು ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.

ಸಾಂಪ್ರದಾಯಿಕ ದಸರಾ ವ್ಯಾಖ್ಯಾನವೇ ಬೇರೆ ಇದೆ. ಇತ್ತೀಚೆಗೆ ದಸರಾದಲ್ಲಿ ಕಲೆ, ಕ್ರೀಡೆ, ಸಾಹಿತ್ಯ ಸೇರಿದಂತೆ ಇತರ ಕ್ಷೇತ್ರಗಳ ಮಹತ್ವ ಕಡಿಮೆಯಾಗುತ್ತಿದೆ. ಈಗ ಇದಕ್ಕೆ ಜೀವ ತುಂಬುವ ಕೆಲಸ ಮಾಡುತ್ತಿದ್ದೇವೆ. ದಸರಾದಲ್ಲಿ ಎಲ್ಲಾ ಕಾರ್ಯಕ್ರಮಗಳು ನಡೆಯಲಿವೆ. ಆದರೆ ದುಂದು ವೆಚ್ಚಕ್ಕೆ ಬ್ರೇಕ್ ಹಾಕಲಾಗುವುದು. ಪ್ರಾಯೋಜಕತ್ವಕ್ಕೆ ಹೆಚ್ಚಿನ ಮಹತ್ವ ನೀಡಲಾಗುವುದು. ಆದರೆ ದಸರಾ ವೇಳೆ ಮೈಸೂರಿನ ದೀಪಾಲಂಕಾರ ಎಂದಿನಂತಿರುತ್ತದೆ. ಅದರಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಉಸ್ತುವಾರಿ ಸಚಿವರು ಸ್ಪಷ್ಟನೆ ನೀಡಿದರು. ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿ ಮೊದಲೇ ನಿರೀಕ್ಷೆ ಮಾಡಿದ್ದೆವು. ಕಾಂಗ್ರೆಸ್ ಪಕ್ಷ ಶಕ್ತಿಯುತವಾಗಿರುವ ಕಾರಣ ಇವರಿಬ್ಬರ ಮೈತ್ರಿಯಿಂದ ನಮಗೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂದು ಡಾ.ಮಹದೇವಪ್ಪ ತಿಳಿಸಿದರು.

ಮಳೆ ಕೊರತೆಗೆ ಜಾಗತಿಕ ತಾಪಮಾನದ ಏರುಪೇರು ಸಹ ಕಾರಣ

● ವಿಜ್ಞಾನಿ ಕೊಳ್ಳೇಗಾಲ ಶರ್ಮಾ ಪ್ರತಿಪಾದನೆ ● ಕೊಡಗು ಮಾಡೆಲ್ ಶಾಲೆಯಲ್ಲಿನ ವಿಜ್ಞಾನ ವಸ್ತುಪ್ರದರ್ಶನದಲ್ಲಿ ಫೋಲ್ಡ್‌ಸ್ಕೋಪ್ ಬಗ್ಗೆ ಮಾಹಿತಿ

ಮೈಸೂರು, ಸೆ.24(ಎಂಟಿವೈ)– ದಕ್ಷಿಣ ಭಾರತದಲ್ಲಿ ಕಳೆದ ಕೆಲ ವರ್ಷಗಳಿಂದ ಮಳೆಯ ಕೊರತೆ ತೀವ್ರಗೊಂಡಿದ್ದು, ಅದಕ್ಕೆ ಕಾರಣವಾದ ಜಾಗತಿಕ ತಾಪಮಾನದ ಏರುಪೇರು ತಡೆಗೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ವಿಜ್ಞಾನಿ ಕೊಳ್ಳೇಗಾಲ ಶರ್ಮಾ ಎಚ್ಚರಿಸಿದ್ದಾರೆ.

ಮೈಸೂರಿನ ವಿದ್ಯಾಶಂಕರ ಬಡಾವಣೆಯಲ್ಲಿರುವ ಕೊಡಗು ಮಾಡೆಲ್ ಶಾಲೆಯಲ್ಲಿ ಭಾನುವಾರ ವಿಜ್ಞಾನ ವಸ್ತು ಪ್ರದರ್ಶನದ ಅಂಗವಾಗಿ ಆಯೋಜಿಸಿದ್ದ ಫೋಲ್ಡ್‌ಸ್ಕೋಪ್ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಮೀಕ್ಷೆಯೊಂದರ ವರದಿಯಂತೆ ಕಳೆದ ಕೆಲವು ವರ್ಷಗಳಿಂದ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದಲ್ಲಿ ಮಳೆ ಪ್ರಮಾಣ ಕ್ಷೀಣಿಸಿದೆ. ಇದಕ್ಕೆ ಕಾರಣವೇನೆಂದು ಗಮನಿಸಬೇಕು. ಮೇಲ್ನೋಟಕ್ಕೆ ಜಾಗತಿಕ ತಾಪಮಾನದ ಏರುಪೇರು ಇದಕ್ಕೆ ಕಾರಣ ಎಂದು ತಿಳಿದು ಬಂದಿದೆ. ಇನ್ನಾದರೂ ಪರಿಸರದ ಸಮತೋಲನ ಕಾಪಾಡಲು ಎಲ್ಲರೂ ಸಹಕರಿಸಬೇಕಾಗಿದೆ ಎಂದರು.

ಬೆಂಗಳೂರು ನಗರದಲ್ಲಿ ಅಂತರ್ಜಲದ ಪ್ರಮಾಣ ಕುಸಿಯುತ್ತಿದೆ. ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣಕ್ಕಿಂತ ದುಪ್ಪಟ್ಟು ಪ್ರಮಾಣದ ಅಂತರ್ಜಲವನ್ನು ಮೇಲೆತ್ತಲಾಗುತ್ತಿದೆ. ಮಿತಿ ಮೀರಿದ ಪ್ರಮಾಣದಲ್ಲಿ ಅಂತರ್ಜಲವನ್ನು ಮೇಲೆತ್ತುತ್ತಾ ಹೋದರೆ, ಮುಂದಿನ ದಿನಗಳಲ್ಲಿ ಸಂಕಷ್ಟ ಎದುರಾಗುವುದು ಖಚಿತ. ನೀರು ಬಳಕೆ ಅನಿವಾರ್ಯ. ಆದರೆ ಹಿತ–ಮಿತ ಬಳಕೆ ಮಾಡಲು ಎಲ್ಲರೂ ಬದ್ಧರಾಗಬೇಕು ಎಂದು ಸಲಹೆ ನೀಡಿದರು.



ವಿಜ್ಞಾನ ಎಂಬುದು ಕೇವಲ ಶಾಲಾ–ಕಾಲೇಜು ಹಾಗೂ ನಾಲ್ಕು ಗೋಡೆಗಳ ನಡುವೆ ಕಲಿಯುವ ವಿಷಯವಲ್ಲ. ಮನೆ ಒಳಗೆ ಹಾಗೂ ಹೊರಗೂ ಕಲಿಯಬಹುದು. ಶಾಲೆಗಳಲ್ಲಿ ಮೈಕ್ರೋಸ್ಕೋಪ್‌ಗಳನ್ನು ವಿದ್ಯಾರ್ಥಿಗಳು ನೋಡಿರುತ್ತಾರೆ. ಒಂದು ವಸ್ತುವಿನ ಗಾತ್ರವನ್ನು ನೂರುಪಟ್ಟು ಹೆಚ್ಚಿಸಿ ತೋರಿಸುವ ಗುಣ ಮೈಕ್ರೋಸ್ಕೋಪ್‌ನದ್ದಾಗಿದೆ. ಇದರಿಂದಲೇ ಜೀವಾಣುಗಳನ್ನು ಪರೀಕ್ಷಿಸುತ್ತೇವೆ. ಕೆಲವು ಸಂದರ್ಭದಲ್ಲಿ ಹೊರಗೆ ಯಾವುದಾದರೂ ಪ್ರಯೋಗ ಮಾಡಲು ಹೋದಾಗ ಜೊತೆಗೆ ಮೈಕ್ರೋಸ್ಕೋಪ್ ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಜೀವಾಣುಗಳ ಸ್ಯಾಂಪಲ್ ಅನ್ನು ಪ್ರಯೋಗಾಲಯಕ್ಕೆ ತಂದು ಮೈಕ್ರೋಸ್ಕೋಪ್ ಮೂಲಕ ಪರೀಕ್ಷೆ ಮಾಡಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಮೈಕ್ರೋಸ್ಕೋಪ್‌ನಂತೆ ಕಾರ್ಯನಿರ್ವಹಿಸುವ ಫೋಲ್ಡ್‌ಸ್ಕೋಪ್ ತಯಾರಿಸಲಾಗಿದೆ. ಇದನ್ನು ಸುಲಭವಾಗಿ ಕೊಂಡೊಯ್ಯಬಹುದಾಗಿದೆ ಎಂದು ವಿವರಿಸಿದರು.

ಬಳಿಕ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನೊಳಗೊಂಡ ತಂಡ ರಚಿಸಿ ಫೋಲ್ಡ್‌ಸ್ಕೋಪ್ ನೀಡಿ ಪ್ರಾತ್ಯಕ್ಷಿಕೆ ಮೂಲಕ ಅದರ ಬಳಕೆ, ಉಪಯೋಗ, ಪ್ರಯೋಗ ಮಾಡುವ ವಿಧಾನ ಸೇರಿದಂತೆ ಇನ್ನಿತರ ವಿಷಯಗಳನ್ನು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಕೊಡಗು ಮಾಡೆಲ್ ಶಾಲೆಯ ಉಪಾಧ್ಯಕ್ಷ ಪಿ.ಕೆ.ರಮೇಶ್ ಬೋಪಯ್ಯ, ಖಜಾಂಚಿ ಸಿ.ಎಂ.ಚೆಂಗಪ್ಪ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಈಸ್ಟ್ ಕಾರ್ಯದರ್ಶಿ ಕೆ.ಎಂ.ಬೆಳ್ಳಿಯಪ್ಪ, ಸ್ಕೂಲ್ ಎಜುಕೇಷನ್ ಕೌನ್ಸಿಲ್ ಮೆಂಬರ್ ಡಾ.ಕೆ.ಎಸ್.ಮುತ್ತಮ್ಮ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಕೊಡವ ಮಾಡೆಲ್ ಶಾಲೆ ಸೇರಿದಂತೆ ವಿವಿಧ ಶಾಲೆಗಳ 8–10ನೇ ತರಗತಿಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇದರೊಂದಿಗೆ ಎರಡು ದಿನಗಳ ವಿಜ್ಞಾನ ವಸ್ತುಪ್ರದರ್ಶನಕ್ಕೆ ತೆರೆ ಬಿತ್ತು.

ಬಿಜೆಪಿಯೊಂದಿಗೆ ಮೈತ್ರಿ ವಿರೋಧಿಸಿ ಜೆಡಿಎಸ್ ಅಲ್ಪಸಂಖ್ಯಾತ ಮುಖಂಡರು ಸೆ.27ರಂದು ಸಾಮೂಹಿಕ ರಾಜೀನಾಮೆ ನಿರ್ಧಾರ



ಮೈಸೂರು, ಸೆ.24(ಜಿಎ)–ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ವಿರೋಧಿಸಿ, ನರಸಿಂಹರಾಜ ಕ್ಷೇತ್ರದ ಜೆಡಿಎಸ್ ಅಲ್ಪಸಂಖ್ಯಾತ ಮುಖಂಡರು ಸೆ.27ರಂದು ಸಾಮೂಹಿಕವಾಗಿ ಪಕ್ಷಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದೇವೆ ಎಂದು ಜೆಡಿಎಸ್‌ನ ರಾಜ್ಯ ಕಾರ್ಯದರ್ಶಿ ಅಬ್ದುಲ್ ಖಾದರ್ ಶಾಹಿದ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಪಕ್ಷದ ಜಾತ್ಯಾತೀತ ಸಿದ್ಧಾಂತ ಮೆಚ್ಚಿ ನಾವು ಪಕ್ಷ ಸೇರ್ಪಡೆಗೊಂಡಿದ್ದೆವು. ಆದರೆ, ಅಲ್ಪಸಂಖ್ಯಾತರು, ದಲಿತರು ಮತ್ತು ಶೋಷಿತ ವರ್ಗದವರಿಗೆ ವಿರೋಧ ಮನೋಭಾವ ಹೊಂದಿರುವ ಬಿಜೆಪಿಯೊಂದಿಗಿನ ಮೈತ್ರಿ ನಿಜಕ್ಕೂ ಬೇಸರ ತರಿಸಿದ್ದು, ಇದನ್ನು ವಿರೋಧಿಸಿ ಜೊತೆಗೆ ಜಾತ್ಯಾತೀತ ನಿಲುವಿಗೆ ಬದ್ಧರಾಗಿ ರಾಜೀನಾಮೆ ನೀಡಲು ಮುಂದಾಗಿದ್ದೇವೆ ಎಂದರು.

ಹಿಜಾಬ್, ಮಾಂಸ ಮಾರಾಟ, ಅಲ್ಪಸಂಖ್ಯಾತ ವರ್ತಕರ ವಿರುದ್ಧ ಬಿಜೆಪಿ ಕೈಗೊಂಡ ನಿಲುವು ಖಂಡನೀಯ. ಜೆಡಿಎಸ್‌ನಿಂದ ಆಯ್ಕೆಯಾಗಿರುವ ಪಾಲಿಕೆ ಸದಸ್ಯರು ಸಹ ಈ ಬಗ್ಗೆ ತಮ್ಮ ನಿಲುವು ಪ್ರದರ್ಶಿಸಬೇಕು. ಹಾಗೇ ಜೆಡಿಎಸ್ ರಾಜ್ಯಾಧ್ಯಕ್ಷರಾದ ಸಿ.ಎಂ.ಇಬ್ರಾಹಿಂ ನಿರಂತರವಾಗಿ ಬಿಜೆಪಿಯ ನಿರ್ಧಾರಗಳನ್ನು ವಿರೋಧಿಸಿಕೊಂಡು ಬಂದಿದ್ದರು. ಆದರೆ, ಈಗ ಅವರು ಏಕೆ ಮೌನ ವಹಿಸಿದ್ದಾರೆ. ಈ ಕೂಡಲೇ ಅವರು ತಮ್ಮ ನಿಲುವನ್ನು ತಿಳಿಸಬೇಕು ಎಂದು ಒತ್ತಾಯಿಸಿದರು.

ಸೆ.27ರಂದು ಸಂಜೆ 5ಗಂಟೆಗೆ ಎನ್.ಆರ್.ಮೊಹಲ್ಲಾದ ರಿಲಯನ್ಸ್ ಎನ್.ಎಸ್ ಫಂಕ್ಷನ್ ಹಾಲ್‌ನಲ್ಲಿ ಸಭೆ ಸೇರಿ, ಸಾಮೂಹಿಕವಾಗಿ ರಾಜೀನಾಮೆ ನೀಡಲು ಈಗಾಗಲೇ ನಿರ್ಧರಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಬ್ದುಲ್ ಗಫೂರ್ ಅಜಾದ್, ಅಫ್ತಾಬ್ ಅಹಮದ್, ಮುಜಾಹಿದ್, ತನ್ವೀರ್ ಅಹಮದ್, ಇಮ್ರಾನ್ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಶ್ರವಣ ದೋಷವುಳ್ಳವರ ವಿಶೇಷ ಸಮಾವೇಶ



ಮೈಸೂರು, ಸೆ.24(ಜಿಎ)–ರಾಜ್ಯ ಕಿವುಡರ ಕ್ಷೇಮಾಭಿವೃದ್ಧಿ ಸಂಘ ಮತ್ತು ಜಿಲ್ಲಾ ಕಿವುಡರ ಸಂಸ್ಥೆ ವತಿಯಿಂದ ಸೆ.26ರಂದು ನಗರದ ಕಲಾಮಂದಿರದಲ್ಲಿ ವಿಶ್ವ ಕಿವುಡರ ದಿನಾಚರಣೆ ಪ್ರಯುಕ್ತ ವಿಶೇಷ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎಸ್.ಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಗಂಟೆಗೆ ಆರಂಭವಾಗಲಿರುವ ಸಮಾವೇಶದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ಹಾಗೂ ಅಧ್ಯಕ್ಷತೆ ಎಸ್.ಮೂರ್ತಿ ವಹಿಸುವರು. ಮುಖ್ಯ ಅತಿಥಿಗಳಾಗಿ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ, ಮೇಯರ್ ಶಿವಕುಮಾರ್ ಆಗಮಿಸಲಿದ್ದಾರೆ ಎಂದರು.

ಶ್ರವಣ ದೋಷವುಳ್ಳವರ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ಸಮಾವೇಶ ಆಯೋಜಿಸಲಾಗಿದ್ದು, ರಾಜ್ಯದ ಎಲ್ಲ ಜಿಲ್ಲೆಗಳಿಂದ ಸುಮಾರು 1500 ಪ್ರತಿನಿಧಿಗಳು ಆಗಮಿಸುತ್ತಿದ್ದಾರೆ. ಅಂದು ಬೆಳಗ್ಗೆ 9.30ಕ್ಕೆ ರೈಲ್ವೆ ನಿಲ್ದಾಣದಿಂದ ಕಲಾಮಂದಿರದವರೆಗೆ ಬೃಹತ್ ಜಾಥಾ ನಡೆಯಲಿದೆ. ನಂತರ ಚಿಂತನ ಗೋಷ್ಠಿ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರವಣ ದೋಷವುಳ್ಳವರಿಗೆ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಮೊದಲಾದವು ನಡೆಯಲಿವೆ. ಸಮಾವೇಶದಲ್ಲಿ ಶ್ರವಣ ದೋಷವುಳ್ಳವರು ಭಾಗವಹಿಸುತ್ತಿರುವುದರಿಂದ ಅನುವಾದ ಮಾಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಿವುಡರ ಸಂಘದ ಅಧ್ಯಕ್ಷ ಕೆ.ಎಸ್.ಉಮಾಶಂಕರ್, ಉಪಾಧ್ಯಕ್ಷ ಗಣೇಶ್ ರಾವ್ ವಿ, ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಎಸ್.ಟಿ.ಮಹೇಶ್, ಉಪಾಧ್ಯಕ್ಷ ಮಹೇಶ್ ವರ್ಮಾ ಉಪಸ್ಥಿತರಿದ್ದರು.

ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಸನ್ಮಾನ : ನಾಳೆ ಮೈಸೂರಲ್ಲಿ ಕುರುಬ ಸಮಾಜದಿಂದ ಪೂರ್ವಭಾವಿ ಸಭೆ



ಮೈಸೂರು, ಸೆ.24(ಜಿಎ)–ಶಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆಯ 9ನೇ ರಾಷ್ಟ್ರೀಯ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿದ್ದು, ಈ ಸಂಬಂಧ ಸೆ.26ರಂದು ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಜಿಲ್ಲಾಧ್ಯಕ್ಷ ಬಿ.ಎನ್.ದೊಳ್ಳೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸ್ಥೆಯ 9ನೇ ರಾಷ್ಟ್ರೀಯ ಸಮಾವೇಶವನ್ನು ಅ.3ರಂದು ಬೆಳಗಾವಿಯ ಸಿಪೆಡ್ ಮೈದಾನದಲ್ಲಿ ಆಯೋಜಿಸಿದ್ದು, ಈ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಸೆ.26ರಂದು ಬೆಳಗ್ಗೆ 11ಗಂಟೆಗೆ ನಗರದ ಸಿದ್ಧಾರ್ಥ ಬಡಾವಣೆಯ ಕನಕ ಭವನದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದ್ದು, ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಎಚ್.ವಿಶ್ವನಾಥ್, ಎಚ್.ಎಂ.ರೇವಣ್ಣ, ರಾಜ್ಯ ಪದಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಯಲಿದೆ ಎಂದರು.

ಸಮಾಜದ ಸಂಘ ಸಂಸ್ಥೆಗಳು ಒಗ್ಗೂಡಿ ಸನ್ಮಾನಿಸಲಾಗುತ್ತಿದ್ದು, ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದವರು ಭಾಗಿಯಾಗುವುದಕ್ಕೆ ಸಂಬಂಧಿಸಿದಂತೆ ಈ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಚಂದ್ರಕುಮಾರ್, ಎಂ.ಎನ್.ನವೀನ್‌ಕುಮಾರ್, ರಾಮಣ್ಣ, ಕುರುಬರಹಳ್ಳಿ ಪ್ರಕಾಶ್, ರವಿ, ಪವನ್ ಸಿದ್ದರಾಮ ಉಪಸ್ಥಿತರಿದ್ದರು.



ಮೈಸೂರಿನ ದೇವರಾಜ ಮೊಹಲ್ಲಾದ ಭಜರಂಗಿ ಯುವಕರ ಭಕ್ತ ಮಂಡಳಿಯ 46ನೇ ವರ್ಷದ ಸಾರ್ವಜನಿಕ ಗಣಪತಿ ಉತ್ಸವ ಭಕ್ತಿ–ಭಾವದಿಂದ ನಡೆಯಿತು. ಈ ವೇಳೆ ಹಿಂದೂ ಸಂಘಟನೆಯ ಮುಖಂಡರಾದ ಮೈ.ಕಾ.ಪ್ರೇಮ್‌ಕುಮಾರ್, ರಾ.ಪರಮೇಶ್ ಗೌಡ, ರಾಕೇಶ್ ಭಟ್, ಸಂಜಯ್, ಟಿ.ಎಸ್. ಅರುಣ್, ಯಶ್ವಂತ್ ಸಿಂಗ್, ಮಂಡಳಿಯ ಸುರೇಂದ್ರ, ಆನಂದ್, ಸಚಿನ್ ನಾಯಕ ಉಪಸ್ಥಿತರಿದ್ದರು.

ಮಾಜಿ ಸೈನಿಕರ ನೆಮ್ಮದಿ ಬದುಕಿಗೆ ಅವಕಾಶ ಮಾಡಿಕೊಡಬೇಕು

ಎಂಎಲ್‌ಸಿ ಸಿ.ಎನ್.ಮಂಜೇಗೌಡರ ಸಲಹೆ



ಮೈಸೂರು, ಸೆ.24(ಜಿಎ)–ದೇಶಕ್ಕಾಗಿ ಹೆಂಡತಿ ಮಕ್ಕಳನ್ನು ಬಿಟ್ಟು ಗಡಿಯಲ್ಲಿ ವೈರಿಗಳೊಡನೆ ಹೋರಾಡಿ ತ್ಯಾಗಮಯಿಗಳಾಗಿದ್ದ ಮಾಜಿ ಸೈನಿಕರು ಸ್ವಾಭಿಮಾನಿಗಳಾಗಿ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ವಿವೇಕಾನಂದ ನಗರದಲ್ಲಿರುವ ನಾಗಮ್ಮ ಕಲ್ಯಾಣ ಮಂಟಪದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಡೆದ 2022–23ನೇ ಸಾಲಿನ 2ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ಮಾಜಿ ಸೈನಿಕರಿಗೆ ಎಲ್ಲವನ್ನು ಕೊಡುತ್ತಿದೆ. ಆದರೆ, ಅದನ್ನು ಬಳಸಿಕೊಳ್ಳಲು ನಾವೆಲ್ಲರೂ ಒಗ್ಗಟ್ಟಾಗಿರಬೇಕು. ನಾನು ಮಾಜಿ ಸೈನಿಕನೆಂಬ ಕಾರಣಕ್ಕೆ ನನಗೆ ಎಂ.ಎಲ್.ಸಿ. ಟಿಕೆಟ್ ನೀಡಿದರು. ನಿಮ್ಮೆಲ್ಲರ ಆಶೀರ್ವಾದದಿಂದ ಗೆದ್ದು ಬಂದೆ ನಾನೊಬ್ಬ ಮಾಜಿ ಸೈನಿಕನೆಂದು ಹೇಳಲು ನನಗೆ ಹೆಮ್ಮೆ ಇದೆ. ನಾನು ನಿಮ್ಮಿಂದ ಏನ್ನೂ ಬಯಸುವುದಿಲ್ಲ. ವಿಧಾನಪರಿಷತ್‌ನಲ್ಲಿ ಮಾಜಿ ಸೈನಿಕರ ಸಮಸ್ಯೆಯ ಬಗ್ಗೆ ಮಾತನಾಡುತ್ತೇನೆ ಎಂದರು.

ಮಾಜಿ ಸೈನಿಕರ ಸಂಘದ ಅಭಿವೃದ್ಧಿಗೆ ನಾನು ದುಡಿಯಲು ಸಿದ್ಧನಿದ್ದು ಸಂಘಕ್ಕೆ ಸಂಪನ್ಮೂಲ ಕ್ರೋಢೀಕರಿಸಲು ಸಹಾಯ ಮಾಡುತ್ತೇನೆ. ಈ ಸಂಘಕ್ಕೆ ಸಿ.ಎ. ನಿವೇಶನ ಕೊಡಿಸುವುದರ ಜೊತೆಗೆ ಅದರ ಹಣವನ್ನು ನಾನೇ ಭರಿಸುತ್ತೇನೆ. ಕಟ್ಟಡ ನಿರ್ಮಾಣಕ್ಕೂ ವಿಧಾನಪರಿಷತ್ ಸದಸ್ಯರ ನಿಧಿಯಿಂದ 5 ಲಕ್ಷ ರೂ. ಗಳನ್ನು ನೀಡುತ್ತೇನೆ. ನೀವೂ ತಮ್ಮಿಂದಾಗುವ ಸಹಾಯವನ್ನು ಸಂಘಕ್ಕೆ ಮಾಡಬೇಕು. ಮಾಜಿ ಸೈನಿಕರ ಮಕ್ಕಳಿಗೆ ಪ್ರೋತ್ಸಾಹ, ವಿದೇಶದಲ್ಲಿ ಓದುವ ಮಕ್ಕಳಿಗೆ ಹಾಗೂ ಕ್ರೀಡಾಪಟುಗಳಿಗೂ ಸಂಘದಿಂದ ಸಹಾಯ ಮಾಡಲು ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮಾಜಿ ಸೈನಿಕರ ಮಕ್ಕಳನ್ನು ಅಭಿನಂದಿಸಲಾಯಿತು. ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಕೆ.ಪಿ.ದಿವಾಕರ್, ಉಪಾಧ್ಯಕ್ಷ ಎಂ.ಕೆ.ಅಣ್ಣೇಗೌಡ, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ನಂಜುಂಡಸ್ವಾಮಿ, ಖಜಾಂಚಿ ಎಸ್.ನಟರಾಜ್, ವೀರನಾರಿಯರ ಘಟಕದ ರಾಜ್ಯಾಧ್ಯಕ್ಷೆ ರಜನಿ ಸುಬ್ಬಯ್ಯ, ದಿನೇಶ್ ಗೌಡ, ಉಪಸ್ಥಿತರಿದ್ದರು.

ವಾಸ್ತವ ಸ್ಥಿತಿ ಮನವರಿಕೆ ಮಾಡಿಕೊಡುವಲ್ಲಿ ವಿಫಲ




ಮೈಸೂರು, ಸೆ.24(ಜಿಎ)–ಕೇಂದ್ರ ಸರ್ಕಾರಕ್ಕೆ ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಅಭಾವ ತಿಳಿಸುವಲ್ಲಿ ವಿಫಲರಾಗಿರುವ ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಮತ್ತು ಪ್ರತಾಪ್ ಸಿಂಹ ರಾಜೀನಾಮೆ ನೀಡಬೇಕೆಂದು ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಡ್ಯಾಂಗಳಲ್ಲಿ ಕೇವಲ 47 ಟಿಎಂಸಿ ನೀರು ಸಂಗ್ರಹವಿದೆ. 123 ವರ್ಷಗಳಲ್ಲಿ ಇಷ್ಟು ಕಡಿಮೆ ಮಳೆಯಾಗಿದ್ದು, ಆಗಸ್ಟ್, ಸೆಪ್ಟೆಂಬರ್‌ನಲ್ಲಿ ನಿರೀಕ್ಷಿತ ಮಳೆಯಾಗಿಲ್ಲ. ಮೈಸೂರು, ಮಂಡ್ಯ ಮತ್ತು ಚಾಮರಾಜನಗರದ ಸಂಸದರು ಕೇಂದ್ರ ಸರ್ಕಾರಕ್ಕೆ ಮಳೆಯ ಕೊರತೆಯ ಬಗ್ಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾಗಿದ್ದು, ಈ ಹಿನ್ನೆಲೆಯಲ್ಲಿ ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕುರುಬಾರಹಳ್ಳಿ ಪ್ರಕಾಶ್, ವಕೀಲ ರೇವಣ್ಣ, ಎಸ್.ಎ.ರಹೀಂ, ನವೀದ್ ಪಾಷ, ನಾಡನಹಳ್ಳಿ ಪ್ರಸಾದ್ ಮತ್ತು ಎಂ.ಎನ್.ನವೀನ್ ಕುಮಾರ್ ಉಪಸ್ಥಿತರಿದ್ದರು.

ಹಾಡಿ ಮಕ್ಕಳಲ್ಲಿ ಥೈರಾಯ್ಡ್, ಹೃದಯ ಸಂಬಂಧಿ ಸಮಸ್ಯೆ

ಮೈಸೂರು, ಸೆ.24(ಎಂಟಿವೈ)– ವಿವಿಧೆಡೆ ಆಶ್ರಮ ಶಾಲೆಗಳಲ್ಲಿ ನಡೆಸಿದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಕ್ಕಳಲ್ಲಿ ಅಪೌಷ್ಟಿಕತೆಯೊಂದಿಗೆ ಥೈರಾಯ್ಡ್ ಹಾಗೂ ಹೃದಯ ಸಂಬಂಧಿ ಸಮಸ್ಯೆ ಕಂಡು ಬಂದಿದ್ದು, ಹಾಡಿ ವಾಸಿಗಳು ಮಕ್ಕಳ ಶಿಕ್ಷಣದೊಂದಿಗೆ ಆರೋಗ್ಯದ ಕಡೆ ಗಮನ ಹರಿಸಬೇಕು ಎಂದು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಮನವಿ ಮಾಡಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಮುತ್ತೂರು ಹಾಡಿಯಲ್ಲಿರುವ ಸರ್ಕಾರಿ ಗಿರಿಜನ ಆಶ್ರಮ ಶಾಲೆಯಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆ, ವಾಕ್ ಮತ್ತು ಶ್ರವಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ



ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿವಿಧೆಡೆಯಿರುವ ಆಶ್ರಮ ಶಾಲೆಗಳ ಮಕ್ಕಳ ಹಿತ ಕಾಯುವ ನಿಟ್ಟಿನಲ್ಲಿ ಇಲಾಖೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗುತ್ತಿದೆ. ಈಗಾಗಲೇ ಮೈಸೂರು ಜಿಲ್ಲೆಯಲ್ಲಿ 5 ಆರೋಗ್ಯ ತಪಾಸಣಾ ಶಿಬಿರ ನಡೆಸಿ, 11 ಆಶ್ರಮ ಶಾಲೆಗಳ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸಲಾಗಿದೆ. ಹುಣಸೂರು ತಾಲೂಕಿನ ನೆಲ್ಲೂರುಪಾಲ ಆಶ್ರಮ ಶಾಲೆಯಲ್ಲಿನ ಹಲವು ಮಕ್ಕಳಿಗೆ ರಕ್ತಹೀನತೆ ಕಂಡುಬಂದಿದೆ. 7 ಮಕ್ಕಳಿಗೆ ಥೈರಾಯಿಡ್ ಸಮಸ್ಯೆ, 5 ಮಕ್ಕಳಿಗೆ ಹೃದಯ ಸಂಬಂಧಿ ಸಮಸ್ಯೆ ಹಾಗೂ 26 ಮಕ್ಕಳಿಗೆ ಕಿವಿ ಸಮಸ್ಯೆ ಕಂಡು ಬಂದಿದೆ. ಅಲ್ಲದೆ, 33 ಮಕ್ಕಳಲ್ಲಿ ಅಪೌಷ್ಟಿಕತೆ ಮತು 55 ಮಕ್ಕಳಿಗೆ ದಂತ ಸಮಸ್ಯೆ ಇದ್ದು, ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮುತ್ತೂರು ಆಶ್ರಮ ಶಾಲೆ, ಅಬ್ಬಳತೆ ಆಶ್ರಮ ಶಾಲೆ, ದೊಡ್ಡಹೊಸೂರು ಆಶ್ರಮ ಶಾಲೆಯ 168 ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಿ ಔಷಧಿಯನ್ನು ವಿತರಿಸಲಾಗಿದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಸಂಬಂಧಪಟ್ಟ ಆಸ್ಪತ್ರೆಗಳಿಗೆ ಕಳುಹಿಸಿ ಚಿಕಿತ್ಸೆ ಕೊಡಿಸಲಾಗುವುದು. ಇದರ ವೆಚ್ಚವನ್ನು ರಾಜ್ಯ ಗಿರಿಜನ ಸಂಶೋಧನಾ ಸಂಸ್ಥೆಯಿಂದಲೇ ಭರಿಸಲಾಗುವುದು. ಆಯಾ ಆಶ್ರಮ ಶಾಲೆಯ ಮುಖ್ಯ ಶಿಕ್ಷಕರು ನಾವು ಕರೆದಾಗ ಮಕ್ಕಳನ್ನು ಆಸ್ಪತ್ರೆಗಳಿಗೆ ಕರೆದುಕೊಂಡು ಬರಬೇಕು ಎಂದರು.

ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಮುದಾಯ ಆರೋಗ್ಯಾಧಿಕಾರಿ ಡಾ. ರವೀಶ್‌ಗಣಿ, ಕಿವಿ ಮೂಗು ಗಂಟಲು ತಜ್ಞರಾದ ಡಾ.ಮಹಾದೇವಪ್ಪ, ಮಕ್ಕಳ ದಂತ ವೈದ್ಯರಾದ ಡಾ.ಎಂ.ಡಿ.ಇಂದಿರಾ, ಮಕ್ಕಳ ತಜ್ಞರಾದ ಡಾ.ಜವಹರ್, ಡಾ.ಅಲೇಖಿಯಾ, ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಸಾರಾನ್ಸ್, ಹರ್ಷಿತಾ ಜೈನ್, ಎಂ.ರಾಜ, ವಿಜಯ್, ನಟೇಶ್, ಮುಖ್ಯ ಶಿಕ್ಷಕರಾದ ಬಿ.ಟಿ. ಮಹಾದೇವ, ದೇವಿ, ಯಶೋಧ, ತಾಂಡವೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ತಮಿಳುನಾಡಿಗೆ ನೀರು ಬಿಡುಗಡೆ ವಿರೋಧಿಸಿ

ನಾಳೆ ತಿ.ನರಸೀಪುರ ಬಂದ್

27 ಸಂಘಟನೆಗಳ ಬೆಂಬಲ, ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ವ್ಯಾಪಾರ– ವಹಿವಾಟು ಬಂದ್



ತಿ.ನರಸೀಪುರ,ಸೆ.24– ನಮ್ಮ ರಾಜ್ಯದಲ್ಲಿ ಮಳೆ ಕಡಿಮೆಯಾಗಿ ಬರಗಾಲ ಬಂದಿದ್ದು, ರೈತರ ಆತ್ಮಹತ್ಯೆ ಹೆಚ್ಚುತ್ತಿದ್ದರೂ ಕಾವೇರಿ ನೀರು ನಿರ್ವಹಣಾ ಮಂಡಳಿ ಪ್ರತಿನಿತ್ಯ 5000 ಕ್ಯೂಸೆಕ್ ನೀರು ತಮಿಳುನಾಡಿಗೆ ಹರಿಸಬೇಕೆಂದು ಆದೇಶ ನೀಡಿರುವುದನ್ನು ಖಂಡಿಸಿ ಸೆ.26ರ ಮಂಗಳವಾರ ಬಂದ್ ಕರೆ ನೀಡಲಾಗಿದೆ.

ಅಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ಟಿ.ನರಸೀಪುರ ಬಂದ್ ಆಚರಿಸಲಾಗುತ್ತಿದ್ದು, ತಾಲೂಕಿನ ಜನರು ಬೆಂಬಲ ನೀಡುವಂತೆ ರೈತ ಮುಖಂಡ ಕಿರಗಸೂರು ಶಂಕರ್ ಮನವಿ ಮಾಡಿದರು.

ನಂಜನಗೂಡು ಮುಖ್ಯ ರಸ್ತೆಯಲ್ಲಿರುವ ಕಬಿನಿ ಅತಿಥಿ ಗೃಹದಲ್ಲಿ ವಿವಿಧ ಸಂಘಟನೆಗಳ ಮುಖಂಡರ ಸಭೆಯಲ್ಲಿ ಮಾತನಾಡಿ, ಕೂಡಲೇ ರಾಜ್ಯ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ರಾಜ್ಯ ಸರ್ಕಾರ ಕೂಡಲೇ ವಿಧಾನಸಭೆ ಅಧಿವೇಶನ ಕರೆದು ಸಮಗ್ರವಾಗಿ ಚರ್ಚಿಸಿ, ಸಂಕಷ್ಟ ಸೂತ್ರ ಜಾರಿ ಮಾಡುವ ತನಕ ನೀರು ಬಿಡುವುದಿಲ್ಲ ಎಂಬ ಎಚ್ಚರಿಕೆಯನ್ನು ಕೇಂದ್ರ ಸರ್ಕಾರ ಮತ್ತು ಕಾವೇರಿ ನೀರು ನಿರ್ವಹಣಾ ಮಂಡಳಿಗೆ ನೀಡಬೇಕು ಎಂದು ಆಗ್ರಹಿಸಿದರು.

ರಾಜಕೀಯ ಪಕ್ಷಗಳ ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾವೇರಿ ನೀರು ನಿರ್ವಹಣಾ ಮಂಡಳಿ ಮತ್ತು ಕಾವೇರಿ ನೀರು ಪ್ರಾಧಿಕಾರವನ್ನು ಕೂಡಲೇ ರದ್ದು ಮಾಡಿ ಕಾರ್ಯನಿರ್ವಹಿಸುತ್ತಿರುವ ನೀರು ನಿರ್ಮಾಣ ಮಂಡಳಿ ರಚಿಸಬೇಕು. ಈ ಮಂಡಳಿಯಲ್ಲಿ ನಾಲ್ಕು ರಾಜ್ಯಗಳ ಪರಿಣತರು ನೀರಾವರಿ ತಜ್ಞರು ರೈತ ಪ್ರತಿನಿಧಿಗಳು ಎಲ್ಲರನ್ನು ಒಳಗೊಂಡಂತೆ ಮಂಡಳಿ ರಚನೆ ಮಾಡಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಭಾರತೀಯ ಚುನಾವಣಾ ಆಯೋಗ ರೀತಿ. ಕಾರ್ಯನಿರ್ವಹಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿ, ಬೆಂಗಳೂರು ಬಂದ್ ಬೆಂಬಲಿಸಿ ತಾಲೂಕು ಕಬಿನಿ–ಕಾವೇರಿ ಇತರ ಸಮಿತಿ ವತಿಯಿಂದ 27 ಸಂಘಟನೆಗಳ ಬೆಂಬಲದೊಂದಿಗೆ ಬಂದ್ ಆಚರಿಸಲಾಗುತ್ತಿದೆ ಎಂದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ರಾಜ್ಯ ಕಬ್ಬು ಬೆಳೆಗಾರ ಸಂಘ ದಲಿತ ಸಂಘರ್ಷ ಸಮಿತಿಗಳು, ನಯನಜ ಕ್ಷತ್ರಿಯ ಸಂಘ, ಮಡಿವಾಳ ಸಂಘ, ತಾಲೂಕು ಕನ್ನಡ ಸಾಹಿತ್ಯ ಪರಿಷತ್, ವರ್ತಕರ ಸಂಘ, ಟೈಲರ್ ಮಾಲೀಕರ ಸಂಘ, ಆರ್ಯವೈಶ್ಯ ಸಂಘ, ಸವಿತಾ ಸಮಾಜ ಟಿ.ನರಸೀಪುರ ಟೌನ್, ಗಿರಿವಿ ಮಾಲೀಕರ ಸಂಘ, ರಸ್ತೆ ಬದಿ ವ್ಯಾಪಾರಿಗಳ ಸಂಘ, ಕಾರ್ಮಿಕರ ಸಂಘ, ಮಾಲೀಕರ ಸಂಘ, 27 ಸಂಘಟನೆಗಳ ಬೆಂಬಲದೊಂದಿಗೆ ಟಿ.ನರಸೀಪುರ ಬಂದ್ ಆಚರಿಸಲಾಗುವುದು. ಸಾರ್ವಜನಿಕರು ವರ್ತಕರು ಟಿ.ನರಸೀಪುರದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ 26ನೇ ತಾರೀಕು ವಿದ್ಯೋದಯ ಸರ್ಕಲ್ ಬಳಿ 9 ಗಂಟೆಗೆ ಬಂದು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡುತ್ತಿದ್ದೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರುಗಳಾದ ಆಲಗೂಡು ಡಾ.ಚಂದ್ರಶೇಖರ್, ಯಡದೊರೆ ಮಹದೇವಯ್ಯ, ವಿಚಾರವಾದಿ ಕೆ ಎಸ್ ಪ್ರಭುಸ್ವಾಮಿ, ಕುರುಬರು ಸಿದ್ದೇಶ್, ಸೋಸ್ಲೆ ರಾಜಶೇಖರ್, ಬನ್ನಳ್ಳಿ ಸೋಮಣ್ಣ, ನಾಗೇಂದ್ರ, ಕನ್ನಡ ಪುಟ್ಟಸ್ವಾಮಿ, ಹುಣಸೂರು ಪುಟ್ಟಯ್ಯ, ರುದ್ರಸಿಪುರ್ ಮಲ್ಲಯ್ಯ, ಕಿರಗಸೂರು ಪ್ರಸಾದ್ ನಾಯಕ್, ಸ್ವಾಮಿಗೌಡ, ಕ್ರೇಜಿ ಸುರೇಶ್, ಸಾಗರ್, ಸಿಸ್ಟರ್ ಬ್ಯಾಂಗಲ್ಸ್ ಅಪ್ಪಣ್ಣ, ವಾಚಕುಮಾರ್, ತರಕಾರಿ ನಿಂಗರಾಜು, ಕುರುಬರು ಪ್ರದೀಪ, ಯಾಕನೂರು ರಾಜೇಶ್, ಆದಿ ಬೆಟ್ಟಳ್ಳಿ ನಂಜುಂಡಸ್ವಾಮಿ, ಮನೋಜ್ ನಾಗರಾಜು, ಕರುಹಟ್ಟಿ ಉಮೇಶ್ ಹಾಜರಿದ್ದರು.

ಸರಗೂರು ತಾಲೂಕಲ್ಲಿ ಹೆಚ್ಚುತ್ತಿರುವ ಕಾಡುಪ್ರಾಣಿಗಳ ಹಾವಳಿ

ನೀರು ಹಾಯಿಸಲು ಹೋದ ರೈತನ ಮೇಲೆ ಕಾಡಾನೆ ದಾಳಿ



ಸರಗೂರು, ಸೆ.24– ತಾಲೂಕಿನಲ್ಲಿ ಕಾಡುಪ್ರಾಣಿಗಳ ದಾಳಿ ದಿನದಿಂದ ದಿನಕ್ಕೆ ಹೆಚ್ಚಾಗಿದ್ದು, ಜಮೀನಿಗೆ ನೀರು ಹಾಯಿಸಲು ಹೋದ ರೈತನ ಮೇಲೆ ಆನೆ ದಾಳಿ ಮಾಡಿದೆ.

ತಾಲೂಕಿನ ಹಳೆ ಹೆಗ್ಗುಡಿಲು ಗ್ರಾಮದ ರೈತ ದಂಡನಾಯಕ(37) ಆನೆ ದಾಳಿಗೆ ಸಿಲುಕಿ ಗಂಭೀರ ಸ್ಥಿತಿಯಲ್ಲಿದ್ದಾನೆ.

ಈ ಹಿಂದೆ ಹಲವಾರು ಬಾರಿ ಆನೆಗಳು ಈ ರೀತಿಯ ಧಾಳಿ ನಡೆಸಿದರೂ ಎಚ್ಚೆತ್ತುಕೊಳ್ಳದ ಅರಣ್ಯ ಇಲಾಖೆ ಅಧಿಕಾರಿಗಳು, ರೈತರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ದಾಳಿ ಮಾಡಿದ ಆನೆ ಹಳೆ ಹೆಗ್ಗುಡಿಲು ಗ್ರಾಮದ ಸುತ್ತಮುತ್ತಲೇ ಇದ್ದು ಈವರೆಗೂ ಯಾವ ಅರಣ್ಯ ಸಿಬ್ಬಂದಿಗಳು ಬಂದು ಸ್ಥಳ ಮಹಜರು ಅಥವಾ ಆನೆ ಓಡಿಸುವ ಕಾರ್ಯವನ್ನು ಮಾಡಿಲ್ಲ ಎಂದು ಗ್ರಾಮದ ಗ್ರಾಮ ಪಂಚಾಯತಿ ಮಾಜಿ ಸದಸ್ಯ ಮಹದೇವ ನಾಯಕ, ಪಿ.ಚಿಕ್ಕನಾಯಕ, ನಿಂಗನಾಯಕ, ನಾಗನಾಯಕ, ತೋಪನಾಯಕ, ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದಲ್ಲಿ ಭಾರಿ ಪ್ರಮಾಣದ ಬೆಳೆ ನಾಶ ಆಗುತ್ತಿದೆ. ಆದರೆ ಈಗ ಜನರ ಮೇಲೆಯೇ ಆನೆ ದಾಳಿ ನಡೆಯುತ್ತಿದೆ. ಅರಣ್ಯ ಇಲಾಖೆ ಸಿಬ್ಬಂದಿ ವಿರುದ್ಧ ಗ್ರಾಮದ ಜನರು ತೀವ್ರ ಆಕ್ರೋಶ ಹೊರಹಾಕುತ್ತಿದ್ದಾರೆ.

ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಂಡನಾಯಕರಿಗೆ ಚಿಕಿತ್ಸೆ ನೀಡಲಾಗಿ ಹೆಚ್ಚಿನ ಚಿಕಿತ್ಸೆಗಾಗಿ ಇದೀಗ ಜೆ.ಎಸ್.ಎಸ್ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ದಂಡನಾಯಕ ಗಂಭೀರ ಸ್ಥಿತಿಯಲ್ಲಿದ್ದು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಯತೀಂದ್ರರಿಂದ ಮತದಾರರಿಗೆ ಕುಕ್ಕರ್, ಇಸ್ತ್ರಿ ಪೆಟ್ಟಿಗೆ ಕೊಡುಗೆ ಹೇಳಿಕೆ

ಬಿಜೆಪಿಯಿಂದ ನಂ.ಗೂಡು ಪೊಲೀಸ್ ಠಾಣೆಗೆ ದೂರು



ನಂಜನಗೂಡು, ಸೆ.24– ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ವರುಣ ಕ್ಷೇತ್ರದಲ್ಲಿ ಮಡಿವಾಳ ಸಮುದಾಯದ ಸಾವಿರಾರು ಜನರಿಗೆ ನನ್ನ ತಂದೆ ಸಿದ್ದರಾಮಯ್ಯ ಕುಕ್ಕರ್ ಮತ್ತು ಇಸ್ತ್ರಿ ಪೆಟ್ಟಿಗೆಯನ್ನು ಹಂಚಿದ್ದರು ಎಂದು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಬಹಿರಂಗವಾಗಿ ಹೇಳಿಕೆ ನೀಡಿದ್ದು, ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಬಿಜೆಪಿ ವತಿಯಿಂದ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಯಿತು.

ಬಿಜೆಪಿ ಮುಖಂಡ ಮತ್ತು ಮಾಜಿ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಉಪಾಧ್ಯಕ್ಷ ದೇವನೂರು ಪ್ರತಾಪ್, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ, ನಗರಾಧ್ಯಕ್ಷ ಶ್ರೀನಿವಾಸ ರೆಡ್ಡಿ, ಸೇರಿದಂತೆ ಬಿಜೆಪಿ ಕಾರ್ಯಕರ್ತರು ನಂಜನಗೂಡಿನ ಪಟ್ಟಣ ಪೊಲೀಸ್ ಠಾಣೆಗೆ ತೆರಳಿ ಡಿವೈಎಸ್ಪಿ ಗೋವಿಂದರಾಜು ಅವರಿಗೆ ದೂರು ನೀಡಿದರು.

ಇದೇ ಸಂದರ್ಭದಲ್ಲಿ ಭಾಸ್ಕರ್ ರಾವ್ ಮಾತನಾಡಿ, ಸೆ.15ರ ಶುಕ್ರವಾರ ನಂಜನಗೂಡಿನ ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿರುವ ಮಡಿವಾಳ ಸಮುದಾಯ ಭವನದ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಹಾಗೂ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯರವರು ವರುಣ ಕ್ಷೇತ್ರದಲ್ಲಿ ನಮಗೆ ಅನುಕೂಲವಾಗಲಿ ಎಂದು ಮಡಿವಾಳ ಸಮುದಾಯದ ರಾಜ್ಯಾಧ್ಯಕ್ಷ ನಂಜಪ್ಪ ಅವರು ಕುಕ್ಕರ್ ಮತ್ತು ಇಸ್ತ್ರಿ ಪೆಟ್ಟಿಗೆ ವಿತರಿಸುವ ಈ ಕಾರ್ಯಕ್ರಮವನ್ನು ರೂಪಿಸಿದ್ದರು. ನನ್ನ ತಂದೆ ಸಿದ್ದರಾಮಯ್ಯರವರನ್ನು ಕರೆಸಿ, ಅವರ ಕೈಯಿಂದಲೇ ಸಮುದಾಯದ ಸಾವಿರಾರು ಜನಕ್ಕೆ ಕುಕ್ಕರ್ ಮತ್ತು ಇಸ್ತ್ರಿಪೆಟ್ಟಿಗೆಗಳನ್ನು ವಿತರಣೆ ಮಾಡಿದ್ದರು. ಇದರಿಂದ ನಾವು ಗೆಲ್ಲಲು ಮಡಿವಾಳ ಸಮುದಾಯದವರು ದೊಡ್ಡ ಕೊಡುಗೆಯನ್ನು ನೀಡಿದ್ದಾರೆ ಎಂದು ಗೆದ್ದಿರುವ ಅಭ್ಯರ್ಥಿಯ ಮಗನೇ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ ಈ ಬಗ್ಗೆ ಮಾಧ್ಯಮಗಳಲ್ಲೂ ಸಹ ವರದಿಯಾಗಿದೆ. ಈ ಬಗ್ಗೆ ನಮ್ಮ ಬಿಜೆಪಿ ಪಕ್ಷ ಕೂಡ ಕ್ಷೇತ್ರದಲ್ಲಿ ನೈಜತೆಯನ್ನು ಖಾತರಿಪಡಿಸಿಕೊಂಡಿದೆ. ನಂತರ ಯತೀಂದ್ರರವರು ಸಾವಿರಾರು ಜನಕ್ಕೆ ನೀಡಿಲ್ಲ, ಸಾವಿರಕ್ಕಿಂತ ಕಡಿಮೆ ಜನಕ್ಕೆ ನೀಡಲಾಗಿದೆ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ ಎಂದು ಆಪಾದಿಸಿದರು.

ಚುನಾವಣೆ ನೀತಿ ಸಮಿತಿಯ ಪ್ರಕಾರ ಒಬ್ಬ ವ್ಯಕ್ತಿಗೆ ಆಮಿಷ ಹೊಡ್ಡಿದ್ದರೂ ಸಹ ಅದು ಅಪರಾಧವೇ. ಅವರು ಬೇರೊಬ್ಬರಿಗೆ ನೀತಿ ಪಾಠ ಹೇಳುತ್ತಾರೆ. ಆಮಿಷವೊಡ್ಡಿ ಮತ ಪಡೆಯುವುದು ಅಕ್ಷಮ್ಯ ಅಪರಾಧ. ಆದ್ದರಿಂದ ಅವರ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ ಕ್ರಮ ವಹಿಸಬೇಕು ಎಂದು ಒತ್ತಾಯಿಸಿ, ನಂಜನಗೂಡಿನ ಪೊಲೀಸರಿಗೆ ದೂರು ನೀಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ನಂಜನಗೂಡು ಹಾಗೂ ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ			(ದೂ: 2521923)
ಹನಿಮೂನ್ ಬ್ಯಾಂಕಾಕ್ (ಕ)	2 ಪ್ರದರ್ಶನಗಳು	ದಂದ್ವ (ಕ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ			(ದೂ: 2422871)
ತತ್ಸಮ ತದ್ಭವ(ಕ)	2 ಪ್ರದರ್ಶನಗಳು	ಎಕ್ಸ್‌ಪೆಂಡಬ್(ಇ)	2 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ			(ದೂ: 2497199)
ಜವಾನ್ (ಹಿ)			4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ			(ಮೊ:9900820093)
ಟೋಬಿ (ಕ)			4 ಪ್ರದರ್ಶನಗಳು
ಗಾಯಿತ್ರಿ			
ಸಪ್ತಸಾಗರದಾಚೆ ಎಲ್ಲೋ (ಕ)			4 ಪ್ರದರ್ಶನಗಳು
ರಾಜ್‌ಕಮಲ್			
ಮಾರ್ಕ್ ಆಂಟೋನಿ (ತ)			4 ಪ್ರದರ್ಶನಗಳು
ಸಂಗಂ			
ಜವಾನ್ (ಹಿ)			4 ಪ್ರದರ್ಶನಗಳು
ಲಿಡೋ			
ಒಲವೇ ಮಂದಾರ–2 (ಕ)			4 ಪ್ರದರ್ಶನಗಳು
ತಿಬ್ಬಾದೇವಿ			
ಜೈಲರ್ (ತ)			4 ಪ್ರದರ್ಶನಗಳು
ಪ್ರಭಾ			
13 ಪಾರ್ಟ್–1(ಕ)	2 ಪ್ರದರ್ಶನಗಳು	ಪರಿಶುದ್ಧಂ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 3	ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮತ್ತಿತಾಳೇಶ್ವರ ದೇವಸ್ಥಾನದಲ್ಲಿ ಕುಡಿಯುವ ನೀರಿನ ಘಟಕ ಉದ್ಘಾಟನೆ



ತಿ.ನರಸೀಪುರ,ಸೆ.24 – ತಾಲೂಕಿನ ಬನ್ನೂರು ಹೋಬಳಿ ಹೆಗ್ಗೂರು ಗ್ರಾಮದ ಶ್ರೀ ಮತ್ತಿತಾಳೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರ 2019–20 ನೇ ಸಾಲಿನ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ನಿರ್ಮಿಸಲಾಗಿರುವ ಸಾರ್ವಜನಿಕ ಕುಡಿಯುವ ನೀರಿನ ಘಟಕವನ್ನು ಶ್ರೀನಿವಾಸಪ್ರಸಾದ್ ಅವರ ಪತ್ನಿ ಭಾಗ್ಯಮ್ಮ ಭಾನುವಾರ ಲೋಕಾರ್ಪಣೆಗೊಳಿಸಿದರು.


ಅಳಿಯ ಮಾಜಿ ಶಾಸಕ ಹರ್ಷವರ್ಧನ್ ಅವರೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ಶ್ರೀ ಮತ್ತಿತಾಳೇಶ್ವರ ಸ್ವಾಮಿಯ ದರ್ಶನ ಪಡೆದ ನಂತರ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಮಾಜಿ ಶಾಸಕ ಹರ್ಷವರ್ಧನ್, ಶ್ರೀ ಮತ್ತಿತಾಳೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತಾದಿಗಳ ಸಂಖ್ಯೆಯನ್ನು ಗಮನಿಸಿದರೆ ಸೌಕರ್ಯದ ಕೊರತೆ ಕಾಣುತ್ತಿದೆ. ಇಲ್ಲಿಗೆ ಹೆಚ್ಚಿನ ಸವಲತ್ತು ಒದಗಿಸಿಕೊಡುವ ಅಗತ್ಯ ಇದೆ. ಅಲ್ಲದೇ ಸಾಕಷ್ಟು ಅವ್ಯವಸ್ಥೆ ಸಹ ಕಂಡುಬಂದಿದೆ ಎಂದರು.

ದೇವಸ್ಥಾನ ಸಮಿತಿಯವರು ಮನವಿ ಸಲ್ಲಿಸಿದ್ದರೆ ಓವರ್‌ಹೆಡ್ ಟ್ಯಾಂಕ್ ಮಾಡಿಸಲು ಕ್ರಮ ಕೈಗೊಳ್ಳಬಹುದಾಗಿತ್ತು ಎಂದ ಅವರು, ಸಂಸದರ ಗಮನಕ್ಕೆ ತಂದು ದೇವಸ್ಥಾನ ಹಾಗೂ ಭಕ್ತಾದಿಗಳಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ನಾನು ಪ್ರತಿನಿಧಿಸುವ ನಂಜನಗೂಡು ಕ್ಷೇತ್ರದಲ್ಲಿ 5 ವರ್ಷಗಳ ಹಿಂದೆ ಇದೇ ರೀತಿಯ ಅವ್ಯವಸ್ಥೆ ಇತ್ತು. ಶಾಸಕನಾದ ಮೇಲೆ 15 ಕೋಟಿ ರೂ.ಗಳ ವೆಚ್ಚದಲ್ಲಿ ಬೆಳ್ಳಿ ರಥ, ಪಾರ್ಕಿಂಗ್ ಲಾಟ್ ಮಾಡಿಸುವ ಮೂಲಕ ದೇವಸ್ಥಾನದ ಅಭಿವೃದ್ಧಿ ಮಾಡಲಾಯಿತು. ಕ್ಷೇತ್ರದ ಅಭಿವೃದ್ಧಿ ಜೊತೆಗೆ ದೇವಸ್ಥಾನದ ಅಭಿವೃದ್ಧಿಯಾದಲ್ಲಿ ಹೆಚ್ಚಿನ ಭಕ್ತಾದಿಗಳು ಬಂದು ಕ್ಷೇತ್ರ ಪ್ರವಾಸಿ ಕ್ಷೇತ್ರವಾಗಿ ಮುಂದುವರೆಯುವುದರಿಂದ ದೇವಸ್ಥಾನದ ಅಭಿವೃದ್ಧಿ ಅತ್ಯವಶ್ಯಕ ಎಂದರು.

ಶ್ರೀ ಮತ್ತಿತಾಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಾಕಷ್ಟು ಭಕ್ತಾದಿಗಳು ಬರುತ್ತಿದ್ದು ಭಕ್ತಾಧಿಗಳ ಸೇವೆ ಹಾಗೂ ಪಂಕ್ತಿ ಸೇವೆ ಗಮನಿಸಿದ್ದೇನೆ. ಆದರೆ ಭಕ್ತಾದಿಗಳಿಗೆ ಸೌಲಭ್ಯದ ಕೊರತೆ ಇದೆ.ಇಲ್ಲಿ ಅಭಿವೃದ್ಧಿ ಕೆಲಸಕ್ಕೆ ಹೆಚ್ಚಿನ ಅನುದಾನದ ಅವಶ್ಯಕತೆ ಇದೆ. ಹಾಗಾಗಿ ಶ್ರೀನಿವಾಸ ಪ್ರಸಾದ್‌ರವರ ಗಮನಕ್ಕೆ ತಂದು ಅವರ ಅವಧಿಯಲ್ಲೇ ಭಕ್ತಾದಿಗಳಿಗೆ ಹೆಚ್ಚಿನ ಸೌಕರ್ಯ ಕಲ್ಪಿಸಿ ಕೊಡಲಾಗುತ್ತದೆ ಎಂದು ಭರವಸೆ ನೀಡಿದರು. ಈ ವೇಳೆ ಮುಖಂಡರಾದ ರಮೇಶ್, ಕೇಶವ್, ಬಾಬು, ಸಂತೋಷ್, ಹೋಟೆಲ್ ರಾಮಸ್ವಾಮಿ, ದೇವಸ್ಥಾನ ಸಮಿತಿ ಸಮಿತಿ ಅಧ್ಯಕ್ಷ ಪ್ರದೀಪ್ ಕುಮಾರ್, ಕಾರ್ಯದರ್ಶಿ ಶಿವಪ್ರಕಾಶ್, ಎಂ.ನಿಂಗೇಗೌಡ, ಶಿವಕುಮಾರ್ ಮತ್ತಿತರರಿದ್ದರು

ಲಾಭದಲ್ಲಿ ಹೊಮ್ಮರಗಳ್ಳಿ ಕೃಷಿ ಪತ್ತಿನ ಸಂಘ



ಹಂಪಾಪುರ, ಸೆ.24– ಹೆಚ್.ಡಿ. ಕೋಟೆ ತಾಲೂಕು ಹೊಮ್ಮರಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಹೆಚ್.ಪಿ. ಪರಮೇಶ್ ಅಧ್ಯಕ್ಷತೆಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆಯಿತು.

ರಾಷ್ಟ್ರಗೀತೆಯೊಂದಿಗೆ ಆರಂಭವಾದ ಸಭೆಯಲ್ಲಿ ಮಾತನಾಡಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಧು, 347 ಸದಸ್ಯರಿಗೆ 6.16 ಕೋಟಿ ಬೆಳೆ ಸಾಲ ನೀಡಿದ್ದು, ಪಡಿತರ ಮಾರಾಟಗಳಿಂದ 2.48 ಲಕ್ಷ ಲಾಭ ಗಳಿಸಿರುವುದಾಗಿ ತಿಳಿಸಿದ್ದಾರೆ.

ಉಪಾಧ್ಯಕ್ಷರಾದ ಮಹದೇವಪ್ಪ, ನಿರ್ದೇಶಕರಾದ ಗೋಪಾಲಗೌಡ, ಜಗದೀಶ್, ಸಿದ್ದಚಾರಿ, ನಾಗರಾಜು, ರುದ್ರಪ್ಪ, ಮಲ್ಲನಾಯಕರು, ದೇವೀರಮ್ಮ, ನಂಜಮಣಿ, ದೇವಮ್ಮ, ಪುಟ್ಟಮ್ಮ, ಗ್ರಾಮ ಪಂಚಾಯ್ತಿ ಅಧ್ಯಕ್ಷರು ರಾಮಮ್ಮ, ಮಾಜಿ ಅಧ್ಯಕ್ಷರು ಅಲುಮೇಲಮ್ಮ ಚಿನ್ನಸ್ವಾಮಿ, ಇತರರು ಹಾಜರಿದ್ದರು.

ಅಭಿವೃದ್ಧಿಗೆ ಸಹಕರಿಸಿ

ಮಲ್ಕುಂಡಿ, ಸೆ.24– ಸಂಘದ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಒಗ್ಗಟ್ಟಿನಿಂದ ಸಹಕರಿಸಿ ಎಂದು ಮೈಸೂರು ಹಾಲು ಒಕ್ಕೂಟದ ನಿರ್ದೇಶಕಿ ನೀಲಾಂಬಿಕೆ ಮಹೇಶ್ ಮನವಿ ಮಾಡಿದರು.

ಸಮೀಪದ ದುಗ್ಗಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಿದಾಗ ಉತ್ತಮ ಜೀವನ ಸಾಗಲು ಸಾಧ್ಯವಾಗುತ್ತದೆ. ಸಂಘವು ಹೆಚ್ಚಿನ ಲಾಭಾಂಶ ಕಾಣಬೇಕಾದರೆ ರೈತರು ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದಾಗ ಸಂಘವು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಬಸಪ್ಪ, ಉಪಾಧ್ಯಕ್ಷ ಕುಮಾರ್, ವಿಸ್ತಾರಣಾಧಿಕಾರಿ ನಂಜುಂಡಸ್ವಾಮಿ, ನಿರ್ದೇಶಕರುಗಳಾದ ಮಲ್ಲಿಕಾರ್ಜುನಸ್ವಾಮಿ, ಬಸವಣ್ಣ, ಮಹದೇವಪ್ಪ, ಚಿನ್ನಸ್ವಾಮಪ್ಪ, ಹೊಂಬಳಮ್ಮ, ಸಿಇಓ ಅಶೋಕ, ಸಹಾಯಕ ಮಾದಪ್ಪ, ಸುರೇಶ್, ಮಲ್ಲಿಕಾರ್ಜುನ ಸೇರಿದಂತೆ ಪ್ರಮುಖರು ಹಾಜರಿದ್ದರು

ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಶಿವಾಜಿ ರಾವ್ ಪವಾರ್‌ಗೆ ಸಿಎಂ ಪದಕ



ಗಾವಡಗೆರೆ, (ಹುಣಸೂರು ತಾ.)ಸೆ. 24– ಚಾಮರಾಜನಗರ ಅಗ್ನಿಶಾಮಕ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಶಿವಾಜಿ ರಾವ್ ಪವಾರ್ ಅವರು ನಾಗರಿಕರ ಜೀವ ರಕ್ಷಣೆ ಹಾಗೂ ಆಸ್ತಿ ಸಂರಕ್ಷಣಾ ಕಾರ್ಯದಲ್ಲಿ ಸಲ್ಲಿಸಿರುವ ಅತ್ಯುನ್ನತ ಸೇವೆಯನ್ನು ಪರಿಗಣಿಸಿ ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದಿದ್ದು, ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪದಕ ನೀಡಿ ಸನ್ಮಾನಿಸಿದರು.

ಶಿವಾಜಿ ರಾವ್ ಪವಾರ್ ಗಾವಡಗೆರೆ ಸಮಿಪದ ಮನುಗನಹಳ್ಳಿಯವರಾಗಿದ್ದು ಹುಣಸೂರು ಮತ್ತು ಕೆ.ಆರ್.ನಗರ ತಾಲೂಕಿನ ಅಗ್ನಿಶಾಮಕ ದಳದ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿ ಪದೋನ್ನತಿಯೊಂದಿಗೆ ಚಾಮರಾಜನಗರ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇಂದು ರಸಮಂಜರಿ ಕಾರ್ಯಕ್ರಮ

ಕಂಪಲಾಪುರ,ಸೆ.24 – ಇಲ್ಲಿನ ಶೀ ವಿನಾಯಕ ಗೆಳೆಯರ ಬಳಗದ ವತಿಯಿಂದ ಮೊದಲನೇ ವರ್ಷದ ಗಣೇಶೋತ್ಸವದ ಅಂಗವಾಗಿ ಸೋಮವಾರ ರಾತ್ರಿ 7.30ಕ್ಕೆ ಕುಶಾಲನಗರದ ರವಿ ಅರ್ಪಿಸುವ ಝೇಂಕಾರ್ ಮೆಲೋಡಿಸ್ ಆರ್ಕೆಸ್ಟ್ರಾ ಏರ್ಪಡಿಸಲಾಗಿದ್ದು, ಸಾರ್ವಜನಿಕರು ಸಮಯಕ್ಕೆ ಸರಿಯಾಗಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿ ಕೊಡಬೇಕೆಂದು ಸಮಿತಿ ಪ್ರಕಟಣೆ ತಿಳಿಸಿದೆ.

ರೈತರಿಂದ ತರಗನಹಳ್ಳಿ ಡೈರಿಗೆ ನಿವ್ವಳ ಲಾಭ



ಮಲ್ಕುಂಡಿ, ಸೆ.24– ರೈತರು ಗುಣಮಟ್ಟದ ಹಾಲು ಸರಬರಾಜು ಮಾಡುತ್ತಿರುವುದರಿಂದ ಡೈರಿಗೆ 1.50 ಲಕ್ಷ ನಿವ್ವಳ ಲಾಭಾಂಶ ದೊರಕಿದೆ ಎಂದು ಮೈಸೂರು ಜಿಲ್ಲೆಯ ಮೈಮುಲ್ ನಿರ್ದೇಶಕಿ ನೀಲಾಂಭಿಕೆ ಮಹೇಶ್ ತಿಳಿಸಿದ್ದಾರೆ.

ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರವು ಹೈನುಗಾರಿಕೆಗೆ ಉತ್ತೇಜನ ನೀಡಿ ಪ್ರತಿ ಲೀಟರ್ ಹಾಲಿಗೆ 3 ರೂ. ಪ್ರೋತ್ಸಾಹ ಧನ ಹೆಚ್ಚಳ ಮಾಡಿದೆ. ಈ ಭಾಗದಲ್ಲಿ ಹೈನುಗಾರಿಕೆಗೆ ಉತ್ತಮ ವಾತಾವರಣವಿದ್ದು, ರೈತರು ಹೈನುಗಾರಿಕೆಗೆ ಒತ್ತು ನೀಡಬೇಕು. ಗುಣಮಟ್ಟದ ಹಾಲನ್ನು ಸರಬರಾಜು ಮಾಡಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ಗುರುಲಿಂಗಪ್ಪ, ಉಪಾಧ್ಯಕ್ಷ ಸಿದ್ದನಾಯಕ, ವಿಸ್ತರಣಾಧಿಕಾರಿ ನಂಜುಂಡಸ್ವಾಮಿ, ಗ್ರಾಪಂ ಸದಸ್ಯ ನಂಜುಂಡಸ್ವಾಮಿ, ನಿರ್ದೇಶಕರುಗಳಾದ ದೊರೆಸ್ವಾಮಿ, ಶಿವಕುಮಾರ್, ನಾಗಣ್ಣ, ರೇವಣ್ಣ, ಕೆಂಪಣ್ಣ, ಜವರೇಗೌಡ, ಪಾಪಣ್ಣ, ಸಿಇಓ ಟಿ.ಎನ್. ಮಹೇಶ್, ಹಾಲು ಪರೀಕ್ಷಕ ಮಂಜುನಾಥ್, ಕೃ.ಗ.ಕಾರ್ಯಕರ್ತ ಕುಮಾರ ಹಾಜರಿದ್ದರು

ಅ.1, ವರ್ಚುವಲ್ ಮೂಲಕ ಸರ್ಕಾರಿ ನೌಕರರ ಸಭೆ



ಹೆಚ್.ಡಿ.ಕೋಟೆ, ಸೆ.24– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ 2022ರ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ವರ್ಚುವಲ್ ವಿಧಾನದ ಮೂಲಕ ಅ.1ರ ಬೆಳಗ್ಗೆ 11 ಗಂಟೆಗೆ ರಾಜ್ಯ ಸರ್ಕಾರಿ ನೌಕರರ ಸಭೆ ನಡೆಯಲಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎ.ಎಸ್.ಮಹದೇವ್ ತಿಳಿಸಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಈ ವಿಶೇಷ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕಬ್ಬನ್‌ಪಾರ್ಕ್ ಬೆಂಗಳೂರು ಇದರ 2022ರ ಉಪವಿಧಿಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದ್ದು, ಕೋಟೆ ಸರಗೂರು ತಾಲೂಕಿನ ನೌಕರ ಸಂಘದ ಸರ್ವ ಸದಸ್ಯರು ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕು ಎಂದು ಮಹದೇವ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಘದ ಕಾರ್ಯದರ್ಶಿ ಸೋಮಸುಂದರ್ ಹಾಗೂ ಖಜಾಂಚಿ ಸೋಮಶೇಖರ್ ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಸ್ವಚ್ಛತೆಯೊಂದಿಗೆ ಮೌಲ್ಯಯುತವಾದ ಜೀವನ ರೂಪಿಸಿಕೊಳ್ಳಿ



ಹೆಚ್.ಡಿ.ಕೋಟೆ, ಸೆ.24– ಪಟ್ಟಣ, ನಗರ ಹಾಗೂ ಹಳ್ಳಿಗಳನ್ನು ಸ್ವಚ್ಛಗೊಳಿಸುವ ಪೌರ ಕಾರ್ಮಿಕರು ತಾವು ಸಹ ಸ್ವಚ್ಛತೆಯನ್ನು ಕಾಪಾಡಿಕೊಂಡು ತಮ್ಮ ಮೌಲ್ಯಯುತವಾದ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ ಅವರನ್ನು ಉನ್ನತ ಮಟ್ಟಕ್ಕೆ ತರಲು ಪೋಷಕರು ಶ್ರಮಿಸಬೇಕು, ನಿಮ್ಮ ಸಮಾಜದ ವಿವಾಹ ಸಮಾರಂಭಗಳು ಹಾಗೂ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಸಮುದಾಯ ಭವನವನ್ನು ನಿರ್ಮಿಸಿಕೊಡಲಾಗುವುದು, ಇದಕ್ಕಾಗಿ ಐದು ಕುಂಟೆ ಸ್ಥಳವನ್ನು ಗುರುತಿಸುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಜಿ.ಕೆಟಗರಿಯಲ್ಲಿ ಮನೆ ಮತ್ತು ನಿವೇಶನಗಳು ಇಲ್ಲದೆ ಇರುವ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಲು ನಿವೇಶನಗಳನ್ನು ಕೊಡಿಸಲು ಶ್ರಮಿಸುತ್ತೇನೆ ಎಂದರು.

ಮೈಸೂರಿನ ಸುಸಜ್ಜಿತ ಆಸ್ಪತ್ರೆಯಲ್ಲಿ ತಮ್ಮ ಕುಟುಂಬ ಸಮೇತರಾಗಿ ಎಲ್ಲರಿಗೂ ಉಚಿತ ಆರೋಗ್ಯ ತಪಾಸಣೆ ನಡೆಸಿ, ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ಹತ್ತು ಜನ ಪೌರಕಾರ್ಮಿಕರಿಗೆ ಅಭಿನಂದನೆ ಸಲ್ಲಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್, ಸದಸ್ಯರಾದ ಎಂ.ಮಧುಕುಮಾರ್, ಮಿಲ್ ನಾಗರಾಜ್, ಆಸಿಫ್ ಇಕ್ಬಾಲ್, ಪುರಸಭಾ ಮುಖ್ಯಾಧಿಕಾರಿ ಪಿ.ಸುರೇಶ್, ಕಚೇರಿ ವ್ಯವಸ್ಥಾಪಕಿ ಕೆ.ಎಂ.ರೇಷ್ಮಾ, ಅಧಿಕಾರಿಗಳಾದ ಬಿ.ರಕ್ಷಿತ್, ಸಂತೋಷ್, ಹರೀಶ್, ಯದುನಂದನ್, ಪರಮೇಶ್, ಸುಬ್ರಮಣಿ, ಮಹಾದೇವಯ್ಯ, ಸೀರಂಗ, ಲಕ್ಷ್ಮಣ, ಪಳನಿ, ಗಣೇಶ, ಪಾಂಡುರಂಗ, ನಾಗ, ಪ್ರತಾಪ, ಈಶ್ವರ, ರಂಗ, ಶಿವಣ್ಣ, ಸೂರಿ ಇದ್ದರು.

ಶಾಸಕ ಅನಿಲ್ ಚಿಕ್ಕಮಾದು ಅವರು ವೈಯಕ್ತಿಕವಾಗಿ ಪೌರಕಾರ್ಮಿಕರಿಗೆ ಬಟ್ಟೆ ಹಾಗೂ ತಲಾ ಎರಡು ಸಾವಿರ ರೂ.ಗಳ ವಿವಿಧ ವಸ್ತುಗಳನ್ನು ಖರೀದಿಸುವ ಟೋಕನ್ ವಿತರಿಸಿ, ಪೌರಕಾರ್ಮಿಕರ ಕುಟುಂಬ ಮತ್ತು ಮಕ್ಕಳಿಗಾಗಿ ವಿವಿಧ 10 ಬಗೆಯ ಕ್ರೀಡೆಗಳನ್ನು ನಡೆಸಿದರು. ಈ ಕ್ರೀಡೆಯಲ್ಲಿ ಭಾಗವಹಿಸಿ ಜಯಗಳಿಸಿದವರಿಗೆ ಬಹುಮಾನವನ್ನು ಸಹ ವಿತರಿಸಿದರು.

ಹೈದರಾಬಾದ್–ಬೆಂಗಳೂರು ಸೇರಿ 9 ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ಮೋದಿ ಚಾಲನೆ


ನವದೆಹಲಿ: 11 ರಾಜ್ಯಗಳ ಧಾರ್ಮಿಕ ಹಾಗೂ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ 9 ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಚಾಲನೆ ನೀಡಿದರು.



ವಿಡಿಯೊ ಕಾನ್ಫರೆನ್ಸ್ ಮೂಲಕ ರೈಲುಗಳಿಗೆ ಮೋದಿಯವರು ಹಸಿರು ನಿಶಾನೆ ತೋರಿದರು. ಬಳಿಕ ಮಾತನಾಡಿದ ಅವರು, 9 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ ನೀಡಲಾಗಿದ್ದು, ಈ ರೈಲುಗಳು ರಾಜ್ಯಗಳ ಸಂಪರ್ಕವನ್ನು ಗಮನಾರ್ಹವಾಗಿ ಸುಧಾರಿಸುತ್ತದೆ ಮತ್ತು ಭಾರತದಾದ್ಯಂತ ಪ್ರವಾಸೋದ್ಯಮವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

25 ವಂದೇ ಭಾರತ್ ರೈಲುಗಳು ಈಗಾಗಲೇ ಸಂಚರಿಸುತ್ತಿವೆ. ಈಗ ಅವುಗಳೊಂದಿಗೆ ಇನ್ನೂ 9 ರೈಲುಗಳನ್ನು ಸೇರಿಸಲಾಗಿದೆ. ವಂದೇ ಭಾರತ್ ರೈಲುಗಳ ಜನಪ್ರಿಯತೆ ನಿರಂತರವಾಗಿ ಹೆಚ್ಚುತ್ತಿದೆ. 1,11,00,000ಕ್ಕೂ ಹೆಚ್ಚು ಪ್ರಯಾಣಿಕರು ಈಗಾಗಲೇ ಈ ರೈಲುಗಳಲ್ಲಿ ಪ್ರಯಾಣಿಸಿದ್ದಾರೆಂದು ತಿಳಿಸಿದರು.

ಇದರ ವೇಗ ಮೂಲಸೌಕರ್ಯ ಅಭಿವೃದ್ಧಿಯು 140 ಕೋಟಿ ಭಾರತೀಯರ ತಲುಪುತ್ತಿದೆ. ಇಂದು ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಬಿಹಾರ, ಪಶ್ಚಿಮಬಂಗಾಳ, ಕೇರಳ, ಒಡಿಶಾ, ಜಾರ್ಖಂಡ್ ಮತ್ತು ಗುಜರಾತ್‌ನ ಜನರು ವಂದೇ ಭಾರತ್ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಈ ಹೊಸ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ದೇಶದ ಹೊಸ ಶಕ್ತಿಯನ್ನು ಬಿಂಬಿಸುತ್ತವೆ. ಕಳೆದ ಹಲವು ವರ್ಷಗಳಿಂದ ಅಭಿವೃದ್ಧಿ ಕಾಣದ ಹಲವಾರು ರೈಲು ನಿಲ್ದಾಣಗಳಿವೆ ಎಂಬುದು ನಮಗೆಲ್ಲರಿಗೂ ತಿಳಿದಿದೆ. ಈ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಕೆಲಸಗಳು ಮುಂದುವರೆದಿದೆ. 'ಆಜಾದಿ ಕಾ ಅಮೃತ್ ಕಾಲ'ದಲ್ಲಿ ಅಭಿವೃದ್ಧಿಪಡಿಸುವ ಅಮೃತ್ ಭಾರತ್ ಸ್ಟೇಷನ್ ಎಂದು ಕರೆಯಲಾಗುವುದು. 11 ರಾಜ್ಯಗಳಲ್ಲಿ ಸಂಪರ್ಕವನ್ನು ಸುಧಾರಿಸಲು ಸಹಾಯ ಮಾಡಲು ಒಂಬತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ ನೀಡಲಾಗಿದೆ ಎಂದು ಅವರು ಹೇಳಿದರು.



ಈ ಒಂಬತ್ತು ರೈಲುಗಳು ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಬಿಹಾರ್, ಪಶ್ಚಿಮಬಂಗಾಳ, ಕೇರಳ, ಒಡಿಸ್ಸಾ, ಜಾರ್ಖಂಡ್ ಹಾಗೂ ಗುಜರಾತ್ ನಡುವೆ ವೇಗದ ಸಂಪರ್ಕ ಒದಗಿಸಲಿದೆ. ಈ ರೈಲುಗಳು ಉದಯಪುರ–ಜೈಪುರ, ತಿರುನೆಲ್ವೇಲಿ–ಮಧುರೈ–ಚೆನ್ನೈ, ಹೈದರಾಬಾದ್–ಬೆಂಗಳೂರು, ವಿಜಯವಾಡ–ಚೆನ್ನೈ (ರೇಣಿಗುಂಟ ಮೂಲಕ), ಪಾಟ್ನಾ – ಹೌರಾ, ಕಾಸರಗೋಡು–ತಿರುವನಂತಪುರ, ರೂರ್ಕೆಲಾ–ಭುವನೇಶ್ವರ–ಪುರಿ, ರಾಂಚಿ–ಹೌರಾ ಹಾಗೂ ಜಾಮ್ನಗರ್–ಅಹ್ಮದಾಬಾದ್ ನಡುವೆ ಸಂಚರಿಸಲಿದೆ.

ಈ ರೈಲುಗಳು ದೇಶಾದ್ಯಂತ ಸಂಪರ್ಕವನ್ನು ಸುಧಾರಿಸುವ ಹಾಗೂ ರೈಲು ಪ್ರಯಾಣಿಕರಿಗೆ ವಿಶ್ವದರ್ಜೆಯ ಸೌಲಭ್ಯವನ್ನು ಒದಗಿಸುವ ಪ್ರಧಾನಿ ಅವರ ಕನಸನ್ನು ನನಸಾಗಿಸುವತ್ತ ಒಂದು ಹೆಜ್ಜೆಯಾಗಿದೆ. ವಂದೇ ಭಾರತ್ ರೈಲುಗಳು ತಮ್ಮ ಕಾರ್ಯಾಚರಣೆಯ ಮಾರ್ಗಗಳಲ್ಲಿ ಅತೀ ವೇಗದಿಂದ ಸಂಚರಿಸಲಿದೆ. ಅಲ್ಲದೆ, ಪ್ರಯಾಣಿಕರ ಸಾಕಷ್ಟು ಸಮಯವನ್ನು ಉಳಿತಾಯ ಮಾಡಲಿದೆ. ರೂರ್ಕೆಲಾ–ಭುವನೇಶ್ವರ–ಪುರಿ ಹಾಗೂ ಕಾಸರಗೋಡು–ತಿರುವನಂತಪುರದ ನಡುವೆ ಈಗ ಸಂಚರಿಸುತ್ತಿರುವ ವೇಗದ ರೈಲುಗಳಿಗೆ ಹೋಲಿಸಿದರೆ ವಂದೇ ಭಾರತ್ ರೈಲುಗಳು ಆಯಾ ಸ್ಥಳಗಳ ನಡುವಿನ ಪ್ರಯಾಣ ಸಮಯವನ್ನು ಸುಮಾರು 3 ಗಂಟೆಗಳಷ್ಟು ಕಡಿತಗೊಳಿಸಲಿದೆ. ಹೈದರಾಬಾದ್–ಬೆಂಗಳೂರು ನಡುವೆ 2.5 ಗಂಟೆಗಳಿಗಿಂತ ಅಧಿಕ, ತಿರುನೆಲ್ವೇಲಿ–ಮಧುರೈ–ಚೆನ್ನೈ ನಡುವೆ 2 ಗಂಟೆಗೂ ಅಧಿಕ ಸಮಯ ಉಳಿತಾಯವಾಗಲಿದೆ. ರಾಂಚಿ–ಹೌರಾ, ಪಾಟ್ನಾ–ಹೌರಾ ಹಾಗೂ ಜಾಮ್ನಗರ್–ಅಹ್ಮದಾಬಾದ್ ನಡುವಿನ ಪ್ರಯಾಣದ ಸಮಯ ಈ ಸ್ಥಳಗಳ ನಡುವೆ ಸದ್ಯ ಸಂಚಾರ ನಡೆಸುತ್ತಿರುವ ರೈಲುಗಳಿಗೆ ಹೋಲಿಸಿದರೆ ಸುಮಾರು 1 ಗಂಟೆ ಕಡಿಮೆಯಾಗಲಿದೆ. ಉದಯಪುರ–ಜೈಪುರ ನಡುವಿನ ಸಮಯ ಅರ್ಧ ಗಂಟೆ ಕಡಿಮೆಯಾಗಲಿದೆ. ರೂರ್ಕೆಲಾ–ಭುವನೇಶ್ವರ–ಪುರಿ ಹಾಗೂ ತಿರುನಲ್ವೇಲಿ–ಮಧುರೈ–ಚೆನ್ನೈ ರೈಲುಗಳು ಪುರಿ ಹಾಗೂ ಮಧುರೈಯ ಪ್ರಮುಖ ಧಾರ್ಮಿಕ ಪಟ್ಟಣಗಳನ್ನು ಸಂಪರ್ಕಿಸಲಿದೆ. ಇದಲ್ಲದೆ, ವಿಜಯವಾಡ–ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್ ರೇಣಿಗುಂಟಾ ಮಾರ್ಗವಾಗಿ ಪ್ರಮುಖ ಯಾತ್ರಾಸ್ಥಳವಾದ ತಿರುಪತಿಗೆ ಸಂಪರ್ಕ ಕಲ್ಪಿಸುತ್ತದೆ.


ಇಂದು ಗಜಪಡೆಯ 2ನೇ ತಂಡದ 5 ಆನೆಗಳು ಅರಮನೆಗೆ ಆಗಮನ

ಮೈಸೂರು,ಸೆ.24(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದ ಎರಡನೇ ತಂಡದ 5 ಆನೆಗಳು ಸೋಮವಾರ(ಸೆ.25) ಮಧ್ಯಾಹ್ನದ ವೇಳೆಗೆ ಮೈಸೂರು ಅರಮನೆ ಆವರಣ ಪ್ರವೇಶಿಸಲಿವೆ.

ಬಂಡೀಪುರದ ರಾಂಪುರ, ದುಬಾರೆ ಹಾಗೂ ದೊಡ್ಡಹರವೆ ಕ್ಯಾಂಪ್‌ಗಳಿಂದ ಈ ಆನೆಗಳು ಆಗಮಿಸಲಿದ್ದು, ಮೂರು ಕ್ಯಾಂಪ್‌ಗಳು ಬೇರೆ ಬೇರೆ ದಿಕ್ಕಿನಲ್ಲಿರುವುದರಿಂದ ಮಧ್ಯಾಹ್ನ 2 ಗಂಟೆ ವೇಳೆಗೆ ಎಲ್ಲಾ 5 ಆನೆಗಳು ಪ್ರತ್ಯೇಕವಾಗಿ ಕರೆತರಲಾಗುತ್ತದೆ. 2ನೇ ತಂಡದಲ್ಲಿ ಬಂಡೀಪುರದ ರಾಂಪುರ ಕ್ಯಾಂಪ್‌ನಿಂದ ರೋಹಿತ(21), ಹಿರಣ್ಯ (46), ದೊಡ್ಡ ಹರವೆ ಕ್ಯಾಂಪ್‌ನಿಂದ ಲಕ್ಷ್ಮಿ(52), ದುಬಾರೆ ಕ್ಯಾಂಪ್‌ನಿಂದ ಸುಗ್ರೀವ (41) ಹಾಗೂ ಪ್ರಶಾಂತ (50) ಆನೆಗಳು ಆಗಮಿಸಲಿವೆ. 2ನೇ ತಂಡದಲ್ಲಿ ಆಗಮಿಸುತ್ತಿರುವ 5 ಆನೆಗಳಲ್ಲಿ ರೋಹಿತ, ಹಿರಣ್ಯ, ದೊಡ್ಡಹರವೆ ಕ್ಯಾಂಪ್‌ನಿಂದ ಲಕ್ಷ್ಮಿ ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸುವ ಹೊಸ ಆನೆಗಳಾಗಿವೆ. ಎಲ್ಲಾ ಆನೆಗಳು ಅರಮನೆಗೆ ಆಗಮಿಸಿದ ಬಳಿಕ ಸಾಂಪ್ರದಾಯಿಕ ಪೂಜೆ ನೆರವೇರಿಸಲಾಗುತ್ತದೆ.

ಇತ್ತ ಕುಡಿಯುವ ನೀರಿಗೆ ಆತಂಕ; ಅತ್ತ ಬೆಳೆಗೆ ನೀರು ಬಿಡುವ ಧಾವಂತ!

ಮೈಸೂರು, ಸೆ.24(ಬಿಎಲ್‌ಯು) ಇತ್ತ ಮಂಡ್ಯದ ಕೆಆರ್‌ಎಸ್ ಹಾಗೂ ಮೈಸೂರಿನ ಕಬಿನಿ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿದಿರುವ ಈಗಿನ ಪರಿಸ್ಥಿತಿಯಲ್ಲಿ ಮುಂದೆ ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಆತಂಕ ಎದುರಾಗಿದೆ.



ಅತ್ತ ತಮಿಳುನಾಡಿನ ಮೆಟ್ಟೂರು ಜಲಾಶಯದಿಂದ ಬೆಳೆಗೆ 6,500 ಕ್ಯುಸೆಕ್ ನೀರು ಬಿಡಲಾಗುತ್ತಿದೆ. ಕಾವೇರಿ ಜಲಾನಯನ ಪ್ರದೇಶದ ಕೆಆರ್‌ಎಸ್, ಕಬಿನಿ ಸೇರಿದಂತೆ ನಾಲ್ಕು ಜಲಾಶಯಗಳಲ್ಲಿ ಡೆಡ್ ಸ್ಟೋರೇಜ್ ಬಿಟ್ಟರೆ ಉಳಿಯುವ ನೀರು ಕುಡಿಯಲು ಸಾಕಾಗುವುದು ಅನುಮಾನ. ಆದರೆ ನಮ್ಮಿಂದ ನೀರು ಪಡೆದು ತಮಿಳುನಾಡಿನಲ್ಲಿ ಬೆಳೆಯನ್ನು ಬೆಳೆಯಲಾಗುತ್ತಿದೆ. ಮೆಟ್ಟೂರು ಜಲಾಶಯದ ಗರಿಷ್ಠ 120 ಅಡಿಗಳಾಗಿದ್ದು, ಇಂದಿನ ಮಟ್ಟ 37.78 ಅಡಿಗಳಾಗಿದೆ. ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಮೆಟ್ಟೂರು ಜಲಾಶಯಕ್ಕೆ 4,244 ಕ್ಯುಸೆಕ್ ನೀರು ಹರಿದು ಹೋಗುತ್ತಿದೆ. ಹಾಗಾಗಿ ಜಲಾಶಯದಿಂದ ಬೆಳೆಗೆ 6,500 ಕ್ಯುಸೆಕ್ ನೀರು ಹರಿಸಲಾಗುತ್ತಿದೆ. ಮೆಟ್ಟೂರಿನಲ್ಲಿ ಶೇಖರಣೆಯಾಗುವ ನೀರನ್ನು ಭವಾನಿ ಸಾಗರಕ್ಕೆ ಬಿಡಲಿದ್ದು, ಅಲ್ಲಿ ಕೂಡ ಕಾವೇರಿ ನದಿ ನೀರು ಶೇಖರಣೆಯಾಗುತ್ತದೆ. ತಮಿಳುನಾಡಿನ ಈರೋಡ್ ಜಿಲ್ಲೆಯ ಭವಾನಿ ಸಾಗರ ಅಣೆಕಟ್ಟೆಯ ಗರಿಷ್ಠ ಮಟ್ಟ 105 ಅಡಿಗಳಾಗಿದ್ದು, ಇಂದಿನ ಮಟ್ಟ 73.90 ಅಡಿಗಳಾಗಿವೆ. ಇಲ್ಲಿ ಕೂಡ ಹೆಚ್ಚಿನ ಪ್ರಮಾಣದಲ್ಲಿ ಕಾವೇರಿ ನದಿ ನೀರು ಶೇಖರಣೆಯಾಗಿದ್ದು, ಭವಾನಿ ಸಾಗರ ಅಣೆಕಟ್ಟಿನಿಂದ ನಾಲೆಗಳ ಮೂಲಕ ಬೆಳೆಗೆ ನೀರು ಬಿಡಲಾಗುತ್ತಿದೆ. ಒಟ್ಟಾರೆ ಕರ್ನಾಟಕದಲ್ಲಿ ಕುಡಿಯಲೂ ನೀರಿಲ್ಲದ ಆತಂಕ ಪರಿಸ್ಥಿತಿಯಲ್ಲಿ ತಮಿಳುನಾಡಿನಲ್ಲಿ ಬೆಳೆ ಬೆಳೆಯಲಾಗುತ್ತಿದೆ. ಈ ವಾಸ್ತವ ಪರಿಸ್ಥಿತಿ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ಕಾರ್ಯ ಮೊದಲು ಆಗಬೇಕಿದೆ.

ನೀರು ಹರಿಸುವಂತೆ ಒತ್ತಾಯಿಸಿ ತಿರುಚ್ಚಿ ರೈತರ ಪ್ರತಿಭಟನೆ

ತಿರುಚ್ಚಿ, ಸೆ.24– ಕರ್ನಾಟಕದೊಂದಿಗೆ ನಡೆಯುತ್ತಿರುವ ಕಾವೇರಿ ನದಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ತಿರುಚ್ಚಿಯಲ್ಲಿ ರೈತರ ಗುಂಪೊಂದು ಭಾನುವಾರ ಪ್ರತಿಭಟನೆ ನಡೆಸಿತು. ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ರೈತರು ಒತ್ತಾಯಿಸಿದ್ದಾರೆ.

ಇದೇ ವೇಳೆ ಕರ್ನಾಟಕದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಬಿಡುವುದನ್ನು ಕೂಡಲೇ ನಿಲ್ಲಿಸುವಂತೆ ಆಗ್ರಹಿಸಿ ಮಂಡ್ಯದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಸೆ.13ರಿಂದ ತಮಿಳುನಾಡಿಗೆ 15 ದಿನಗಳ ಕಾಲ ಪ್ರತಿದಿನ 5000 ಕ್ಯುಸೆಕ್ ನೀರನ್ನು ಬಿಡುಗಡೆ ಮಾಡುವಂತೆ ಆದೇಶಿಸಿದಾಗಿನಿಂದ ಕರ್ನಾಟಕದಾದ್ಯಂತ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡು ನಡುವಿನ ಕಾವೇರಿ ಜಲವಿವಾದದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದ ನ್ಯಾಯಮೂರ್ತಿಗಳಾದ ಬಿಆರ್ ಗವಾಯಿ, ಪಿಎಸ್ ನರಸಿಂಹ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠವು, ಸಿಡಬ್ಲ್ಯುಎಂಎ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಸಭೆಗಳನ್ನು ನಡೆಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದೆ. ಕಾವೇರಿ ನೀರನ್ನು ದಿನಕ್ಕೆ ಸದ್ಯ ಹರಿಸುತ್ತಿರುವ 5,000ರಿಂದ 7,200 ಕ್ಯುಸೆಕ್‌ಗೆ ಹೆಚ್ಚಿಸುವಂತೆ ಸೂಚಿಸಲು ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ನ್ಯಾಯಾಲಯ ನಿರಾಕರಿಸಿದೆ. ಕರ್ನಾಟಕದಿಂದ ನದಿ ನೀರು ಬಿಡುಗಡೆಗೆ ಹೊಸ ನಿರ್ದೇಶನ ನೀಡುವಂತೆ ಕೋರಿರುವ ತಮಿಳುನಾಡು, ನೆರೆಯ ರಾಜ್ಯವು ತನ್ನ ನಿಲುವನ್ನು ಬದಲಾಯಿಸಿದೆ ಮತ್ತು ಈ ಹಿಂದೆ ಒಪ್ಪಿಕೊಂಡಿದ್ದಕ್ಕಿಂತ ಕಡಿಮೆ ಪ್ರಮಾಣದ ನೀರನ್ನು ಬಿಡುಗಡೆ ಮಾಡಿದೆ ಎಂದು ದೂರಿದೆ.

ಮಳೆ ಕೊರತೆ ವೇಳೆ ಶಾಶ್ವತ ಸಂಕಷ್ಟ ಸೂತ್ರ ರೂಪಿಸಲು ತಜ್ಞರ ಸಮಿತಿ ರಚಿಸಿ

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಿಗೆ ಎಂಎಲ್‌ಸಿ ದಿನೇಶ್ ಗೂಳಿಗೌಡ ಪತ್ರ

- ಹೊರ ರಾಜ್ಯದವರು ತಜ್ಞರ ಸಮಿತಿಯಲ್ಲಿರಬೇಕು
- ಸಮಿತಿ ಖುದ್ದು ಪರಿಶೀಲಿಸಿ ನೈಜತೆ ಅರಿಯಬೇಕು
- ಶಾಶ್ವತ ಸಂಕಷ್ಟ ಸೂತ್ರದಿಂದ ಭವಿಷ್ಯದಲ್ಲಿ ಸಮಸ್ಯೆ ಉದ್ಭವಿಸಲ್ಲ

ಮೈಸೂರು, ಸೆ.24(ಬಿಎಲ್‌ಯು)– ಮಳೆ ಕೊರತೆ ಸಂದರ್ಭದಲ್ಲಿ ಕಾವೇರಿ ನದಿ ನೀರಿನ ಹಂಚಿಕೆಗೆ ಶಾಶ್ವತ ಸಂಕಷ್ಟ ಸೂತ್ರ ರೂಪಿಸಲು ತಮಿಳುನಾಡು, ಕರ್ನಾಟಕ ಸೇರಿದಂತೆ ನಾಲ್ಕು ರಾಜ್ಯಗಳ ಹೊರತಾಗಿ ಬೇರೆ ರಾಜ್ಯಗಳ ನೀರಾವರಿ, ಕೃಷಿ ಹಾಗೂ ಹೈಡ್ರಾಲಜಿ ತಜ್ಞರ ಸಮಿತಿ ರಚಿಸಬೇಕು ಎಂದು ಮಂಡ್ಯ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.



ಶಾಶ್ವತ ಸಂಕಷ್ಟ ಸೂತ್ರ ರೂಪಿಸಲು ತಜ್ಞರ ಸಮಿತಿ ರಚನೆಯ ಮಹತ್ವವನ್ನು ಪ್ರಾಧಿಕಾರಕ್ಕೆ ಅವರು ಮನವರಿಕೆ ಮಾಡಿದ್ದಾರೆ. ಪ್ರಾಧಿಕಾರವು ಶಾಶ್ವತ ಸಂಕಷ್ಟ ಸೂತ್ರ ರೂಪಿಸುವ ಮುನ್ನ ತಮಿಳುನಾಡು, ಕರ್ನಾಟಕ, ಕೇರಳ ಹಾಗೂ ಪಾಂಡಿಚೇರಿ ರಾಜ್ಯಗಳ ಪ್ರತಿನಿಧಿಗಳನ್ನು ಹೊರತುಪಡಿಸಿ ಬೇರೆ ರಾಜ್ಯಗಳ ನೀರಾವರಿ, ಕೃಷಿ, ಕಾನೂನು ಸೇರಿದಂತೆ ಹೈಡ್ರಾಲಜಿ ತಜ್ಞರ ಸಮಿತಿ ರಚಿಸಬೇಕು. ವಾಸ್ತವ ಚಿತ್ರಣ ಅರಿಯಲು ಹಾಗೂ ಅಣೆಕಟ್ಟುಗಳ ನೀರಿನ ಲಭ್ಯತೆಯ ವಾಸ್ತವ ನೆಲೆಗಟ್ಟಿನಲ್ಲಿ ಪರಿಶೀಲನೆ ನಡೆಸಲು ಸಮಿತಿಯನ್ನು ಖುದ್ದು ಕಳುಹಿಸಬೇಕು ಎಂದು ಒತ್ತಾಯಿಸಿದ್ದಾರೆ.



ಕಾವೇರಿ ನ್ಯಾಯಾಧೀಕರಣದ ಐತೀರ್ಪು ಹಾಗೂ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಮಳೆ ಅಭಾವ ತಲೆದೋರಿದ ಸಂಕಷ್ಟದ ಸಂದರ್ಭದಲ್ಲಿ ಶಾಶ್ವತ ಸೂತ್ರ ರಚಿಸಿ ಪ್ರಸ್ತುತ ವರ್ಷದ ನೀರಿನ ಹಂಚಿಕೆ ಮಾಡಬೇಕಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಪ್ರಾಧಿಕಾರದ ಆದೇಶದಂತೆ ಈಗಾಗಲೇ ತಮಿಳುನಾಡಿಗೆ ಸಾಕಷ್ಟು ನೀರು ಹರಿಸಲಾಗಿದೆ. ಇದರಿಂದ ಬೆಂಗಳೂರು, ಮೈಸೂರು ಸೇರಿದಂತೆ ಇತರೆ ನಗರಗಳಿಗೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ. ಈ ವಿಚಾರವನ್ನು ತಾವು ಗಂಭೀರವಾಗಿ ಪರಿಗಣಿಸಬೇಕು ಎಂದು ದಿನೇಶ್ ಗೂಳಿಗೌಡ ಪ್ರಾಧಿಕಾರದ ಅಧ್ಯಕ್ಷರಿಗೆ ಒತ್ತಿ ಹೇಳಿದ್ದಾರೆ. ಈ ಭಾಗದ 18.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತರು ಹಲವು ಬೆಳೆಗಳನ್ನು ಬೆಳೆದು ಬದುಕು ಕಟ್ಟಿಕೊಂಡಿದ್ದಾರೆ. ಆದರೆ ಮಳೆ ಇಲ್ಲದೆ ಅಣೆಕಟ್ಟು ಬರಿದಾಗಿರುವ ಪರಿಸ್ಥಿತಿಯಲ್ಲಿ ಇಲ್ಲಿನ ರೈತರ ಪಾಡೇನು, ಇಲ್ಲಿನ ಜನರ ಜೀವನ ನಿರ್ವಹಣೆ ಹೇಗೆ ಎಂಬ ಪ್ರಶ್ನೆ ಎದುರಾಗಿದೆ ಎಂದು ಹೇಳಿದ್ದಾರೆ.

ಈ ವರ್ಷದ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಕಳೆದ 123 ವರ್ಷಗಳಲ್ಲಿ ಎಂದೂ ಕಾಣದ ಅತ್ಯಂತ ಕಡಿಮೆ ಮಳೆ ಕೊರತೆ ಎದುರಾಗಿದೆ. ಇಂತಹ ಸಂದರ್ಭದಲ್ಲಿ ನೀರು ಬಿಡುವುದು ಕಷ್ಟಕರವಾಗಿದೆ. ಈ ಹಿನ್ನೆಲೆ ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಎರಡು ರಾಜ್ಯಗಳ ಬೆಳೆಯ ಪ್ರಮಾಣದ ನೈಜ ಸ್ಥಿತಿಯನ್ನು ತಜ್ಞರ ಸಮಿತಿ ಅರಿಯಬೇಕು ಎಂದು ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

ಮಳೆ ಕೊರತೆಯಾಗಿ ನೀರಿನ ಲಭ್ಯತೆ ಇಳಿಮುಖವಾದ ವರ್ಷಗಳಲ್ಲಿ ಅನುಸರಿಸಬೇಕಾದ ಸಂಕಷ್ಟ ಸೂತ್ರವನ್ನು ಮುನ್ನೆಚ್ಚರಿಕೆಯಿಂದ ರಚಿಸಿದರೆ ಭವಿಷ್ಯದಲ್ಲಿ ತಲೆದೋರುವ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬಹುದು. ಈ ಕಾರಣದಿಂದ ಶಾಶ್ವತ ಸಂಕಷ್ಟ ಸೂತ್ರ ರಚಿಸಲು ತಜ್ಞರ ಸಮಿತಿ ಅತ್ಯವಶ್ಯ ಎಂದು ದಿನೇಶ್ ಗೂಳಿಗೌಡ ಪ್ರಾಧಿಕಾರದ ಅಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ.